ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 2 ಗುರುವಾರ 2022

ಸಂಪುಟ: 43 | ಸಂಚಿಕೆ: 47 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ 135 ರೂ. ಇಳಿಕೆ

ನವದೆಹಲಿ: 19 ಕೆಜಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಪ್ರತಿ ಸಿಲಿಂಡರ್‌ಗೆ 135 ರೂ. ಇಳಿಕೆಯಾಗಿದೆ. ಮೇ ಮೊದಲ ವಾರದಲ್ಲಿ 50 ರೂ. ಹೆಚ್ಚಿಸಲಾಗಿತ್ತು. ಮೇ 1ರಂದು 19 ಕಿಲೋಗ್ರಾಂಗಳ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 102.50 ರೂ. ಹೆಚ್ಚಿಸಿ, ಪ್ರತಿ ಸಿಲಿಂಡರ್ ಬೆಲೆ 2355.50 ರೂ. ಆಗಿತ್ತು. ಆಯಿಲ್ ಮಾರ್ಕೆಟಿಂಗ್ ಕಂಪನಿಗಳು ಉಜ್ವಲ ದಿವಸ್ ವೇಳೆ 5000ಕ್ಕೂ ಹೆಚ್ಚು LPG ಪಂಚಾಯತ್‌ಗಳನ್ನು ಆಯೋಜಿಸಿವೆ, ಅಲ್ಲಿ ಅನುಭವ ಹಂಚಿಕೆಯ ಹೊರತಾಗಿ, LPG ಸುರಕ್ಷಿತ, ನಿರಂತರ ಬಳಕೆಯನ್ನು ಗುರಿಯಾಗಿಟ್ಟುಕೊಂಡು, ಗ್ರಾಹಕರ ದಾಖಲಾತಿಯನ್ನು ಗರಿಷ್ಠಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಯಿತು.

ಮಠಾಧೀಶರು, ಸಾಹಿತಿಗಳು, ಕನ್ನಡಪರ ಸಂಘಟನೆಗಳ ಅಪಸ್ವರಕ್ಕೆ ಮಣಿದ ಸರ್ಕಾರ


ಪಠ್ಯ ಪರಿಷ್ಕರಣೆ ಮಾರ್ಪಾಡಿಗೆ ಚಿಂತನೆ

ಇಂದು ಶಿಕ್ಷಣ ಸಚಿವರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ವರದಿ ಸಲ್ಲಿಕೆ

■ ವರದಿ ಕೈಸೇರಿದ ನಂತರ ಮುಂದಿನ ಕ್ರಮ: ಸಿಎಂ ■ ಸಾಹಿತಿಗಳು, ಸ್ವಾಮೀಜಿಗಳ ಅಭಿಪ್ರಾಯ ಪರಿಗಣನೆ ■ ಕುವೆಂಪು, ಬಸವಣ್ಣನವರ ಬಗ್ಗೆ ಅವಹೇಳನ ಹಿನ್ನೆಲೆಯಲ್ಲಿ ವ್ಯಾಪಕ ಆಕ್ರೋಶ

ಬೆಂಗಳೂರು, ಜೂ.1 (ಕೆಎಂಶಿ)– ಮಠಾಧೀಶರು, ಕನ್ನಡಪರ ಸಂಘಟನೆಗಳು, ಸಾಹಿತಿಗಳು ಪಠ್ಯಪುಸ್ತಕ ಪರಿಷ್ಕರಣೆಗೆ ಅಪಸ್ವರ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸರ್ಕಾರ ಎಚ್ಚೆತ್ತುಕೊಂಡು ಕೆಲವು ಪಠ್ಯ ಪರಿಷ್ಕರಣೆಯಲ್ಲಿ ಮಾರ್ಪಾಡಿಗೆ ಮುಂದಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು ನಾಳೆ (ಗುರುವಾರ) ತಮಗೆ ನೀಡುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ನಾಗೇಶ್ ಅವರಿಗೆ ಸೂಚಿಸಿದ್ದಾರೆ.



ಕುವೆಂಪು ಹಾಗೂ ಬಸವಣ್ಣನವರ ಬಗ್ಗೆ ಪರಿಷ್ಕರಣೆ ಸಂಬಂಧ ವ್ಯಾಪಕ ಆಕ್ರೋಶಕ್ಕೆ ಕಾರಣವಾದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ವರದಿ ಕೇಳಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ಪಠ್ಯಪುಸ್ತಕ ಪರಿಷ್ಕರಣೆಯ ವರದಿ ಪರಿಶೀಲನೆ ನಂತರ ಶೀಘ್ರದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಪಠ್ಯಪುಸ್ತಕದ ಪರಿಷ್ಕರಣೆಗೆ ಸಂಬಂಧಿಸಿದಂತೆ, ಈಗಾಗಲೇ ಪಠ್ಯದಲ್ಲಿರುವ ತಮ್ಮ ಪಾಠಗಳನ್ನು ತೆಗೆಯುವಂತೆ ಕೆಲ ಸಾಹಿತಿಗಳು ಹೇಳುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಪಠ್ಯಪುಸ್ತಕ ಪರಿಷ್ಕರಣೆಯ ಬಗ್ಗೆ ಸಮಗ್ರ ವರದಿಯನ್ನು ಕೇಳಲಾಗಿದೆ. ಸ್ವಾಮೀಜಿಗಳು ಹಾಗೂ ಇತರರ ಅಭಿಪ್ರಾಯಗಳನ್ನು ಪರಿಗಣಿಸಲಾಗುವುದು. ಈ ಎಲ್ಲ ವಿಚಾರಗಳ ಬಗ್ಗೆ ಸಮಗ್ರ ವರದಿ ಹಾಗೂ ವಾಸ್ತವಾಂಶವನ್ನು ತಿಳಿಸುವಂತೆ ಶಿಕ್ಷಣ ಸಚಿವರಿಗೆ ಸೂಚನೆ ನೀಡಲಾಗಿದೆ. ಈ ಬಗ್ಗೆ ವರದಿ ಪಡೆದು, ಪರಿಶೀಲಿಸಿದ ನಂತರ ಸೂಕ್ತ ತೀರ್ಮಾನವನ್ನು ಕೈಗೊಳ್ಳಲಾಗುವುದು. ನಾಳೆ (ಗುರುವಾರ) ವರದಿ ದೊರೆಯಲಿದ್ದು, ಪಠ್ಯಗಳನ್ನು ವಾಪಸ್ಸು ಪಡೆಯುತ್ತೇವೆ ಎನ್ನುವ ಸಾಹಿತಿಗಳೊಂದಿಗೆ ಈ ಬಗ್ಗೆ ಚರ್ಚಿಸಲಾಗುವುದು ಎಂದರು.

ಅಧ್ಯಕ್ಷರಾಗಿರುವ ವ್ಯಕ್ತಿ ಮೆಟ್ರೋದಲ್ಲಿ ಕನ್ನಡ ಬಳಕೆ ಮತ್ತು ಹಿಂದಿ ಹೇರಿಕೆ ವಿಚಾರ ಸಂದರ್ಭದಲ್ಲಿ 'ನನ್ನ ಮೇಲೆ ಹೇರಿಕೆಯಾದ ಮೊದಲ ಭಾಷೆ ಕನ್ನಡ' ಎಂದಿದ್ದಾರೆ. ಅಂತಹ ವ್ಯಕ್ತಿಯನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದರ ಜತೆಗೆ, ಕನ್ನಡದ ಬಾವುಟದ ಬಗ್ಗೆ ▶ 8ನೇ ಪುಟಕ್ಕೆ

> ಸಮಿತಿ ಹೊಸದಾಗಿ ಸೇರಿಸಿರುವ 10 ಬರಹದಲ್ಲಿ 8 ಬರಹ ಒಂದೇ ಸಮುದಾಯಕ್ಕೆ ಸೇರಿದೆ. ಕೆ.ಬಿ ಹೆಡಗೆವಾರ್, ಗಜಾನನ ಶರ್ಮಾ, ಪರಮೇಶ್ವರ್ ಭಟ್, ಗಣೇಶ್ ಶತಾವದಾನಿ, ಬನ್ನಂಜೆ ಗೋವಿಂದಾಚಾರ್ ಹಾಗೂ ಚಿದಾನಂದ ಅವರ ಬರಹ ಸೇರಿಸಲಾಗಿದೆ. ಇನ್ನು ಹಿಂದುಳಿದ ವರ್ಗಕ್ಕೆ ಸೇರಿದ ಪಿ.ಲಂಕೇಶ್, ಅರವಿಂದ ಮಾಲಗತ್ತಿ, ಸಾರಾ ಅಬುಬಕರ್, ಎಲ್. ಬಸವರಾಜು, ಎನ್.ನೀಲಾ, ಬಿ.ಟಿ.ಲಲಿತಾ ನಾಯಕ್ ಅವರ ಬರಹ ಕೈಬಿಟ್ಟಿದ್ದಾರೆ ಎಂಬ ಮಾತುಗಳು ಕೇಳಿ ಬಂದಿವೆ. ವ್ಯಾಪಕ ಟೀಕೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ವರದಿ ಪಡೆದು ಪರಿಷ್ಕರಣೆಗೆ ಮುಂದಾಗಿದ್ದಾರೆ.

> ಇದುವರೆಗೂ ಈ ಪಠ್ಯ ಪುಸ್ತಕ ಸಮಿತಿ ನೇಮಕ ವಿಚಾರದಲ್ಲಿ ಯಾವುದೇ ಗೊಂದಲ ಆಗಿರಲಿಲ್ಲ. ಕನ್ನಡದ ಬಗ್ಗೆ ಇರುವ ಅಭಿಮಾನ, ಬಾವುಟದ ಬಗ್ಗೆ ಸಮಿತಿಯ ಅಧ್ಯಕ್ಷರು ಕೊಟ್ಟಿರುವ ಹೇಳಿಕೆಗಳು, ಸಾಹಿತಿಗಳ ಬಗ್ಗೆ ಹಾಗೂ ರಾಷ್ಟ್ರಕವಿ ಬಗ್ಗೆ ಮಾಡಿರುವ ಉದ್ಧಟತನ ಹಾಗೂ ಕೆಟ್ಟ ಅಭಿಪ್ರಾಯ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾವಣೆ

ಎಲ್ಲಾ ನಾಮಪತ್ರಗಳು ಕ್ರಮಬದ್ಧ

ಕಾಂಗ್ರೆಸ್‌ನ 2ನೇ ಅಭ್ಯರ್ಥಿ ಮನ್ಸೂರ್ ಖಾನ್ ನಾಮಪತ್ರ ವಾಪಸ್ ಸಾಧ್ಯತೆ

ಬೆಂಗಳೂರು, ಜೂ.1 (ಕೆಎಂಶಿ)–ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಸಲ್ಲಿಕೆಯಾಗಿರುವ ಆರು ನಾಮಪತ್ರಗಳು ಕ್ರಮಬದ್ಧವಾಗಿವೆ.

ನಾಮಪತ್ರಗಳು ಅಂಗೀಕೃತಗೊಳ್ಳುತ್ತಿದ್ದಂತೆ ಕಾಂಗ್ರೆಸ್‌ನ 2ನೇ ಅಭ್ಯರ್ಥಿ ಮನ್ಸೂರ್ ಖಾನ್ ತಮ್ಮ ನಾಮಪತ್ರವನ್ನು ಹಿಂತೆಗೆಯುವ ಸಾಧ್ಯತೆಗಳು ಕಂಡು ಬಂದಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ತಮ್ಮ ಪಕ್ಷದ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಗೆಲುವಿಗೆ ಸಹಕಾರ ನೀಡುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಅವರ ಜೊತೆ 2 ಸುತ್ತಿನ ಮಾತುಕತೆ ನಡೆಸಿದ ನಂತರ ಮನ್ಸೂರ್ ಕಣದಿಂದ ಹಿಂದೆ ಸರಿಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

> ● ಸೋನಿಯಾ ಗಾಂಧಿ ಜೊತೆ ಹೆಚ್.ಡಿ.ದೇವೇಗೌಡರ ಎರಡು ಸುತ್ತಿನ ಮಾತುಕತೆ ಫಲಪ್ರದ
>
> ● ಕೆ.ಸಿ.ವೇಣುಗೋಪಾಲ್, ಕುಮಾರಸ್ವಾಮಿ ಮಾತುಕತೆ

ಬಿಜೆಪಿಗೆ 3ನೇ ಸ್ಥಾನವನ್ನು ಕೊಡಿಸಲು ಕಾಂಗ್ರೆಸ್ ಸಹಕಾರ ಮಾಡಬಾರದೆಂದು ಗೌಡರು ಕರ್ನಾಟಕದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಸೋನಿಯಾ ಅವರಿಗೆ ತಿಳಿಸಿದ ನಂತರ ಈ ಬೆಳವಣಿಗೆಯಾಗಿದೆ. ಗೌಡರು– ಸೋನಿಯಾಗಾಂಧಿ ಮಾತುಕತೆಯ ನಂತರ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿಯವರನ್ನು ಸಂಪರ್ಕಿಸಿ, ಮಾತುಕತೆ ನಡೆಸಿದ್ದಾರೆ. ಈ ಬೆಳವಣಿಗೆಯ ಬೆನ್ನಲ್ಲೇ ದೇವೇಗೌಡರ ಸೂಚನೆಯಂತೆ ಪರಿಷತ್ ಸದಸ್ಯರಾದ ಟಿ.ಎ.ಶರವಣ ಮತ್ತು ಬಿ.ಎಂ.ಫಾರೂಕ್ ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ತಮ್ಮ ಅಭ್ಯರ್ಥಿ ರೆಡ್ಡಿ ಅವರಿಗೆ ಸಹಕಾರ ನೀಡುವಂತೆ ಕೋರಿದರು. ಜೆಡಿಎಸ್, ಬಿಜೆಪಿ ಬಿ–ಟೀಂ ಎಂದು ಬಿಂಬಿಸಲು ಸಿದ್ದರಾಮಯ್ಯ ತಮ್ಮ ಪಕ್ಷಕ್ಕೆ 2ನೇ ಸ್ಥಾನ ಗೆಲ್ಲಲು ಸಾಧ್ಯವಿಲ್ಲವೆಂದು ಮನಗಂಡಿದ್ದರೂ, ▶ 8ನೇ ಪುಟಕ್ಕೆ

ಬ್ರಿಜೇಶ್ ಕಾಳಪ್ಪ ಕಾಂಗ್ರೆಸ್‌ಗೆ ಗುಡ್ ಬೈ

ಮೈಸೂರು, ಜೂ.1–ಸುಪ್ರೀಂಕೋರ್ಟ್ ಹಿರಿಯ ವಕೀಲರಾದ ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ ಅವರು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡು ಪಕ್ಷ ತೊರೆಯುತ್ತಿರುವ ಪ್ರಮುಖರ ಸಾಲಿಗೆ ಇವರೂ ಸೇರಿದ್ದು, ಇದು ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆ ಎನ್ನಲಾಗುತ್ತಿದೆ.



ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಬರೆದಿರುವ ರಾಜೀನಾಮೆ ಪತ್ರವನ್ನು ಬ್ರಿಜೇಶ್ ಕಾಳಪ್ಪ ಯಥಾವತ್ತಾಗಿ ಬುಧವಾರ ಬೆಳಗ್ಗೆ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. 'ಪಕ್ಷದಲ್ಲಿ ನೀವು ನನಗೆ ಹಲವಾರು ಅವಕಾಶಗಳನ್ನು ಒದಗಿಸಿಕೊಟ್ಟಿರುವುದಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತಿದ್ದೇನೆ. ನಾನು ರಾಷ್ಟ್ರದ ಎಲ್ಲಾ ಭಾಗಗಳಲ್ಲೂ ಪರಿಚಿತ ಮುಖವೆಂದು ಗುರುತಿಸಲ್ಪಟ್ಟಿದ್ದರೆ ಅದು ನಿಮ್ಮ ಪ್ರೋತ್ಸಾಹದಿಂದ. ನಿಮ್ಮ ಆಶೀರ್ವಾದದಿಂದ ನಾನು ಕರ್ನಾಟಕ ಸರ್ಕಾರದ ಕಾನೂನು ಸಲಹೆಗಾರರಾಗಿ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನಗಳೊಂದಿಗೆ ನೇಮಕಗೊಂಡಿದ್ದೆ. ಅದಕ್ಕಾಗಿ ಧನ್ಯವಾದಗಳು. 2013 ರಿಂದಲೂ ಹಿಂದಿ, ಇಂಗ್ಲಿಷ್ ಮತ್ತು ಕನ್ನಡ ಚಾನಲ್‌ಗಳಲ್ಲಿ ಪಕ್ಷವನ್ನು ಪ್ರತಿನಿಧಿಸುತ್ತಿದ್ದೇನೆ. ಸುಮಾರು ದಶಕ ಕಾಲ ನಾನು 6497 ಚರ್ಚೆಗಳಲ್ಲಿ ಭಾಗವಹಿಸಿದ್ದೇನೆ. ಇದಲ್ಲದೇ ಪಕ್ಷ ನನಗೆ ರಾಜಕೀಯ ಕೆಲಸಗಳನ್ನು ನಿಯಮಿತವಾಗಿ ನೀಡುತ್ತಿದ್ದು, ಅದನ್ನು ನನ್ನ ತೃಪ್ತಿಗೆ ತಕ್ಕಂತೆ ನಿರ್ವಹಿಸಿದ್ದೇನೆ. ಟಿ.ವಿ., ಡಿಬೇಟ್‌ಗಳಿಗೆ ಸಂಬಂಧಿಸಿದಂತೆ ▶ 8ನೇ ಪುಟಕ್ಕೆ

ನ್ಯಾಷನಲ್ ಹೆರಾಲ್ಡ್ ಪ್ರಕರಣ ಸೋನಿಯಾ ಗಾಂಧಿ, ರಾಹುಲ್‌ಗೆ ಇಡಿ ಸಮನ್ಸ್

ನವದೆಹಲಿ: ನ್ಯಾಷನಲ್ ಹೆರಾಲ್ಡ್‌ಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೂನ್ 8 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಜಾರಿ ನಿರ್ದೇಶನಾಲಯವು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಅವರ ಪುತ್ರ ರಾಹುಲ್ ಗಾಂಧಿಗೆ ಸಮನ್ಸ್ ಜಾರಿ ಮಾಡಿದೆ.






2015ರಲ್ಲಿ ತನಿಖಾ ಸಂಸ್ಥೆಯಿಂದ ಮುಕ್ತಾಯವಾಗಿದ್ದ ನ್ಯಾಷನಲ್ ಹೆರಾಲ್ಡ್ ಪ್ರಕರಣದೊಂದಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ವಿಚಾರದಲ್ಲಿ ಜಾರಿ ನಿರ್ದೇಶನಾಲಯವು ಸಮನ್ಸ್ ನೀಡಿದೆ.

ಈ ಬಗ್ಗೆ ಕಾಂಗ್ರೆಸ್ ಸಂಸದ ಅಭಿಷೇಕ್ ಮನು ಸಿಂಘ್ವಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಖಚಿತಪಡಿಸಿದ್ದು, ಸೋನಿಯಾ ಗಾಂಧಿ ಅವರು ಹೇಳಿದ ದಿನಾಂಕದಂದು ಅಗತ್ಯವಿದ್ದಲ್ಲಿ ಹಾಜರಾಗುತ್ತಾರೆ. ಆದರೆ ಪಕ್ಷವು ತನಿಖಾ ಸಂಸ್ಥೆಗೆ ಪತ್ರ ಬರೆದು ರಾಹುಲ್ ಗಾಂಧಿಗೆ ಕೆಲವು ವಿನಾಯಿತಿಗಳನ್ನು ಕೋರುತ್ತದೆ. ▶ 8ನೇ ಪುಟಕ್ಕೆ

ಅಯೋಧ್ಯೆ ರಾಮಮಂದಿರ ಗರ್ಭಗುಡಿಗೆ ಯುಪಿ ಸಿಎಂ ಯೋಗಿ ಆದಿತ್ಯನಾಥ್ ಶಂಕುಸ್ಥಾಪನೆ

ಲಖನೌ,ಜೂ.1–ಹಿಂದೂಗಳ ದಶಕಗಳ ಕನಸಾದ ಅಯೋಧ್ಯೆ ರಾಮಮಂದಿರ ನಿರ್ಮಾಣ ಮಹತ್ವದ ಘಟ್ಟ ತಲುಪಿದೆ. ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಬುಧವಾರ ಗರ್ಭಗುಡಿಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ.




ಅಯೋಧ್ಯೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರಾಮಮಂದಿರದ ಗರ್ಭಗುಡಿಯ ಮೊದಲ ಶಿಲೆಗೆ ಪೂಜೆ ಸಲ್ಲಿಸಿದರು. ಮಂದಿರ ನಿರ್ಮಾಣದ ಹೊಣೆ ಹೊತ್ತ ರಾಮ ಜನ್ಮಭೂಮಿ ಟ್ರಸ್ಟ್, ದೇವಾಲಯದ ಗರ್ಭಗುಡಿಯನ್ನು ರಾಜಸ್ಥಾನದ ಮಖ್ರಾನಾ ಬೆಟ್ಟದಿಂದ ತರಿಸಲಾದ ಬಿಳಿ ಅಮೃತ ಶಿಲೆಯಿಂದ ನಿರ್ಮಾಣ ಮಾಡಲಾಗುವುದು. ಸುಮಾರು 13,300 ಕ್ಯೂಬಿಕ್ ಅಡಿ ಅಮೃತ ಶಿಲೆಯನ್ನು ಬಳಸಲಾಗುವುದು ಎಂದು ಹೇಳಿದೆ. ದೇವಾಲಯದ ಗರ್ಭಗುಡಿಯ ನಿರ್ಮಾಣ ಕಾಮಗಾರಿಯು 2023ರ ಅಂತ್ಯದೊಳಗೆ ಹಾಗೂ ಇಡೀ ರಾಮಮಂದಿರದ ನಿರ್ಮಾಣ ಕಾಮಗಾರಿಯು 2024ರ ಅಂತ್ಯದೊಳಗೆ ಮುಕ್ತಾಯವಾಗಬಹುದು ಎನ್ನಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆಗಸ್ಟ್ 2020ರಲ್ಲಿ ರಾಮಮಂದಿರದ ಭೂಮಿ ಪೂಜೆ ನಡೆಸಿ, ಶಂಕುಸ್ಥಾಪನೆ ನೆರವೇರಿಸಿದ್ದರು.

ಮದ್ಯಪಾನ ನಿಷೇಧ: ರಾಮಮಂದಿರ ನಿರ್ಮಾಣವಾಗುವ ಅಯೋಧ್ಯೆಯಲ್ಲಿ ಮದ್ಯಪಾನ ನಿಷೇಧಿಸಲು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸರ್ಕಾರ ಆದೇಶ ನೀಡಿದೆ. ಉತ್ತರ ಪ್ರದೇಶದ ಅಬಕಾರಿ ಖಾತೆ ರಾಜ್ಯ ಸಚಿವ (ಸ್ವತಂತ್ರ ಉಸ್ತುವಾರಿ) ನಿತಿನ್ ಅಗರ್ವಾಲ್ ಅವರು ಅಯೋಧ್ಯೆಯ 'ಶ್ರೀರಾಮ ಮಂದಿರ' ಪ್ರದೇಶದಲ್ಲಿನ ಎಲ್ಲಾ ಮದ್ಯದಂಗಡಿಗಳ ಪರವಾನಗಿಯನ್ನು ರದ್ದುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಲೆಕ್ಕಕ್ಕೆ ಸಿಗದಷ್ಟು ಹಣ ಬೆಂಗಳೂರಿಂದ ದೆಹಲಿಗೆ ಅಕ್ರಮವಾಗಿ ವರ್ಗಾವಣೆ

ಡಿಕೆಶಿ ವಿರುದ್ಧ ಇಡಿ ಆರೋಪ

ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ಹಿಂದೆ ಸಚಿವರಾಗಿದ್ದ ವೇಳೆ ಅಧಿಕಾರದ ಪ್ರಭಾವ ಬಳಸಿ ಲೆಕ್ಕಕ್ಕೆ ಸಿಗದಷ್ಟು ಹಣವನ್ನು ಬೆಂಗಳೂರಿನಿಂದ ದೆಹಲಿಗೆ ವರ್ಗಾವಣೆ ಮಾಡಿದ್ದಾರೆ ಎಂದು ಇಡಿ ಇತ್ತೀಚೆಗೆ ಕೋರ್ಟ್‌ಗೆ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದೆ.



ಅಕ್ರಮ ಹಣ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ಡಿ.ಕೆ.ಶಿವಕುಮಾರ್ ವಿರುದ್ಧ ಇಡಿ ಅಧಿಕಾರಿಗಳು ದೆಹಲಿಯಲ್ಲಿರುವ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದರು. ಅಕ್ರಮ ಹಣ ವರ್ಗಾವಣೆಗೆ ಡಿ.ಕೆ.ಶಿವಕುಮಾರ್ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ಕ್ಯಾಬಿನೆಟ್ ಸಚಿವರಾಗಿದ್ದ ವೇಳೆ ಪ್ರಭಾವ ಬಳಸಿ ದೊಡ್ಡ ಪ್ರಮಾಣದ ಹಣ ವರ್ಗಾವಣೆ ಮಾಡಿದ್ದಾರೆ. ಲೆಕ್ಕಕ್ಕೆ ಸಿಗದಷ್ಟು ಹಣ ಬೆಂಗಳೂರಿನಿಂದ ದೆಹಲಿಗೆ ವರ್ಗಾವಣೆಯಾಗಿದೆ. ಇತರೆ ಸಹ ಆರೋಪಿಗಳ ಜೊತೆ ▶ 8ನೇ ಪುಟಕ್ಕೆ

ಜೂ.21ರಂದು ಮೈಸೂರು ಯೋಗ ದಿನಾಚರಣೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಗಮನ ಹಿನ್ನೆಲೆ

ಅಧಿಕಾರಿಗಳ ನೇತೃತ್ವದಲ್ಲಿ 11 ಸಮಿತಿ ರಚನೆಗೆ ನಿರ್ಧಾರ

● ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ ಸಭೆ ನಡೆಸಿದ ಡಿಸಿ ● ಯಾವುದೇ ಲೋಪವಾಗದಂತೆ ತಡೆಯಲು ಈ ಕ್ರಮ

ಮೈಸೂರು, ಜೂ. 1(ಎಂಟಿವೈ)– ಮೈಸೂರಲ್ಲಿ ಜೂ.21 ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮದ ಕುರಿತು ಮೈಸೂರಿನ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಬುಧವಾರ ಬೆಳಗ್ಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಯೋಗ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಚರ್ಚೆ ನಡೆಸಿದರು.

ಜಿಲ್ಲಾಧಿಕಾರಿ ತಮ್ಮ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 11ರಿಂದ 12.30ರವರೆಗೆ ನಡೆದ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿದ ಜಿಲ್ಲಾಧಿಕಾರಿಗಳು, ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಪಾಲ್ಗೊಳ್ಳುವುದರಿಂದ ಯಾವುದೇ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕಾಗಿದೆ. ಕಾರ್ಯಕ್ರಮಕ್ಕೆ ಇನ್ನು 20 ದಿನ ಇರುವುದರಿಂದ ವಿವಿಧ ಜವಾಬ್ದಾರಿ ಹಂಚಿಕೆ ಮಾಡುವುದು ಸೂಕ್ತ. ಇದಕ್ಕಾಗಿ ವಿವಿಧ ಸಮಿತಿ ರಚಿಸುವ ಅನಿವಾರ್ಯತೆ ಇದೆ ಎಂದರು.

ಕಾರ್ಯಕ್ರಮದ ಯಶಸ್ಸಿಗಾಗಿ 11 ಸಮಿತಿ ರಚಿಸುವ ಮೂಲಕ ಪ್ರತಿಯೊಂದು ಸಮಿತಿಗೂ ವಿವಿಧ ಜವಾಬ್ದಾರಿ ನೀಡಲಾಗುತ್ತದೆ. ಸಮಿತಿಗೆ ಓರ್ವ ಅಧಿಕಾರಿಯನ್ನು ನಿಯೋಜಿಸಿ, ಅವರೊಂದಿಗೆ ಕೆಲಸ ಮಾಡಲು ಯೋಗ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಇತರೆ ಇಲಾಖೆಗಳ ಅಧಿಕಾರಿಗಳ ಸಹಕಾರ ದೊರೆಯುವಂತೆ ಮಾಡಲಾಗುತ್ತದೆ ಎಂದರು.



ಮೈಸೂರಿನ ಡಿಸಿ ಕಚೇರಿಯಲ್ಲಿ ಬುಧವಾರ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮತ್ತೊಂದು ಸಭೆ: ಕಾರ್ಯಕ್ರಮದ ರೂಪುರೇಷೆ, ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಮೂರು ದಿನದ ನಂತರ ಆಯುಷ್ ಇಲಾಖೆಯ ಅಧಿಕಾರಿಗಳೊಂದಿಗೆ ಮತ್ತೊಂದು ಸಭೆ ನಡೆಸಲಾಗುವುದು. ಈ ವೇಳೆ 11 ಸಮಿತಿಗಳ ಪೂರ್ಣ ವಿವರ ಹಾಗೂ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗುತ್ತದೆ.

ವಿವಿಧ ಸ್ಥಳದ ಪ್ರಸ್ತಾಪ: ಯೋಗ ದಿನದಲ್ಲಿ ಮೈಸೂರಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಪಾಲ್ಗೊಳ್ಳುತ್ತಿರುವುದರಿಂದ ಗಿನ್ನಿಸ್ ದಾಖಲೆ ಮಾಡಬೇಕೆಂಬ ಬಯಕೆ ಮೈಸೂರಿನ ಯೋಗ ಸಂಸ್ಥೆಗಳದ್ದಾಗಿದೆ. ಆದರೆ ಜಿಲ್ಲಾಡಳಿತಕ್ಕೆ ಭದ್ರತೆಯದ್ದೇ ಚಿಂತೆ. ಈ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಪ್ರಧಾನಿಗಳು ಪಾಲ್ಗೊಳ್ಳುವುದರಿಂದ ಅಲ್ಲಿ 12–15 ಸಾವಿರ ಮಂದಿಯಷ್ಟೇ ಯೋಗ ಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಯೋಗ ಒಕ್ಕೂಟವು ಜಿಲ್ಲಾಡಳಿತಕ್ಕೆ ಸಲಹೆ ನೀಡಿದ್ದು, ಅರಮನೆ ಆವರಣದಿಂದ ಆರಂಭವಾಗಿ ಜಯಮಾರ್ತಾಂಡ ದ್ವಾರದ ಮೂಲಕ ದೊಡ್ಡಕೆರೆ ಮೈದಾನ, ಬಿ.ಎನ್.ರಸ್ತೆ, ಹಾರ್ಡಿಂಜ್ ವೃತ್ತ, ಚಾಮರಾಜೇಂದ್ರ ವೃತ್ತ, ಕೆ.ಆರ್. ವೃತ್ತ ನ್ಯೂ ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸ್ ರಸ್ತೆ, ಅರಮನೆ ಸುತ್ತಲೂ ಕುಳಿತುಕೊಂಡು ಯೋಗಾಸನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಲಕ್ಷಕ್ಕಿಂತಲೂ ಹೆಚ್ಚು ಮಂದಿ ಯೋಗಪಟುಗಳು ಪಾಲ್ಗೊಳ್ಳಬಹುದಾಗಿದೆ. ಇದರಿಂದ ದಾಖಲೆ ಮಾಡಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಸಲಹೆಯನ್ನು ಜಿಲ್ಲಾಡಳಿತ ಸ್ವೀಕರಿಸಿದೆಯಾದರೂ ತನ್ನ ನಿಲುವು ಪ್ರಕಟಿಸಿಲ್ಲ ಎಂದರು.

ಚುನಾವಣಾ ನೀತಿ ಸಂಹಿತೆ ಅಡ್ಡಿ: ಯೋಗ ದಿನದ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಜನಪ್ರತಿನಿಧಿಗಳು ಪಾಲ್ಗೊಳ್ಳಲು ನೀತಿ ಸಂಹಿತೆ ಅಡ್ಡಿಯಾಗಿದೆ. ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಜಾರಿಯಲ್ಲಿರುವ ನೀತಿ ಸಂಹಿತೆಯಿಂದಾಗಿ ಅಧಿಕಾರಿಗಳು ಯೋಗ ಸಂಸ್ಥೆಗಳ ಪ್ರತಿನಿಧಿಯೊಂದಿಗೆ ಸಭೆ ನಡೆಸುತ್ತಿದ್ದರೂ, ನಿರ್ಧಾರ ಪ್ರಕಟಿಸಲು ಸಾಧ್ಯವಾಗುತ್ತಿಲ್ಲ.

ಅರಮನೆಯಲ್ಲಿ ಯಾರ್‍ಯಾರು: ಯೋಗ ಪ್ರದರ್ಶನದ ವೇಳೆ ಅರಮನೆ ಆವರಣದಲ್ಲಿ 12–15 ಸಾವಿರ ಮಂದಿ ಸೇರುವುದಕ್ಕೆ ಮಾತ್ರ ಅವಕಾಶ ಮಾಡಿಕೊಡಲಾಗುತ್ತದೆ. ಯಾರು ಯಾರನ್ನು ಅರಮನೆಯಲ್ಲಿ ಯೋಗ ಮಾಡಲು ಬಿಡಬೇಕು ಎನ್ನುವುದು ಇನ್ನು ನಿರ್ಧಾರವಾಗಿಲ್ಲ. ನೀತಿ ಸಂಹಿತೆ ಮುಗಿದ ನಂತರ ಜೂ.13ರ ನಂತರ ಜಿಲ್ಲಾ ಉಸ್ತುವಾರಿ ಸಚಿವ ▶ 8ನೇ ಪುಟಕ್ಕೆ

> **ಬಸ್ ನಿಲ್ದಾಣ ಸ್ಥಳಾಂತರಕ್ಕೆ ಆದೇಶ ಬಂದಿಲ್ಲ**
>
> ಅರಮನೆ ಆವರಣದಲ್ಲಿ ನಡೆಯುವ ಯೋಗ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಪಾಲ್ಗೊಳ್ಳುವ ನಿಟ್ಟಿನಲ್ಲಿ ಭದ್ರತೆಯ ಹಿತದೃಷ್ಟಿಯಿಂದಾಗಿ ನಗರ ಬಸ್ ನಿಲ್ದಾಣವನ್ನು ಬೇರೆಡೆ ತಾತ್ಕಾಲಿಕ ಸ್ಥಳಾಂತರಕ್ಕೆ ಸೂಚಿಸಲಾಗುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ. ಈ ಕುರಿತು ಸಾರಿಗೆ ಸಂಸ್ಥೆ ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಪ್ರತಿಕ್ರಿಯಿಸಿ, ಬಸ್ ನಿಲ್ದಾಣದ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಇದುವರೆಗೂ ಯಾವುದೇ ಆದೇಶ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಎಸ್‌ಎಸ್‌ಎಲ್‌ಸಿ ಟಾಪರ್‌ಗಳಿಗೆ ಬಿವಿಬಿ ಪುರಸ್ಕಾರ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಭಾರತೀಯ ವಿದ್ಯಾಭವನ (ಬಿವಿಬಿ)ದ ವಿದ್ಯಾರ್ಥಿ ಮತ್ತು ಅವಳಿ ಸಹೋದರೂ ಆದ ಕೆ.ಪಿ.ಸುಬ್ಬಯ್ಯ ಮತ್ತು ಕೆ.ಪಿ.ಸೋಮಯ್ಯ ಕ್ರಮವಾಗಿ 625ಕ್ಕೆ 624 ಮತ್ತು 625ಕ್ಕೆ 615 ಅಂಕಗಳನ್ನು ಗಳಿಸಿದ್ದಾರೆ. ಇವರ ಮುಂದಿನ ವಿದ್ಯಾಭ್ಯಾಸಕ್ಕೆ ನೆರವಾಗುವ ನಿಟ್ಟಿನಲ್ಲಿ ಬಿವಿಬಿ ಮೈಸೂರು ಕೇಂದ್ರವು 50 ಸಾವಿರ ರೂ.ಗಳನ್ನು ನೀಡಿದೆ. ವಿದ್ಯಾರ್ಥಿಗಳ ತಾಯಿ ಜಯಂತಿ ಪೂವಯ್ಯ (ಹಿನಕಲ್‌ನ ಬೊಟ್ಟೋಳಂಡ ಪೊನ್ನಣ್ಣ ಅವರ ಪುತ್ರಿ) ಅವರು ಬಿವಿಬಿ ಕಾರ್ಯದರ್ಶಿ ಪಿ.ಎಸ್. ಗಣಪತಿ ಅವರಿಂದ ಚೆಕ್ ಸ್ವೀಕರಿಸಿದರು. ಚಿತ್ರದಲ್ಲಿ ಬಿವಿಬಿ ಶಾಲೆಯ ಪ್ರಾಂಶುಪಾಲೆ ವಿಜಯ ನರಸಿಂಹನ್, ಕ್ಲಾಸ್ ಟೀಚರ್ ಶಶಿಕಲಾ ಅವರಿದ್ದಾರೆ. ಬಿವಿಬಿ ಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ವರ್ಷವೂ ಕೂಡ ಶೇ.100ರಷ್ಟು ಫಲಿತಾಂಶ ಹೊಂದಿದೆ. ಒಟ್ಟು 148 ವಿದ್ಯಾರ್ಥಿಗಳ ಪೈಕಿ 120 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 28 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ರೋಹಿತ್ ಚಕ್ರತೀರ್ಥ ವಜಾಗೆ ಆಗ್ರಹಿಸಿ ಇಂದು ಪ್ರತಿಭಟನೆ

ಮೈಸೂರು,ಜೂ.1(ಪಿಎಂ)–ನಾಡಗೀತೆಗೆ ಅಪಮಾನಿಸಿರುವ ಆರೋಪದ ಹಿನ್ನೆಲೆಯಲ್ಲಿ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾಗೊಳಿಸಿ, ಬಂಧಿಸಬೇಕು ಹಾಗೂ ಬೆಳಗಾವಿ ಜಿಲ್ಲೆಯ ಗ್ರಾಮವೊಂದರಲ್ಲಿ ಕನ್ನಡಿಗರ ಮೇಲೆ ಹಲ್ಲೆ ನಡೆಸಿರುವ ಮರಾಠಿ ಪುಂಡರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ಜೂ.2ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಕನ್ನಡ ಸಾಹಿತ್ಯ ಕಲಾಕೂಟ ಮತ್ತು ಹಿಮಾಲಯ ಫೌಂಡೇಷನ್ ಸೇರಿದಂತೆ ಮೊದಲಾದ ಸಂಘಟನೆಗಳ ವತಿಯಿಂದ ಮೈಸೂರಿನ ಗಾಂಧಿ ಚೌಕದಲ್ಲಿ ಬೆಳಗ್ಗೆ 11ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ನಮ್ಮ ನಾಡಗೀತೆ ಭಾರತದ ಅಖಂಡತೆ ಮತ್ತು ಭಾವೈಕ್ಯತೆಯನ್ನು ಎತ್ತಿ ಹಿಡಿದಿದೆ. ಇಂತಹ ನಾಡಗೀತೆಗೆ ಅಪಮಾನ ಮಾಡಿರುವ ರೋಹಿತ್ ಚಕ್ರತೀರ್ಥ ವಿರುದ್ಧ ದೇಶದ್ರೋಹದಡಿ ಪ್ರಕರಣ ದಾಖಲಿಸಿ, ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಬೆಳಗಾವಿ ಜಿಲ್ಲೆಯ ಗ್ರಾಮವೊಂದರಲ್ಲಿ ಮದುವೆ ಮೆರವಣಿಗೆಯಲ್ಲಿ ಕನ್ನಡ ಗೀತೆಗೆ ನೃತ್ಯ ಮಾಡುತ್ತಿದ್ದ ಕನ್ನಡಿಗರ ಮೇಲೆ ಮರಾಠಿ ಪುಂಡರು ಹಲ್ಲೆ ನಡೆಸಿದ್ದು, ಹಲ್ಲೆಕೋರರನ್ನು ಬಂಧಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಬಸವಣ್ಣನವರ ವಿಚಾರಧಾರೆ ತಿರುಚುವ ಕೆಲಸವನ್ನೂ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಮಾಡಿದ್ದು, ಇದು ಖಂಡನೀಯ ಎಂದು ಕಿಡಿಕಾರಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿಮಾಲಯ ಯೋಗ ಫೌಂಡೇಷನ್ ಅಧ್ಯಕ್ಷ ಅನಂತು ಮತ್ತಿತರರು ಗೋಷ್ಠಿಯಲ್ಲಿದ್ದರು.

ಕುವೆಂಪುಗೆ ಅಪಮಾನ: ರೋಹಿತ್ ಚಕ್ರತೀರ್ಥ ಬಂಧನಕ್ಕೆ ಹಿರಿಯ ಸಾಹಿತಿ ಸಿಪಿಕೆ ಆಗ್ರಹ

ಮೈಸೂರು,ಜೂ.1(ಎಂಟಿವೈ)– ರಾಷ್ಟ್ರಕವಿ ಹಾಗೂ ನಾಡಗೀತೆಗೆ ಅಪಮಾನ ಮಾಡಿರುವ ರೋಹಿತ್ ಚಕ್ರತೀರ್ಥರನ್ನು ಕೂಡಲೇ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯಿಂದ ವಜಾಗೊಳಿಸಿ, ಬಂಧಿಸುವಂತೆ ಹಿರಿಯ ಸಾಹಿತಿ ಪ್ರೊ.ಸಿ.ಪಿ. ಕೃಷ್ಣಕುಮಾರ್ ಆಗ್ರಹಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ 'ನಮ್ಮೂರು ನಮ್ಮೋರು' ಸಮಾಜ ಸೇವಾ ಟ್ರಸ್ಟ್ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಕಾರಣದಿಂದಾಗಿ ಇಂದು ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರ ಕಲುಷಿತವಾಗುತ್ತಿದೆ. ಇದರೊಂದಿಗೆ ಮಹಾಕವಿ ಕುವೆಂಪು ಅವರನ್ನು ಅವಹೇಳನ ಮಾಡುವ ಕುಕೃತ್ಯಗಳೂ ನಡೆಯುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ರೋಹಿತ್ ಚಕ್ರತೀರ್ಥ ನಾಡಗೀತೆ ಹಾಗೂ ರಾಷ್ಟ್ರಕವಿ ಕುವೆಂಪು ಅವರ ವಿರುದ್ಧ ಅಸಂಬದ್ಧವಾಗಿ ಟೀಕೆ ಮಾಡಿ ತನ್ನ ಕೀಳು ಮನಸ್ಥಿತಿಯನ್ನು ಪ್ರದರ್ಶಿಸಿದ್ದಾರೆ. ಕುವೆಂಪು ಅವರಲ್ಲಿ ಸ್ವಂತಿಕೆ ಇಲ್ಲ ಎನ್ನುವುದೂ ಸೇರಿದಂತೆ ನಕಾರಾತ್ಮಕ ರೀತಿಯಲ್ಲಿ ಬರೆದಿದ್ದಾರೆ. ಹೀಗಾಗಿ ಈ ಹೇಳಿಕೆ ಅಪಮಾನ ಕಾರಿಯಾದದ್ದು ಎಂದು ಕಿಡಿಕಾರಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡಲೇ ಮಧ್ಯಪ್ರವೇಶಿಸಬೇಕು. ಇನ್ನು, ಪ್ರಾಥಮಿಕ ಶಿಕ್ಷಣ, ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಇತ್ತೀಚಿನ ವಿದ್ಯಮಾನ ಬೇಸರವುಂಟು ಮಾಡುವಂತದ್ದಾಗಿದೆ. ಇಂತಹ ಸಂದರ್ಭದಲ್ಲಿ ಸಂಕುಚಿತ ಮನೋಭಾವ ಬಿಡಬೇಕು. ರೋಹಿತ್ ಚಕ್ರತೀರ್ಥನನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯಿಂದ ವಜಾಗೊಳಿಸಿ, ಆತನನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎ.ರವಿ, ಮಾಜಿ ಸದಸ್ಯ ಪ್ರಶಾಂತ್ ಗೌಡ ಸುದ್ದಿಗೋಷ್ಠಿಯಲ್ಲಿದ್ದರು.

ರೋಹಿತ್ ಚಕ್ರತೀರ್ಥ ಗಡಿಪಾರಿಗೆ ಆಗ್ರಹಿಸಿ ಹೆದ್ದಾರಿ ತಡೆ



ಮೈಸೂರು,ಜೂ.1(ಆರ್‌ಕೆಬಿ)–ರಾಷ್ಟ್ರಕವಿ ಕುವೆಂಪು ಬರೆದಿರುವ ನಾಡಗೀತೆಗೆ ಅಪಮಾನ ಮಾಡಿರುವ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಮೈಸೂರಿನ ನಾಡಪ್ರಭು ಕೆಂಪೇಗೌಡ ಯುವಕರ ಬಳಗದ ಕಾರ್ಯಕರ್ತರು ಬಂಡಿಪಾಳ್ಯ ರಿಂಗ್‌ರಸ್ತೆ ವೃತ್ತದಲ್ಲಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ರೋಹಿತ್ ಚಕ್ರತೀರ್ಥ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು ಅವರನ್ನು ಕೂಡಲೇ ಬಂಧಿಸದಿದ್ದರೆ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅಖಿಲ ಕರ್ನಾಟಕ ಡಾ.ರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಕುವೆಂಪು ಕನ್ನಡದ ಶಕ್ತಿ ಮತ್ತು ಆಸ್ತಿ. ಅವರು ಬರೆದಿರುವ ನಾಡಗೀತೆಗೆ ರೋಹಿತ್ ಚಕ್ರತೀರ್ಥ ಅಪಮಾನ ಮಾಡಿದ್ದಾರೆ. ಅವರನ್ನು ಬಂಧಿಸಿ, ಗಡಿಪಾರು ಮಾಡಬೇಕು. ಕುವೆಂಪು ಅವರಂತಹ ಮಹನೀಯರನ್ನು ಅಪಮಾನ ಮಾಡುವವರ ವಿರುದ್ಧ ಸರ್ಕಾರ ಕ್ರಮ ಕೈಗೊಂಡು ಮುಂದೆ ಇಂತಹ ಅಪಮಾನ ಯಾರೂ ಮಾಡದ ರೀತಿಯಲ್ಲಿ ನಿಯಮ ರೂಪಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಳಗದ ಅಧ್ಯಕ್ಷ ಕೃಷ್ಣ, ಕಾರ್ಯದರ್ಶಿ ವೇಣುಗೋಪಾಲ್, ಗೌರವಾಧ್ಯಕ್ಷ ಲೋಕೇಶ್, ಒಕ್ಕಲಿಗರ ಸಂಘದ ನಿರ್ದೇಶಕ ಮಂಜೇಗೌಡ, ಮುಖಂಡರಾದ ರಾಕೇಶ್‌ಗೌಡ, ಸಂತೋಷ್, ರವಿ, ದಿನೇಶ್, ಚಂದ್ರು ಇನ್ನಿತರರು ಉಪಸ್ಥಿತರಿದ್ದರು.

ಲವ್ ಜಿಹಾದ್ ವಿರುದ್ಧ ಕಠಿಣ ಕ್ರಮ

ಉಡುಪಿ,ಜೂ.1–ಲವ್ ಜಿಹಾದ್ ವಿರುದ್ಧ ರಾಜ್ಯದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.



ಉಡುಪಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಲವ್ ಜಿಹಾದ್ ಪ್ರಕರಣಗಳು ಈಗ ಶುರುವಾದದ್ದು ಅಲ್ಲ. ಇದು ಹಿಂದಿನಿಂದಲೂ ಇತ್ತು. ಸರ್ಕಾರ ಈಗಾಗಲೇ ಇವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಂಡಿದೆ. ತಪ್ಪಿತಸ್ಥರನ್ನು ಹಾಗೆ ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ. ಪೊಲೀಸರು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದರು.

ಬಿಎಐ, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನಿಂದ

ಜೂನ್ ತಿಂಗಳಿಡೀ ಪರಿಸರ ಮಾಸಾಚರಣೆ

ಮೈಸೂರು,ಜೂ.1(ಪಿಎಂ)–ವಿಶ್ವ ಪರಿಸರ ದಿನಾಚರಣೆ (ಪ್ರತಿ ವರ್ಷ ಜೂ.5) ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಕೇಂದ್ರ ಮತ್ತು ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂಬಿಸಿಟಿ) ಜಂಟಿ ಆಶ್ರಯದಲ್ಲಿ ಜೂನ್ ತಿಂಗಳಿಡೀ ಪರಿಸರ ಮಾಸಾಚರಣೆ ಹಮ್ಮಿಕೊಂಡಿದ್ದು, ಪರಿಸರ ಸಂರಕ್ಷಣೆಗೆ ಪೂರಕವಾದ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಬಿಎಐ ಪರಿಸರ ಮಾಸಾಚರಣೆ ಸಮಿತಿ ಅಧ್ಯಕ್ಷ ವಿ.ನಾಗರಾಜ್ ಭೈರಿ (ಎಡದಿಂದ ಮೂರನೆಯವರು) ಮಾತನಾಡಿದರು. (ಎಡದಿಂದ ಬಲ) ಸಮಿತಿ ಸಲಹೆಗಾರ ಬಿ.ಎಸ್.ದಿನೇಶ್, ಕಾರ್ಯದರ್ಶಿ ವೆಂಕಟೇಶ್ ಪ್ರಸಾದ್, ಬಿಎಐ ಮೈಸೂರು ಘಟಕದ ಅಧ್ಯಕ್ಷ ಆರ್.ರಘುನಾಥ್, ಎಂಬಿಸಿಟಿ ಅಧ್ಯಕ್ಷ ಶ್ರೀಧರ್ ಚಿತ್ರದಲ್ಲಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪರಿಸರ ಮಾಸಾಚರಣೆ ಸಮಿತಿಯ ಅಧ್ಯಕ್ಷ ವಿ.ನಾಗರಾಜ್ ಭೈರಿ, ಜೂ.3ರಂದು ಸಂಜೆ 6ಕ್ಕೆ ಮೈಸೂರಿನ ವಿಶ್ವೇಶ್ವರ ನಗರದ ಎಂಬಿಸಿಟಿ ಸಭಾಂಗಣದಲ್ಲಿ ಪರಿಸರ ಮಾಸಾಚರಣೆ ಉದ್ಘಾಟನಾ ಸಮಾರಂಭ ಏರ್ಪಡಿಸಿದೆ. ಮುಖ್ಯ ಅತಿಥಿಗಳಾಗಿ ಹಸಿರು ಆಸ್ಕರ್ ಪ್ರಶಸ್ತಿ ಪುರಸ್ಕೃತರಾದ ಕೃಪಾಕರ್, ಸೇನಾನಿ ಅವರು ಪಾಲ್ಗೊಳ್ಳಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಬೆಂಗಳೂರು ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಪರಿಸರಸ್ನೇಹಿ ಸಾಮಗ್ರಿಗಳ ಪ್ರದರ್ಶನ: ಜೂ.5, 17 ಮತ್ತು 28ರಂದು ಮೈಸೂರಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜೂ.11 ಮತ್ತು 12ರಂದು ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಪರಿಸರ ಸ್ನೇಹಿ ಕಟ್ಟಡ ಸಾಮಗ್ರಿಗಳ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಜೊತೆಗೆ ನವೀಕರಿಸಬಹುದಾದ ಇಂಧನ ಉತ್ಪನ್ನಗಳು, ಪರಿಸರ ಸ್ನೇಹಿ ವಾಹನಗಳು ಸೇರಿದಂತೆ ಮೊದಲಾದ ಪರಿಸರಕ್ಕೆ ಪೂರಕ ಉತ್ಪನ್ನಗಳ ಪ್ರದರ್ಶನವೂ ಇರಲಿದೆ. ಪ್ರವೇಶ ಉಚಿತವಿದೆ ಎಂದು ತಿಳಿಸಿದರು.

ಜೂ.14ರಂದು ಎಂಬಿಸಿಟಿ ಸಭಾಂಗಣದಲ್ಲಿ ಬೆಳಗ್ಗೆ 10ಕ್ಕೆ ಪರಿಸರ ಸ್ನೇಹಿ ಗೃಹಬಳಕೆ ಸಾಮಗ್ರಿಗಳ ಉಪಯೋಗದ ಬಗ್ಗೆ ಗೃಹಿಣಿಯರಿಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಹಿರಿಯ ಗಾಯಕಿ ಹೆಚ್.ಆರ್. ಲೀಲಾವತಿ ಅತಿಥಿಗಳಾಗಿ ಆಗಮಿಸಲಿದ್ದು, ಸಂಪನ್ಮೂಲ ವ್ಯಕ್ತಿಯಾಗಿ ಪೌಷ್ಟಿಕ ಆಹಾರ ತಜ್ಞೆ ನಂದಿನಿ ಮೂರ್ತಿ ಭಾಗವಹಿಸಲಿದ್ದಾರೆ. ಇದೇ ವೇಳೆ ಹಾಸ್ಯ ಕಲಾವಿದ ಮೈಸೂರು ಆನಂದ್ ಅವರ ಹಾಸ್ಯ ಕಾರ್ಯಕ್ರಮವೂ ನಡೆಯಲಿದೆ ಎಂದು ತಿಳಿಸಿದರು.

ಸೈಕ್ಲೋಥಾನ್ ಸ್ಪರ್ಧೆ: ಜೂ.19ರಂದು ಬೆಳಗ್ಗೆ 6ಕ್ಕೆ ಹಸಿರು ಸೈಕ್ಲೋಥಾನ್ ಸ್ಪರ್ಧೆ ಏರ್ಪಡಿಸಿದ್ದು, ಚಾಮುಂಡಿಬೆಟ್ಟದ ಪಾದದ ಕಮಾನಿನಿಂದ ಬೆಟ್ಟದ ತುದಿವರೆಗೆ ಸೈಕ್ಲೋಥಾನ್ ಸ್ಪರ್ಧೆ ನಡೆಯಲಿದೆ. ವಿಜೇತರಿಗೆ ನಗದು ಬಹುಮಾನವಿದ್ದು, ಆಸಕ್ತ ಸೈಕಲ್ ಸವಾರರು ಮೊ.ಸಂ. 99455 17198 ಸಂಪರ್ಕಿಸಬಹುದು. ಜೂ.25ರಂದು ಬೆಳಗ್ಗೆ 6ರಿಂದ ಮೈಸೂರಿನ ಬೆಟ್ಟವೊಂದರಲ್ಲಿ ಚಾರಣ ನಡೆಸಲಾಗುವುದು. ಇದರಲ್ಲಿ ಪಾಲ್ಗೊಳ್ಳಲು ಬಿಎಐ ಸದಸ್ಯರು ಮತ್ತು ಕುಟುಂಬದವರಿಗೆ ಮಾತ್ರ ಅವಕಾಶವಿದೆ. ಜೂ.26ರಂದು ಬೆಳಗ್ಗೆ 6ಕ್ಕೆ ಮಾನಸಗಂಗೋತ್ರಿ ಆವರಣದಲ್ಲಿ ಬಿಎಐ–ಭೈರಿ ಬಿಲ್ಡರ್ಸ್ ಗ್ರೀನ್ ಮ್ಯಾರಥಾನ್ ಏರ್ಪಡಿಸಲಾಗಿದೆ. ಇದರಲ್ಲಿ ನಾಗರಿಕರು ಪಾಲ್ಗೊಳ್ಳಲು ಅವಕಾಶವಿದ್ದು, 5 ಕಿ.ಮೀ. ಸ್ಪರ್ಧೆಗೆ 350 ರೂ. ಮತ್ತು 10 ಕಿ.ಮೀ. ಸ್ಪರ್ಧೆಗೆ 450 ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ. ಆಸಕ್ತರು ಮೊ.ಸಂ. 98442 77284 ಸಂಪರ್ಕಿಸಬಹುದು ಎಂದು ತಿಳಿಸಿದರು.

ಜೂ.26ರಂದು ಎಂಬಿಸಿಟಿ ಸಭಾಂಗಣದಲ್ಲಿ 4ರಿಂದ 10ನೇ ತರಗತಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 10ಕ್ಕೆ ಸ್ಪರ್ಧೆ ಆರಂಭವಾಗಲಿದೆ. ಆಸಕ್ತ ಮಕ್ಕಳು ಮೊ.ಸಂ. 90360 19604 ಸಂಪರ್ಕಿಸಬಹುದು. ಜೂ.30ರಂದು ಸಂಜೆ 6ಕ್ಕೆ ಎಂಬಿಸಿಟಿ ಆವರಣದಲ್ಲಿ ಪರಿಸರ ಮಾಸಾಚರಣೆಯ ಸಮಾರೋಪ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಯಾಗಿ ಇತಿಹಾಸಕಾರ ಧರ್ಮೇಂದ್ರಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ವಿ.ನಾಗರಾಜ್ ಭೈರಿ ಹೇಳಿದರು. ಬಿಎಐ ಮೈಸೂರು ಘಟಕದ ಅಧ್ಯಕ್ಷ ಆರ್.ರಘುನಾಥ್, ಎಂಬಿಸಿಟಿ ಅಧ್ಯಕ್ಷ ಶ್ರೀಧರ್, ಸಮಿತಿ ಸಲಹೆಗಾರ ಬಿ.ಎಸ್.ದಿನೇಶ್, ಕಾರ್ಯದರ್ಶಿ ವೆಂಕಟೇಶ್ ಪ್ರಸಾದ್ ಸುದ್ದಿಗೋಷ್ಠಿಯಲ್ಲಿದ್ದರು.

ಜೂ.21, ಯೋಗ ಪ್ರದರ್ಶನದಲ್ಲಿ ಬಿಎಐ ಸದಸ್ಯರು ಭಾಗಿ...

"ಜೂ.21ರಂದು ಮೈಸೂರು ಅರಮನೆ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನದ ಯೋಗ ಪ್ರದರ್ಶನದಲ್ಲಿ ಬಿಎಐ ಸದಸ್ಯರು ಪಾಲ್ಗೊಳ್ಳಲಿದ್ದೇವೆ. ಜಿಲ್ಲಾಡಳಿತ ಅವಕಾಶ ನೀಡುವಷ್ಟು ಮಂದಿ ಯೋಗ ಪ್ರದರ್ಶನದಲ್ಲಿ ಭಾಗವಹಿಸಲಿದ್ದೇವೆ. **–ವಿ.ನಾಗರಾಜ್ ಭೈರಿ.**

ವಿಶೇಷಚೇತನ ಪೋಷಕರಿಗೆ ಧೈರ್ಯ ತುಂಬುವ ಕೆಲಸ ಆಗಲಿ: ಅಡ್ಡಂಡ ಕಾರ್ಯಪ್ಪ

ಮೈಸೂರು, ಜೂ. 1– ವಿಶೇಷ ಚೇತನ ಮಕ್ಕಳ ಬದಲಿಗೆ ಪೋಷಕರಿಗೆ ಹೆಚ್ಚಿನ ಧೈರ್ಯ ತುಂಬುವ ಕೆಲಸ ಆಗಬೇಕಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.



ನಗರದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ಆಯೋಜಿಸಿದ್ದ ಒಂದು ತಿಂಗಳ ವಿಶೇಷ ಚೇತನ ಮಕ್ಕಳ ಬೇಸಿಗೆ ಶಿಬಿರ ಸಮಾರೋಪದಲ್ಲಿ ಮಾತನಾಡುತ್ತಿದ್ದ ಅವರು, ಇಂತಹದೊಂದು ಸಂಸ್ಥೆ ಮೈಸೂರಿನಲ್ಲಿ ಇರುವುದು ಹೆಮ್ಮೆಯ ಸಂಗತಿಯಾಗಿದೆ. ಇದನ್ನು ಅಧಿಕಾರಿಗಳು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಪ್ರತಿ ವರ್ಷ ರಂಗಾಯಣವೂ ಮಕ್ಕಳಿಗೆ ವಿಶೇಷ ಶಿಬಿರ ಆಯೋಜಿಸುತ್ತಾ ಬಂದಿದೆ. ಆದರೆ ಈ ಬೇಸಿಗೆ ಶಿಬಿರ ಹಲವು ವಿಶೇಷತೆಯ ಶಿಬಿರವಾಗಿದೆ. ಇಂತಹ ಮಕ್ಕಳನ್ನು ಮುನ್ನಲೆಗೆ ತರುವ ಪ್ರಯತ್ನ ಆಗುತ್ತಿರುವುದು ಸ್ವಾಗತಾರ್ಹ. ಮಕ್ಕಳು ಸಹ ಇದನ್ನು ಸದುಪಯೋಗ ಪಡಿಸಿಕೊಂಡು ಸಾಧನೆ ಮಾಡಬೇಕಿದೆ. ಪ್ರಧಾನಿ ಮೋದಿಯವರು ಇಂತಹ ವಿಶೇಷ ಮಕ್ಕಳಿಗೆ ಹೆಚ್ಚಿನ ಆಸಕ್ತಿ ತೋರಿದ್ದಾರೆ ಎಂದರು.

ಯುವಜನ ಮತ್ತು ಸೇವಾ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಕೆ.ಸುರೇಶ್ ಮಾತನಾಡಿ, ವಿಶೇಷ ಮಕ್ಕಳನ್ನು ಮುಖ್ಯ ವಾಹಿನಿಗೆ ಕರೆತರಬೇಕಿದೆ. ಅದರಲ್ಲೂ ಇವರು ಆಸಕ್ತಿ ವಹಿಸುವ ಕ್ರೀಡೆಗಳಲ್ಲಿ ಇವರು ಹೆಚ್ಚೆಚ್ಚು ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕಿದೆ. ವಿಶೇಷ ಮಕ್ಕಳಿಗೆ ಕ್ರೀಡಾ ಸೌಲಭ್ಯದ ಬೇಡಿಕೆ ನೀಡಿದರೆ ಪೂರೈಸಲಾಗುವುದು. ಇಂತಹ ಮಕ್ಕಳು ಕ್ರೀಡೆಯಲ್ಲಿ ತೊಡಗಿಸಿಕೊಂಡರೆ ಕ್ರೀಡೆಯ ಹಿರಿಮೆ ಹುರುಪು ಹೆಚ್ಚಲಿದೆ ಎಂದರು.

ಶಿಬಿರದಲ್ಲಿ ಯೋಗ, ಆಟಿಕೆ, ಹ್ಯಾಂಡಿ ಕ್ರಾಫ್ಟ್, ವುಶೊ, ನೃತ್ಯ ಮೊದಲಾದ ಕ್ರೀಡಾ, ಮನರಂಜನಾ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಒಟ್ಟು 77 ಮಕ್ಕಳು ಭಾಗವಹಿಸಿದ್ದರು. ಅಧಿಕಾರಿಗಳಾದ ಪ್ರೊ. ಸುಂದರ್‌ರಾಜ್, ಡಾ. ಪ್ರೀತಿ ವೆಂಕಟೇಶ್, ಕುಮುದಾ ಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು. ನಂತರ ಮಕ್ಕಳಿಂದ ಯೋಗ ಪ್ರದರ್ಶನ ನಡೆಯಿತು.

ಬೀದಿದೀಪಗಳ ಕಂಪ್ಲೇಂಟ್‌ಗಾಗಿ ಕಂಟ್ರೋಲ್ ರೂಂ

ಮೈಸೂರು, ಜೂ.1(ಎಂಕೆ)– ನಿಮ್ಮ ಏರಿಯಾದಲ್ಲಿ ಬೀದಿ ದೀಪದ ಸಮಸ್ಯೆ ಇದೆಯೇ? ಕೂಡಲೇ ಟೋಲ್ ಫ್ರೀ ನಂ.18004255925ಗೆ ಸಂಪರ್ಕಿಸಿ, ಸಮಸ್ಯೆ ಬಗೆಹರಿಸಿಕೊಳ್ಳಿ....! ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದ ಹಿಂದಿದ್ದ ಮರ್ಕ್ಯೂರಿ ಲೈಟ್‌ಗಳನ್ನು ತೆರವುಗೊಳಿಸಿ 68,178 ಎಲ್‌ಇಡಿ ಬೀದಿದೀಪಗಳನ್ನು ಅಳವಡಿಸಲಾಗುತ್ತಿದೆ. ವಿದ್ಯುತ್ ಉಳಿತಾಯ ಹೊಸ ಮಾರ್ಗ ಕಂಡುಕೊಂಡಿರುವ ನಗರಪಾಲಿಕೆಯು ಬೀದಿ ದೀಪಗಳಿಗೆ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಲು ಪ್ರತ್ಯೇಕ ಕಂಟ್ರೋಲ್ ರೂಂ ತೆರೆಯಲು ಮುಂದಾಗಿದೆ.

ಟೋಲ್ ಫ್ರೀ ನಂ. 18004255925ಗೆ ಕರೆ ಮಾಡಿ



ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಯಲ್ಲಿ ಅಂದಾಜು 109.91 ಕೋಟಿ ರೂ. ವೆಚ್ಚದಲ್ಲಿ (ಎಸ್ಟಿಮೇಟ್ ಮಾತ್ರ) ಅಳವಡಿಸುತ್ತಿರುವ ಪರಿಸರ ಸ್ನೇಹಿ ಎಲ್‌ಇಡಿ ಲೈಟ್‌ಗಳಲ್ಲಿ ಉಂಟಾಗುವ ಸಮಸ್ಯೆಗಳನ್ನು ಕೇಳಿ, ತ್ವರಿತವಾಗಿ ಸಮಸ್ಯೆ ಬಗೆಹರಿಸಲು ವಾಣಿವಿಲಾಸ ವಾಟರ್ ವರ್ಕ್‌ನಲ್ಲಿ ಕಂಟ್ರೋಲ್ ರೂಂ ತೆರೆಯಲಾಗುತ್ತಿದ್ದು, ಸದ್ಯದಲ್ಲಿಯೇ ಕಾರ್ಯಾರಂಭವಾಗಲಿದೆ.

ರಾಜ್ಯದಲ್ಲಿ ಇದೇ ಮೊದಲು: ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ವಿದ್ಯುತ್ ಬೀದಿದೀಪಗಳ ಕಂಪ್ಲೇಂಟ್‌ಗಳಿಗಾಗಿ ಪ್ರತ್ಯೇಕ ಕಂಟ್ರೋಲ್ ರೂಂ ತೆರೆಯಲಾಗುತ್ತಿದ್ದು, ಎರಡು ಪಾಳಿಯಲ್ಲಿ ಬೆಳಗ್ಗೆ 8ರಿಂದ ರಾತ್ರಿ 11ರವರೆಗೆ ಕಾರ್ಯನಿರ್ವಹಿಸಲಿದೆ. ನಗರಪಾಲಿಕೆಯಲ್ಲಿ ಈಗ ಎರಡು ಕಂಟ್ರೋಲ್ ರೂಂಗಳಿದ್ದು, ಅವುಗಳನ್ನು ಬೀದಿದೀಪ ದೂರುಗಳಿಗಾಯೇ ಪ್ರತ್ಯೇಕ ಕಂಟ್ರೋಲ್ ರೂಂ ಇದೆ ಎಂದು ನಗರಪಾಲಿಕೆ ವಿದ್ಯುತ್ ವಿಭಾಗದ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪದವಿ, ಸ್ನಾತಕೋತ್ತರ ಪದವಿ ಪ್ರವೇಶ, ಪರೀಕ್ಷಾ ಶುಲ್ಕ ರದ್ದುಪಡಿಸಲು ಆಗ್ರಹಿಸಿ ವಿದ್ಯಾರ್ಥಿಗಳಿಂದ ಪ್ರತಿಭಟನೆ

ಮೈಸೂರು,ಜೂ.1(ಆರ್‌ಕೆಬಿ)–ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಮಾನಸಗಂಗೋತ್ರಿಯ ಕ್ಲಾಕ್ ಟವರ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇದ್ದಕ್ಕಿದ್ದ ಹಾಗೆ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು ಕೂಡಲೇ ಕಟ್ಟಬೇಕೆಂದು ಆದೇಶ ಹೊರಡಿಸಿರುವ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವ್ಯವಸ್ಥೆಯ ಧೋರಣೆಯನ್ನು ಖಂಡಿಸಿ, ರಾಜ್ಯ ಸಂಶೋಧಕ ಸಂಘದ ಅಧ್ಯಕ್ಷ ಎಸ್.ಮರಿದೇವಯ್ಯ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.



2021–22ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿ ಸಂದರ್ಭದಲ್ಲಿ ಎಸ್ಸಿ/ಎಸ್ಟಿ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶದ ಅನುಸಾರ ಉಚಿತವಾಗಿ ಪ್ರವೇಶಾತಿ ನೀಡಿದ್ದು, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಬಂದಾಗ ಪ್ರವೇಶ ಶುಲ್ಕವನ್ನು ಕಡಿತ ಮಾಡಿಕೊಳ್ಳಬೇಕಿತ್ತು. ಆದರೆ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಬರುವ ಮುಂಚೆಯೇ ಎಲ್ಲರೂ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು 2022ರ ಮೇ 31 ಕಡೆಯ ದಿನದ ಒಳಗೆ ಕಟ್ಟುವಂತೆ ಸುತ್ತೋಲೆ ಹೊರಡಿಸಿದೆ. ಗ್ರಾಮೀಣ ಭಾಗದ ಬಡತನ ರೇಖೆಗಿಂತ ಕೆಳಗಿರುವ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳು 15 ರಿಂದ 20 ಸಾವಿರ ರೂ. ಕಟ್ಟಲು ಸಾಧ್ಯವಿಲ್ಲ, ಹೀಗಾಗಿ ಕೂಡಲೇ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು ರದ್ದುಪಡಿಸಿ, ಸ್ಕಾಲರ್‌ಶಿಪ್ ಬಂದ ನಂತರ ಪ್ರವೇಶ ಶುಲ್ಕವನ್ನು ಮತ್ತು ಪರೀಕ್ಷಾ ಶುಲ್ಕವನ್ನು ಕಡಿತಗೊಳಿಸಿಕೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ನಂತರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಮೈಸೂರು ವಿವಿ ಕುಲಪತಿ ಪ್ರೊ. ಹೇಮಂತ್‌ಕುಮಾರ್, ಜೂ.3ರೊಳಗೆ ವಿದ್ಯಾರ್ಥಿಗಳ ಬೇಡಿಕೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದ ಬಳಿಕ ವಿದ್ಯಾರ್ಥಿಗಳು ಪ್ರತಿಭಟನೆಯನ್ನು ಕೈಬಿಟ್ಟರು. ಪ್ರತಿಭಟನೆಯಲ್ಲಿ ಸಂಶೋಧಕರ ಸಂಘದ ಅಧ್ಯಕ್ಷ ಶಶಿಕುಮಾರ್ ಸಂಶೋಧಕ ಕೆಂಪರಾಜು, ದಿಲೀಪ್ ವಿದ್ಯಾರ್ಥಿಗಳಾದ ಗೌತಮ್, ಶ್ರೀನಿವಾಸ್, ಕಾರ್ತಿಕ್, ಕಿರಣ್‌ಕುಮಾರ್, ದೀಪಿಕಾ, ಮಹೇಶ್ ಬನ್ನವಾಡಿ, ಗಣೇಶ್, ದಿವ್ಯಶ್ರೀ, ಗೌತಮ್, ಅಭಿಷೇಕ್, ಮೇಘನಾ, ದರ್ಶನ್, ನಂಜುಂಡಸ್ವಾಮಿ, ಪ್ರವೀಣ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಜೂ.3, ವಿಚಾರ ಸಂಕಿರಣ

ಮೈಸೂರು, ಜೂ.1– ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸಹಯೋಗದೊಂದಿಗೆ 'ಕೃಷಿಯಲ್ಲಿ ನ್ಯಾನೋ ತಂತ್ರಜ್ಞಾನ'ದ ಬಗ್ಗೆ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಜೂ.3ರಂದು ಆಯೋಜಿಸಲಾಗಿದೆ. ಚಿಕ್ಕಮಗಳೂರಿನ ಬ್ಲೂಮ್ ಬಯೋಟೆಕ್‌ನ ಮಾಲೀಕ ಡಾ. ಸುಹಾಸ್ ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ನ್ಯಾನೋ ಟೆಕ್ನಾಲಜಿ ಕ್ಷೇತ್ರದಲ್ಲಿ ಪರಿಣಿತಿ ಪಡೆದಿರುವ ತೆಲಂಗಾಣದ ಪ್ರತಿಷ್ಠಾ ಇಂಡಸ್ಟ್ರೀಸ್‌ನ ಉಪ ಮುಖ್ಯಸ್ಥ ಡಾ.ಅಭಿಷೇಕ್ ಮಾಥುರ್ ಉಪನ್ಯಾಸ ನೀಡಲಿದ್ದಾರೆ.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಕುಲಸಚಿವ ಡಾ.ಎಸ್.ಎ.ಧನರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ವಿಚಾರ ಸಂಕಿರಣದಲ್ಲಿ ನುರಿತ ವಿಜ್ಞಾನಿಗಳು, ತಂತ್ರಜ್ಞರು, ಸಂಶೋಧಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.06.2022 ಗುರುವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ತೃತೀಯ, ನಕ್ಷತ್ರ : ಆರಿದ್ರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ 'ಒಂದೇ ಕಥೆ' ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ –ಆಕಾಶವಾಣಿಯೊಂದಿಗೆ", 10.00 ಡಾ.ಎಸ್.ವಿ.ಸಹನಾ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ–ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ. ಮೀನಾ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ, "ಎಲ್ಲರಿಗಾಗಿ ಯೋಗ"– ಮಾತನಾಡುತ್ತಾರೆ ಶಿವಪ್ರಕಾಶ್, 3.00 ರಾಗಲಹರಿ–ರಾಗ "ಹಂಸಾನಾದ", ಪ್ರಸ್ತುತಿ– ಜಿ.ಪುಷ್ಪಲತಾ, 4.00 ಹಳ್ಳಿ ಹಾಡು, ಪ್ರಸ್ತುತಿ–ಅಬ್ದುಲ್ ರಶೀದ್, 6.50 ಕೃಷಿರಂಗ–ಕಿಸಾನ್‌ವಾಣಿ, 9.00 ಯುವವಾಣಿ– ಯುವಪ್ರತಿಭೆ, ಪ್ರಸ್ತುತಿ–ಎಸ್.ಸಿ.ಹೇಮಕುಮಾರ್, 9.30 ಕನ್ನಡ ಭಾರತಿ, 10.00 ನಾಟಕ

- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 80ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ದಕ್ಷಿಣಮೂರ್ತಿ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.
- **ನವಜ್ಯೋತಿ ಕ್ರಿಕೆಟ್ ಕ್ಲಬ್ :** ಶ್ರೀ ಕೃಷ್ಣ ಡೈಮಂಡ್ಸ್ ಅಂಡ್ ಜ್ಯುವೆಲ್ಲರಿ ಮೊಫುಸಿಲ್ ಮಹಿಳಾ ಕ್ರಿಕೆಟ್ ಟೂರ್ನಮೆಂಟ್, ಸ್ಥಳ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನ, ಬೆಳಗ್ಗೆ 10.30ಕ್ಕೆ.
- **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ವಾತ್ಸಲ್ಯ ರಂಗಬಿಂಬ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಪ್ರಾಂಶುಪಾಲ ಡಾ. ಜೆ.ಸಿ. ನಾಗೇಂದ್ರ, ಮುಖ್ಯ ಅತಿಥಿಗಳು : ನಿವೃತ್ತ ಮುಖ್ಯ ಶಿಕ್ಷಕರಾದ ಮಂಗಳಾ ಮುದ್ದುಮಾದಪ್ಪ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಉಪಸ್ಥಿತರು : ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ ದಳಪತಿ, ಸ್ಥಳ: ನಟರಾಜ ಸಭಾಂಗಣ, ಸಂಜೆ 5.30ಕ್ಕೆ.
- **ಮೈಸೂರು ಯೂನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ :** ಎಐಸಿಟಿಇ ಸೇರ್ಪಡೆ ಕಾರ್ಯಕ್ರಮ, ಸಂಚಾರ ಸುರಕ್ಷತೆ ಮತ್ತು ಅಪರಾಧ ಅರಿವು ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವ ಪ್ರೊ.ಎ.ಪಿ.ಜ್ಞಾನಪ್ರಕಾಶ್, ಭಾಷಣಕಾರರು: ಎಸ್ಪಿ ಆರ್.ಚೇತನ್, ಸ್ವಾಮಿ ಶಿವಕಾಂತಾನಂದಜಿ ಮಹಾರಾಜ್, ಸ್ಥಳ: ವಿಜ್ಞಾನ ಭವನ, ಮೈಸೂರು ವಿವಿ, ಬೆಳಗ್ಗೆ 10ಕ್ಕೆ.
- **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ, ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಚಿತ್ರಕಲಾ ಸ್ಪರ್ಧೆ, ಸ್ಥಳ: ಕಲಾಮಂದಿರದ ಆವರಣ, ಬೆಳಗ್ಗೆ 11 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಜಾನಪದ ಅಧ್ಯಯನ ಕೇಂದ್ರದ ಪ್ರೊ. ಎಂ. ನಂಜಯ್ಯ ಹೊಂಗನೂರು ಅವರಿಂದ ಪ್ರಸ್ತುತ ಸಂದರ್ಭದಲ್ಲಿ ಜನಪದ ಅಹಾರ ಮತ್ತು ವೈದ್ಯ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಸಿಂಡಿಕೇಟ್ ಸದಸ್ಯೆ ಚೈತ್ರಾ ನಾರಾಯಣ್, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ಶಿವಪ್ಪ, ಸ್ಥಳ: ಗ್ರಂಥಾಲಯ ಸಭಾಂಗಣ, ಮೈಸೂರು ವಿವಿ ಗ್ರಂಥಾಲಯ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಪ್ರತಿಷ್ಠಾಪನಾ 'ವಜ್ರ ಮಹೋತ್ಸವ', ವಿದ್ವಾನ್ ಚಂದನ್‌ಕುಮಾರ್ ಅವರಿಂದ 'ಮುರಳಿಯ ನಾದವ ಕೇಳಿ' ವೇಣು ವಾದನ, ವಿದ್ವಾನ್ ಕೇಶವ್ ಮೋಹನ್ ಕುಮಾರ್ (ವಯೋಲಿನ್), ವಿದ್ವಾನ್ ಅರ್ಜುನ್ ಕುಮಾರ್ (ಮೃದಂಗ), ವಿದ್ವಾನ್ ಜಿ.ಎಸ್. ರಾಮಾನುಜಂ (ಘಟಂ), ಸ್ಥಳ: ಶತಮಾನೋತ್ಸವ ಭವನ, ಶಾರದಾ ವಿಲಾಸ ಕಾಲೇಜು ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ.

ಸಿದ್ಧ ಸಮಾಧಿ ಯೋಗ ಶಿಬಿರ ಪರಿಚಯ ಕಾರ್ಯಕ್ರಮ

ಮೈಸೂರು, ಜೂ.1– ಮೈಸೂರಿನ ಕುವೆಂಪು ನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದಲ್ಲಿ ಸಿದ್ಧ ಸಮಾಧಿ ಯೋಗ ಶಿಬಿರವನ್ನು ಜೂ.6ರಿಂದ 14 ದಿನಗಳ ಕಾಲ ಏರ್ಪಡಿಸಲಾಗಿದ್ದು, ಉಚಿತ ಪರಿಚಯ ಕಾರ್ಯಕ್ರಮವನ್ನು ಜೂ.4ರ ಸಂಜೆ 6.30ಕ್ಕೆ ಏರ್ಪಡಿಸಲಾಗಿದೆ.

ಹೆಸರು ನೋಂದಣಿ ಹಾಗೂ ವಿವರಗಳಿಗಾಗಿ ಸಂಸ್ಥೆಯ ಧರ್ಮದರ್ಶಿ ಹೆಚ್.ಎಸ್.ರಮೇಶ್ ಚಂದ್ರ ಮೊ. 9448458050, ಪಿ.ಎ.ಮನೋಹರ್ ರಾವ್ ಮೊ.8618762110 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.1– ಮೈಸೂರು ನಗರದಲ್ಲಿ 1ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಕಡು ಬಡ ಬ್ರಾಹ್ಮಣ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ 2022–23ನೇ ಸಾಲಿನ ವಿದ್ಯಾರ್ಥಿ ವೇತನಗಳಿಗಾಗಿ ಶ್ರೀಮತಿ ನಂಜನಗೂಡು ಶಾರದಮ್ಮ ಸ್ಮಾರಕ ಧರ್ಮ ಸಂಸ್ಥೆ ವತಿಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ನಿಗದಿತ ಅರ್ಜಿ ನಮೂನೆಗಳನ್ನು 'ಮ್ಯಾನೇಜಿಂಗ್ ಟ್ರಸ್ಟಿ, ಶ್ರೀಮತಿ ನಂಜನಗೂಡು ಶಾರದಮ್ಮ ಸ್ಮಾರಕ ಧರ್ಮ ಸಂಸ್ಥೆ(ರಿ.), ನಂ.4944, 8ನೇ ಮುಖ್ಯ ರಸ್ತೆ, ಎರಡನೇ ಹಂತ, ವಿಜಯನಗರ, ಮೈಸೂರು–570 017' ಇವರಿಗೆ ಪೋಸ್ಟ್ ಕಾರ್ಡ್‌ವೊಂದರಲ್ಲಿ ಕೋರಿಕೆ ಸಲ್ಲಿಸಿ, ಪಡೆಯಬಹುದು. ಅರ್ಜಿಗಳನ್ನು ಪಡೆದುಕೊಳ್ಳಲು ಮತ್ತು ಸಂಸ್ಥೆಗೆ ಸಲ್ಲಿಸಲು ಕಡೆಯ ದಿನಾಂಕ ಜೂ.11.

ಬಂಜೆತನ ನಿವಾರಣಾ ಶಿಬಿರದಲ್ಲಿ 50 ದಂಪತಿಗೆ ಉಚಿತ ಚಿಕಿತ್ಸೆ

ಅತ್ಯಾಧುನಿಕ ಚಿಕಿತ್ಸೆ ಮೂಲಕ ಸಂತಾನ ಸಮಸ್ಯೆ ನಿವಾರಣೆ: ಕೆಬಿಜಿ



ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸಂತಸ ಐವಿಎಫ್ ಅಂಡ್ ಎಂಡೋ ಸರ್ಜರಿ ಇನ್‌ಸ್ಟಿಟೂಟ್ ಆವರಣದಲ್ಲಿ ನಡೆದ ಉಚಿತ ತಪಾಸಣಾ ಶಿಬಿರವನ್ನು 'ಮೈಸೂರು ಮಿತ್ರ' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಹಾಗೂ ಶ್ರೀಮತಿ ರ್‍ಯಾಲಿ ಗಣಪತಿ ದಂಪತಿ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಎಸ್.ಜಯಶ್ರೀ, ಡಾ.ಶಿಲ್ಪಾ ಸಂತೃಪ್ತ್, ಡಾ.ಪ್ರಿಯಾ ಮಹೇಶ್, ಡಾ.ಪ್ರಕಾಶ್ ಪ್ರಭು, ಡಾ.ರೂಪ ಪ್ರಕಾಶ್, ಡಾ.ನವ್ಯಶ್ರೀ, ಡಾ.ಅಂಬರೀಷ್ ಬಂಡಿವಾಡ್, ಡಾ.ನಿವೇದಿತಾ ಶೆಟ್ಟಿ, ಸಂತಸ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕಿ ಡಾ.ಸೌಮ್ಯ ದಿನೇಶ್ ಹಾಗೂ ಡಾ.ಎನ್.ಮಧು ಅವರನ್ನು ಕಾಣಬಹುದು.

ಮೈಸೂರು, ಜೂ. 1(ಎಂಟಿವೈ)– ಸಂತಾನ ಭಾಗ್ಯವಿಲ್ಲದೇ ಕೊರಗುತ್ತಿರುವ ದಂಪತಿಗಳಿಗಾಗಿ ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸಂತಸ ಐವಿಎಫ್ ಅಂಡ್ ಎಂಡೋ ಸರ್ಜರಿ ಇನ್‌ಸ್ಟಿಟೂಟ್‌ನಲ್ಲಿ ನಡೆದ ಬಂಜೆತನ ನಿವಾರಣಾ ಉಚಿತ ತಪಾಸಣಾ ಶಿಬಿರದಲ್ಲಿ 50ಕ್ಕೂ ಹೆಚ್ಚು ದಂಪತಿಗಳು ತಪಾಸಣೆಗೊಳಗಾಗಿ ಚಿಕಿತ್ಸೆ ಪಡೆದರು.

ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸಂತಸ ಐವಿಎಫ್ ಅಂಡ್ ಎಂಡೋ ಸರ್ಜರಿ ಇನ್‌ಸ್ಟಿಟೂಟ್ ಆವರಣದಲ್ಲಿ ನಡೆದ ಉಚಿತ ತಪಾಸಣಾ ಶಿಬಿರವನ್ನು 'ಮೈಸೂರು ಮಿತ್ರ' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಹಾಗೂ ಶ್ರೀಮತಿ ರ್‍ಯಾಲಿ ಗಣಪತಿ ದಂಪತಿ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಕೆ.ಬಿ.ಗಣಪತಿ ಅವರು, ಹೆಣ್ಣಿಗೆ ತನ್ನದೇ ಆದ ಆಸೆಗಳಿರುತ್ತವೆ. ಅದರಲ್ಲೂ ಮದುವೆಯಾದ ಹೆಣ್ಣು ತಾನು ತಾಯಿ ಆಗಬೇಕು. ನನಗೂ ಮಕ್ಕಳಾಗಬೇಕು ಎಂದು ಬಯಸುವುದು ಸಾಮಾನ್ಯ. ಆದರೆ ಮದುವೆಯಾದರೂ ಮಕ್ಕಳಾಗದೇ ಇರುವ ದಂಪತಿಗಳ ಸಂಕಷ್ಟ ಹೇಳತೀರದ್ದಾಗಿದೆ. ಯಾವುದಾದರೂ ಸಭೆ, ಸಮಾರಂಭಕ್ಕೆ ಹೋದಾಗ ಪರಿಚಯಸ್ಥರು ಕುಶಲೋಪರಿ ವಿಚಾರಿಸುವ ವೇಳೆ ನಿಮಗೆ ಎಷ್ಟು ಮಕ್ಕಳು ಎಂದು ಕೇಳುವುದು ಸಾಮಾನ್ಯ. ಇಂತಹ ಸಂದರ್ಭದಲ್ಲಿ ಮಕ್ಕಳಾಗದೇ ಇದ್ದವರ ಸಂಕಷ್ಟ ಅಷ್ಟಿಷ್ಟಲ್ಲ ಎಂದರು.

ಆ ಸಂದರ್ಭದಲ್ಲಿ ಮಕ್ಕಳಾಗದೇ ಇದ್ದವರು ಅನುಭವಿಸುವ ನೋವು ಹೇಳತೀರದು. ಅಲ್ಲದೆ, ಮಕ್ಕಳಾಗದೇ ಇರುವವರು ಹಲವು ಸಂದರ್ಭದಲ್ಲಿ ತುಂಬಾ ಮುಜುಗರಕ್ಕೆ ಒಳಗಾಗುತ್ತಾರೆ. ಅಂತಹ ಕಷ್ಟದ ಸಂದರ್ಭ ಎದುರಿಸುತ್ತಿರುವ, ಮಕ್ಕಳಾಗದ ದಂಪತಿಗಳಿಗಾಗಿ ಅತ್ಯಾಧುನಿಕ ಚಿಕಿತ್ಸೆಯ ಮೂಲಕ ಸಂತಾನ ಸಮಸ್ಯೆ ನಿವಾರಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಹಿಂದೆ ಮಳೆಯೂ ಆಗಬೇಕು, ಮಕ್ಕಳೂ ಇರಬೇಕು ಎಂದು ಬಯಸುತ್ತಿದ್ದರು. ಆದರೆ ಈಗ ಅತಿಯಾದ ಮಳೆ ಹಾಗೂ ಹೆಚ್ಚಿನ ಮಕ್ಕಳು ಎರಡೂ ಆಗಬಾರದು. ಹೆಚ್ಚು ಮಳೆಯಾದರೆ ಅತಿವೃಷ್ಟಿಯಾಗುತ್ತದೆ. ಹೆಚ್ಚು ಮಕ್ಕಳು ಮಾಡಿಕೊಂಡರೆ ಜನಸಂಖ್ಯಾ ಸ್ಫೋಟದ ಸಮಸ್ಯೆ ಉಂಟಾಗುತ್ತದೆ ಎಂದು ಇದೇ ವೇಳೆ ಅವರು ತಿಳಿಸಿದರು.

'ಮೈಸೂರು ಮಿತ್ರ' ಪತ್ರಿಕೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಮತಿ ರ್‍ಯಾಲಿ ಗಣಪತಿ ಅವರು ಮಾತನಾಡಿ, ಸಂತಾನವಿಲ್ಲದೆ ಕೊರಗುವ ದಂಪತಿಗಳಿಗೆ ಐವಿಎಫ್ ವರದಾನವಾಗಿದೆ. ಈ ಚಿಕಿತ್ಸಾ ವಿಧಾನ ಸ್ವಲ್ಪ ದುಬಾರಿಯಾದರೂ ಇಲ್ಲಿರುವ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಅತ್ಯಾಧುನಿಕ ಚಿಕಿತ್ಸಾ ವಿಧಾನದ ಮೂಲಕ ಬಂಜೆತನವನ್ನು ನಿವಾರಿಸುತ್ತಾರೆ ಎಂಬ ವಿಶ್ವಾಸವಿದೆ. ದಂಪತಿಗಳು ಈ ವೈದ್ಯರ ಮೇಲೆ ನಂಬಿಕೆ ಇಟ್ಟು ಚಿಕಿತ್ಸೆ ಪಡೆದುಕೊಳ್ಳಬೇಕು. ನಿಮ್ಮ ಬಯಕೆಯಂತೆ ನಿಮಗೆ ಸಂತಾನ ಕರುಣಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಕಾಮಾಕ್ಷಿ ಆಸ್ಪತ್ರೆಯ ವೈದ್ಯ ಡಾ.ಪ್ರಕಾಶ್ ಕೆ.ಪ್ರಭು ಮಾತನಾಡಿ, ಮಕ್ಕಳಿಲ್ಲದ ದಂಪತಿಗಳಿಗಾಗಿ ಐವಿಎಫ್ ಚಿಕಿತ್ಸಾ ವಿಧಾನದ ಮೂಲಕ ಮಕ್ಕಳಾಗುವಂತೆ ಮಾಡಲಾಗುತ್ತದೆ. ಇದು ಒಳ್ಳೆಯ ಬೆಳವಣಿಗೆ. ಇದಕ್ಕೆ ಖರ್ಚು ಹೆಚ್ಚಾದರೂ ಫಲಿತಾಂಶ ಪಡೆಯಬಹುದಾಗಿದೆ. ಸರ್ಕಾರ ಈ ಚಿಕಿತ್ಸೆಗೆ 'ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ' ಯೋಜನೆಯಡಿ ಆರ್ಥಿಕ ನೆರವು ನೀಡಲು ಮುಂದಾದರೆ, ಇನ್ನಷ್ಟು ಬಡ ಕುಟುಂಬದ ದಂಪತಿಗಳು ಈ ಚಿಕಿತ್ಸೆ ಮೂಲಕ ಮಕ್ಕಳನ್ನು ಪಡೆಯಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಮೈಸೂರು ಪ್ರಸೂತಿ ಶಾಸ್ತ್ರ ಮತ್ತು ಸ್ತ್ರೀ ರೋಗ ತಜ್ಞರ ಸಂಘದ ಅಧ್ಯಕ್ಷೆ ಡಾ.ರೂಪಾ ಪ್ರಕಾಶ್ ಸಂತಾನ ಹೀನತೆ ಸಾಮಾಜಿಕ ಪಿಡುಗಾಗಿದ್ದು, ಸಾಕಷ್ಟು ಮಂದಿ ಖಿನ್ನತೆಗೆ ಒಳಗಾಗಲು ಕಾರಣವಾಗುತ್ತಿದೆ. ಈ ಹಿಂದೆ ಸಂತಾನ ಹೀನತೆಯ ಪ್ರಮಾಣ ಶೇ.5ರಷ್ಟಿತ್ತು. ಆದರೆ, ಕಳೆದ ಕೆಲವು ವರ್ಷಗಳಿಂದ ಶಿಕ್ಷಣ, ಉದ್ಯೋಗ ಸೇರಿದಂತೆ ಕೆಲವು ದಂಪತಿಗಳು ಮಕ್ಕಳಾಗುವುದನ್ನು ಮುಂದೂಡುತ್ತಿದ್ದಾರೆ. ಇದರೊಂದಿಗೆ ಒತ್ತಡ ಹಾಗೂ ಇನ್ನಿತರ ಕಾರಣಗಳಿಂದಲೂ ಸಂತಾನ ಹೀನತೆ ಸಮಸ್ಯೆ ಕಾಡುತ್ತಿದೆ. ಇದರಿಂದಾಗಿ ಸಂತಾನ ಹೀನತೆಯ ಪ್ರಮಾಣ ಶೇ.15ಕ್ಕೆ ಏರಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸಂತಾನ ಹೀನತೆಯಿಂದ ದಂಪತಿಗಳ ಆರೋಗ್ಯ ಸಮಸ್ಯೆಗಿಂತ ಮನೋ ವೈಕಲ್ಯಕ್ಕೆ ತುತ್ತಾಗುತ್ತಿದ್ದಾರೆ. ಈ ಹಿಂದೆ ಹೆಣ್ಣು ಮಕ್ಕಳು ಈ ವಿಚಾರವಾಗಿ ಸಾಕಷ್ಟು ಶೋಷಣೆಗೆ ಒಳಾಗುತ್ತಿದ್ದರು. ಮಕ್ಕಳಾಗದಿದ್ದರೆ ಮಹಿಳೆಯರನ್ನೇ ದೂರುತ್ತಿದ್ದರು. ಅಲ್ಲದೆ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕಾಗಿ ಪುರುಷರು ಮೂರ್ನಾಲ್ಕು ಮದುವೆಯಾಗಿರುವ ಉದಾಹರಣೆಯೂ ನಮ್ಮ ಮುಂದೆ ಇದೆ. ಸಂತಾನಹೀನತೆ ಸಮಸ್ಯೆಗೆ ಮಹಿಳೆಯರಂತೆ ಪುರುಷರೂ ಕಾರಣರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಐವಿಎಫ್ ಚಿಕಿತ್ಸೆಗೆ ದಂಪತಿಗಳು ಕಡ್ಡಾಯವಾಗಿ ಬರಬೇಕು. ಮಕ್ಕಳನ್ನು ಪಡೆಯಲು ಸಮಸ್ಯೆ ಎದುರಿಸುತ್ತಿರುವ ದಂಪತಿಗಳು ಈ ಸಂತಸ ಐವಿಎಫ್‌ನಂತಹ ಸಂಸ್ಥೆಗಳಲ್ಲಿ ಸೂಕ್ತ ಚಿಕಿತ್ಸೆಯೊಂದಿಗೆ ಮಾರ್ಗದರ್ಶನ ಪಡೆಯುವ ಮೂಲಕ ಮಕ್ಕಳನ್ನು ಪಡೆಯಬಹುದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ವೈದ್ಯ ಡಾ.ರಾಜಶೇಖರ್, ಕವಯತ್ರಿ ಡಾ.ಲತಾ ರಾಜಶೇಖರ್, ಹಿರಿಯ ವೈದ್ಯ ಡಾ. ಅಂಬರೀಷ್ ಬಂಡಿವಾಡ್, ಮೈಸೂರು ಪ್ರಸೂತಿ ಶಾಸ್ತ್ರ ಮತ್ತು ಸ್ತ್ರೀ ರೋಗ ತಜ್ಞರ ಸಂಘದ ಕಾರ್ಯದರ್ಶಿ ಡಾ.ಎನ್. ಪುಷ್ಪಲತಾ, ಡಾ.ಸೋನಿಯಾ ಮಂದಪ್ಪ, ಡಾ.ಶ್ವೇತ ಪದಕಿ, ಸಂತಸ ಐವಿಎಫ್‌ನ ನಿರ್ದೇಶಕಿ ಡಾ.ಯೋಗಿತಾ ಸಂಜಯ್, ಸಂತಸ ಐವಿಎಫ್ ಅಂಡ್ ಎಂಡೋ ಸರ್ಜರಿ ಇನ್‌ಸ್ಟಿಟ್ಯೂಟ್‌ಯ ವ್ಯವಸ್ಥಾಪಕ ನಿರ್ದೇಶಕಿ ಡಾ.ಸೌಮ್ಯ ದಿನೇಶ್, ಡಾ. ನಿವೇದಿತ ಶೆಟ್ಟಿ(ಮಣಿಪಾಲ್ ಆಸ್ಪತ್ರೆ), ಚಿತ್ರ ಆಸ್ಪತ್ರೆ ಐಇಎಫ್ ಕೇಂದ್ರದ ಡಾ.ಪ್ರಿಯಾ ಮಹೇಶ್, ಸಂತಸ ಐವಿಎಫ್‌ನ ಡಾ. ಯೋಗಿತಾ ರಾವ್, ಸಿರಿ ಕೇರ್ ಐವಿಎಫ್ ಸಂಸ್ಥೆಯ ಡಾ.ಶಿಲ್ಪಾ ಸಂತೃಪ್ತ್, ಸ್ಪಂದನಾ ಐವಿಎಫ್‌ನ ಡಾ.ಜಶ್ರೀ ವಿರೂಪಾಕ್ಷ, ನವ್ಯ ಐಇಎಫ್‌ನ ಡಾ.ನವ್ಯ ನೈರುತ್ಯ, ಮಾತೃಛಾಯ ಐಇಎಫ್ ಡಾ.ಚೇತನ, ಪ್ರೇರಣ ಐಇಎಫ್ ಡಾ.ಮಾಧುರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

> ಬರಗಾಲದ ಸಂದರ್ಭದಲ್ಲಿ ಮಳೆ ಬರಿಸುವ ನಿಟ್ಟಿನಲ್ಲಿ ವಿಜ್ಞಾನಿಗಳು ಆಗಸದಲ್ಲಿ ಮೋಡ ಬಿತ್ತನೆ ಕಾರ್ಯ ನಡೆಸುತ್ತಾರೆ. ಆ ಮೂಲಕ ಆಗಸದಲ್ಲಿರುವ ಮೋಡ ಕರಗಿಸಿ, ಮಳೆ ಬರುವಂತೆ ಮಾಡುತ್ತಾರೆ. ಮೋಡ ಬಿತ್ತನೆಯ ಮಾದರಿಯಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಐವಿಎಫ್ ಮೂಲಕ ಮಕ್ಕಳಾಗದ ದಂಪತಿಗಳಿಗೆ ಸಂತಾನ ಕರುಣಿಸುವ ಮಹತ್ತರ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ. ಈ ಶಿಬಿರದ ಸದುಪಯೋಗವನ್ನು ಮಕ್ಕಳಾಗದೇ ಇರುವ ದಂಪತಿಗಳು ಪಡೆದುಕೊಳ್ಳಬೇಕು.
>
> – ಕೆ.ಬಿ.ಗಣಪತಿ, *ಸಂಸ್ಥಾಪಕ ಸಂಪಾದಕರು, ಮೈಸೂರು ಮಿತ್ರ*



ಮೈಸೂರಿನ ರೇಸ್‌ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಟ್ರೇಸರ್ ಬುಲೆಟ್' ಕುದುರೆಯ ಮಾಲೀಕ ಕರ್ನಲ್ ಕುಲದೀಪ್‌ಸಿಂಗ್ ಗರ್ಚಾ ಅವರಿಗೆ ಮೈಸೂರು ರೇಸ್‌ಕ್ಲಬ್ ಸ್ಟೀವರ್ಡ್ ಜಿ.ಕೆ.ಬಾಲಕೃಷ್ಣ ಅವರು 'ಮೈಸೂರು ಸಿಟಿ ಕಾರ್ಪೋರೇಷನ್ ಟ್ರೋಫಿ'ಯನ್ನು ವಿತರಿಸಿದರು. ಇದರ ಜಾಕಿ ಪಿ.ಎಸ್.ಕವಿರಾಜ್, ತರಬೇತುದಾರ ಎಂ.ಪ್ರತಾಪ್ ಕಾಮತ್ ಅವರಲ್ಲದೆ ಚಿತ್ರದಲ್ಲಿ ಎಡದಿಂದ ಬಲಕ್ಕೆ– ವೈ.ಪಿ.ಉಪಾಧ್ಯ ಶಂಕರ್, ಕೆ.ಎಂ.ಚಂದ್ರೇಗೌಡ, ಹೆಚ್.ಕೆ. ರಮೇಶ್, ವೈ.ಬಿ.ಗಣೇಶ್ (ಅಧ್ಯಕ್ಷ), ಬಿ.ಎನ್.ಕಾರಿಯಪ್ಪ, ಟಿ.ಡಿ.ಮಹೇಶ್, ಬಿ.ಯು. ಚೆಂಗಪ್ಪ, ಜಯರಾಜ್ ಅರಸ್, ಎಂ.ಎಲ್.ಕಾಂತರಾಜ್ ಅರಸ್ ಅವರನ್ನು ಕಾಣಬಹುದು.

ಬೊಮ್ಮಾಯಿ ಸಿಎಂ ಆದ ಬಳಿಕ ಕೋಮು ದ್ವೇಷ ಮುನ್ನೆಲೆಗೆ

ಬಿ.ಎಸ್.ಯಡಿಯೂರಪ್ಪ ಅಧಿಕಾರಾವಧಿಯಲ್ಲಿ ಇಂತಹ ಪರಿಸ್ಥಿತಿ ಇರಲಿಲ್ಲ ; ಎಐಟಿಯುಸಿ ರಾಜ್ಯಾಧ್ಯಕ್ಷ ಹೆಚ್.ವಿ.ಅನಂತ ಸುಬ್ಬರಾವ್

ಮೈಸೂರು,ಜೂ.1(ಪಿಎಂ)– ರಾಜ್ಯದಲ್ಲಿ ಕೋಮು ದ್ವೇಷ ಹೆಚ್ಚಾಗುತ್ತಿದ್ದು, ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಇಂತಹ ಪರಿಸ್ಥಿತಿ ಇರಲಿಲ್ಲ. ಆದರೆ ಬಸವರಾಜು ಬೊಮ್ಮಾಯಿ ಮುಖ್ಯಮಂತ್ರಿ ಆದ ಬಳಿಕ ಕೋಮು ದ್ವೇಷ ಹೆಚ್ಚು ಮುನ್ನೆಲೆಗೆ ಬರುತ್ತಿದೆ ಎಂದು ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಹೆಚ್.ವಿ.ಅನಂತ ಸುಬ್ಬರಾವ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ನಡೆದ ಎಐಟಿಯುಸಿ 11ನೇ ರಾಜ್ಯ ಸಮ್ಮೇಳನದ ಪ್ರತಿನಿಧಿ ಸಮಾವೇಶದಲ್ಲಿ ರಾಜ್ಯದಲ್ಲಿನ ಕೋಮು ದ್ವೇಷದ ವಾತಾವರಣ, ರಾಜ್ಯ ಸರ್ಕಾರ ಭ್ರಷ್ಟಾಚಾರ ಸೇರಿದಂತೆ ಹಲವು ವಿಚಾರಗಳು ಚರ್ಚೆಯಾದವು. ಅಲ್ಲದೆ, ಪಠ್ಯ ಪುಸ್ತಕ ಪರಿಷ್ಕರಣೆಯ ಕಾರ್ಯವೈಖರಿ ವಿರುದ್ಧವೂ ಆಕ್ರೋಶ ವ್ಯಕ್ತವಾಯಿತು ಎಂದು ತಿಳಿಸಿದರು.

ರಾಜ್ಯದಲ್ಲಿರುವ ಬೇಕಾದಷ್ಟು ಸಮಸ್ಯೆಗಳ ಬಗ್ಗೆ ಚರ್ಚೆಯೇ ಆಗುತ್ತಿಲ್ಲ. ಹಿಂದೂ ಪರ ಹೋರಾಟಗಾರ ಪ್ರಮೋದ್ ಮುತಾಲಿಕ್ ಮಾತನಾಡುವುದು ನೋಡಿದರೆ ಆಕ್ರೋಶ ಬರುತ್ತದೆ ಎಂದು ಕಿಡಿಕಾರಿದರಲ್ಲದೆ, ರಾಜ್ಯ ಸಾರಿಗೆ ನೌಕರರ ಮುಷ್ಕರ ಸಂಬಂಧ ಕೋಡಿಹಳ್ಳಿ ಚಂದ್ರಶೇಖರ್ 35 ಕೋಟಿ ರೂ. ಪಡೆದಿರುವ ಆರೋಪ ಸಂಬಂಧ ಸಿಬಿಐ ತನಿಖೆಗೆ ಒತ್ತಾಯಿಸಲು ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಯಿತು ಎಂದರು.

ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ಹೆಚ್.ಆರ್.ಶೇಷಾದ್ರಿ ಮಾತನಾಡಿ, ಸಮಾವೇಶದಲ್ಲಿ 23 ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಹೆಚ್.ವಿ.ಅನಂತ ಸುಬ್ಬರಾವ್ ರಾಜ್ಯಾಧ್ಯಕ್ಷರಾಗಿ ಪುನರ್ ಆಯ್ಕೆಯಾಗಿದ್ದಾರೆ. 20ಕ್ಕೂ ಹೆಚ್ಚು ಜಿಲ್ಲೆಗಳಿಂದ ಸುಮಾರು 300 ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು ಎಂದರಲ್ಲದೆ, ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ಜನ ವಿರೋಧಿ ನೀತಿ ಬಗ್ಗೆ ಸಮಾವೇಶದಲ್ಲಿ ಆಕ್ರೋಶ ವ್ಯಕ್ತವಾಯಿತು. ದೆಹಲಿಯಲ್ಲಿ ರೈತರು ನಡೆಸಿದ ಸುದೀರ್ಘ ಹೋರಾಟದ ಮಾದರಿಯಲ್ಲಿ ಕಾರ್ಮಿಕ ಸಂಘಟನೆಗಳು ಚಳವಳಿ ನಡೆಸುವ ಬಗ್ಗೆ ಚಿಂತನೆ ನಡೆಸಲು ನಿರ್ಣಯಿಸಲಾಯಿತು ಎಂದು ತಿಳಿಸಿದರು. ಸಂಘಟನೆ ಮುಖಂಡ ಎನ್.ಕೆ.ದೇವದಾಸ್ ಸೇರಿದಂತೆ ಮತ್ತಿತರರು ಗೋಷ್ಠಿಯಲ್ಲಿದ್ದರು.

ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯಲ್ಲಿ ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರ

150 ರೋಗಿಗಳಿಗೆ ಉಚಿತ ಸ್ಟಂಟ್ ಅಳವಡಿಕೆ

ಮೈಸೂರು, ಜೂ.1– ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಅಮೆರಿಕದ ಮೆಡ್ಟ್ರಾನಿಕ್ಸ್, ಹಾಗೂ ಡಾ.ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್, ಅಮೆರಿಕದ ವಿಸ್ಕಿನ್‌ಸನ್ ಅವರ ಸಹಯೋಗದೊಂದಿಗೆ 150 ರೋಗಿಗಳಿಗೆ ಆಂಜಿಯೋಪ್ಲಾಸ್ಟಿ ಕಾರ್ಯಾಗಾರವನ್ನು ಜೂ.24ರಿಂದ 26ರವರೆಗೆ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಾಗಾರದಲ್ಲಿ 150 ಜನ ಬಡ ರೋಗಿಗಳು ಹಾಗೂ ಬಡತನ ರೇಖೆಗಿಂತ ಕೆಳಗಿರುವ 150 ಜನ ಬಡ ರೋಗಿಗಳಿಗೆ ಉನ್ನತ ಗುಣಮಟ್ಟದ ಮೆಡಿಕೇಟೆಡ್ ಸ್ಟಂಟ್‌ಗಳನ್ನು ಉಚಿತವಾಗಿ ಅಳವಡಿಸಲಾಗುತ್ತದೆ. ಈಗಾಗಲೇ ಅಂಜಿಯೋಗ್ರಾಂ ತಪಾಸಣೆಗೆ ಒಳಪಟ್ಟಿರುವ ರೋಗಿಗಳು ಈ ಸೌಲಭ್ಯವನ್ನು ಪಡೆಯಬಹುದಾಗಿದ್ದು, ರೋಗಿಗಳು ದಾಖಲಾತಿ ವೇಳೆ ಬಿಪಿಎಲ್ ಕಾರ್ಡ್ ಅಥವಾ ಕಡಿಮೆ ಆದಾಯ ಪ್ರಮಾಣ ಪತ್ರವನ್ನು ಹೊಂದಿರಬೇಕು. ಬಡತನ ರೇಖೆಗಿಂತ ಕೆಳಗಿರುವ ರೋಗಿಗಳು ಜೂ.20ರೊಳಗಾಗಿ ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಜಯನಗರ 9ನೇ ಬ್ಲಾಕ್ ಬೆಂಗಳೂರು–560069, ದೂ. 080–22977433/322, ಮೊ. 9480827888ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಸೇವಾರತ್ನ' ಪ್ರಶಸ್ತಿ ಪ್ರದಾನ



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ 'ಡಾ.ಬಿ.ಆರ್. ಅಂಬೇಡ್ಕರ್ ಸೇವಾರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಪ್ರಗತಿಪರ ರೈತ ಪುಟ್ಟಯ್ಯ ಮಾಲಾರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು ಮತ್ತಿತರರಿದ್ದರು

ಮೈಸೂರು, ಜೂ.1(ಎಂಕೆ)– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ 'ಡಾ.ಬಿ.ಆರ್. ಅಂಬೇಡ್ಕರ್ ಸೇವಾರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ನಗರ ಜೆಎಲ್‌ಬಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಗತಿಪರ ರೈತ ಪುಟ್ಟಯ್ಯ ಮಾಲಾರ್, ಅವರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ವೈದ್ಯ ಡಾ.ಪಿ.ನರಸಿಂಹಮೂರ್ತಿ, ಮಂಡ್ಯದ ಅಂಬೇಡ್ಕರ್ ಅಧ್ಯಯನ ಸಂಸ್ಥೆ ಅಧ್ಯಕ್ಷ ಡಾ.ಕೆ.ಎಂ.ಸುರೇಶ್, ಸಮಾಜ ಸೇವಕ ಹೆಚ್.ಪಿ.ಶಾಂತರಾಜು ಹಾಗೂ ಹೆಚ್.ಎಂ.ಲೋಕೇಶ್ ಅವರನ್ನು ಸನ್ಮಾನಿಸಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನೀಡಿದ ಭಾರತ ಸಂವಿಧಾನ ನಮಗೆ ಸ್ವಾಭಿಮಾನದಿಂದ ಬದುಕುವ, ಉತ್ತಮ ಬದುಕನ್ನು ಕಟ್ಟಿಕೊಳ್ಳುವ ಅವಕಾಶವನ್ನು ನೀಡಿದೆ. ಅದರಂತೆ ನಾವು ಜವಾಬ್ದಾರಿ ಅರಿತು ನಮ್ಮ ಕೆಲಸದಲ್ಲಿ ತೊಡಗಿದರೆ ಯಾರ ಬಳಿಯು ಕೈಚಾಚುವ ಅಗತ್ಯವಿರುವುದಿಲ್ಲ. ಸರ್ಕಾರ ನೀಡಿದ 4 ಎಕರೆ ಭೂಮಿಯಿಂದ 40–50 ಎಕರೆ ಭೂಮಿ ಸಂಪಾದನೆ ಮಾಡಿದ್ದೇನೆ. ಇದಕ್ಕೆ ನಾನು ಅಳವಡಿಸಿಕೊಂಡ ಸಮಗ್ರ ಕೃಷಿ ಪದ್ಧತಿ ಕಾರಣ. ಕೃಷಿ ಬಿಟ್ಟು ಬೇರೆ ಕೆಲಸವೇ ಬರಲ್ಲ ಎಂದ ಅವರು, ರೈತರು ದೇಶಕ್ಕೆ ಅನ್ನ ನೀಡುವವರಾಗಿದ್ದು, ದುಂದು ವೆಚ್ಚ ಮಾಡದೆ ಪೂರ್ಣ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿ ಕೊಳ್ಳುವಂತೆ ಸಲಹೆ ನೀಡಿದರು.

ಸಮಾರಂಭವನ್ನು ಉದ್ಘಾಟಿಸಿ 'ಪ್ರಸ್ತುತದಲ್ಲಿ ಅಂಬೇಡ್ಕರ್ ಚಿಂತನೆ' ಕುರಿತು ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ಪಿ. ಮಹೇಶ್ ಚಂದ್ರಗುರು, ಡಾ.ಬಿ.ಆರ್. ಅಂಬೇಡ್ಕರ್ ನಮಗೆ ವಿಶ್ವಶ್ರೇಷ್ಠ ಸಂವಿಧಾನ ನೀಡಿದ್ದು, ಸಮಸ್ತ ಭಾರತೀಯರು ಸಂವಿಧಾನದ ಫಲಾನುಭವಿಗಳಾಗಿದ್ದಾರೆ. ಸಮಾಜ ಪರಿವರ್ತನೆ, ಸಮಾನ ಆರ್ಥಿಕ ವ್ಯವಸ್ಥೆ ನಿರ್ಮಾಣಕ್ಕೆ ಬದುಕಿನುದ್ದಕ್ಕೂ ಹೋರಾಟ ಮಾಡಿದ ಅವರು, ಶೋಷಣೆಯ ವಿರುದ್ಧ ಬಂಡಾಯದ ಸಂಕೇತವಾಗಿ ನಿಂತ ರಾಷ್ಟ್ರಪ್ರೇಮಿ ಎಂದರು.

ಅನರ್ಹರ ಸರ್ಕಾರ: ರಾಜ್ಯದಲ್ಲಿ ಈಗಿರುವುದು ಅನರ್ಹರ ಸರ್ಕಾರ. ಹಿಂದುತ್ವದ ಭ್ರಮೆಯನ್ನು ಸೃಷ್ಟಿ ಮಾಡುವ ಮೂಲಕ ಸಮಾನತೆ ಎಂಬುದನ್ನೇ ಇಲ್ಲದಂತಾಗಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಯೋಗ್ಯತೆ, ವಿದ್ವತ್ತು ಇದ್ದ ಸ್ಥಳದಲ್ಲಿ ಜಾತಿ ಬರುವುದಿಲ್ಲ. ಭಾರತ ಪ್ರಕಾಶಿಸುತ್ತಿದೆ ಎಂಬುದೆಲ್ಲಾ ಸುಳ್ಳು. ದೇಶದಲ್ಲಿ ಮೋದಿ ಮತ್ತು ಅವರ ಬಳಗ ಬಿಟ್ಟು ಇನ್ನಾರು ಪ್ರಕಾಶಿಸುತ್ತಿಲ್ಲ ಸರ್ಕಾರದ ವಿರುದ್ಧ ಕಿಡಿಕಾರಿದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಭಾರತೀಯ ದಲಿತ ಸಾಹಿತ್ಯ ಅಕಾಡಮಿ ಅಧ್ಯಕ್ಷ ಡಾ.ಸಿ.ವೆಂಕಟೇಶ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಸುರೇಶ್ ಮಾಲಂಗಿ, ಜಿಲ್ಲಾ ಸವಿತಾ ಸಮಾಜ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಹೆಚ್.ಎಸ್. ಉಪ್ಪಾರ್ ಮತ್ತಿತರರಿದ್ದರು

ಅಪೋಲೋ ಬಿಜಿಎಸ್‌ನಲ್ಲಿ 102 ವರ್ಷದ ವೃದ್ಧರಿಗೆ ಅಪರೂಪದ ಶಸ್ತ್ರಚಿಕಿತ್ಸೆ

Apollo HOSPITALS

ಮೈಸೂರು, ಜೂ.1–ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ 102 ವರ್ಷದ ವೃದ್ಧರೊಬ್ಬರಿಗೆ ಅತ್ಯಂತ ಕಠಿಣವಾದ (ಹೈ ರಿಸ್ಕ್) ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ.

ಈ ವೃದ್ಧರ ಎಡ ಸೊಂಟದ ಮೂಳೆಯನ್ನು ಸರಿಪಡಿಸಲು ಅಪರೂಪದ ಮಾಡ್ಯುಲರ್ ಹಿಪ್ ರೀಪ್ಲೇಸ್‌ಮೆಂಟ್ ಸರ್ಜರಿಯನ್ನು ನಡೆಸಲಾಗಿದ್ದು, ಇದು ಇನ್‌ಸ್ಟಿಟ್ಯೂಟ್ ಆಫ್ ಆರ್ಥೋಪೆಡಿಕ್ಸ್ ಅಪೋಲೋ ಬಿಜಿಎಸ್ ಆಸ್ಪತ್ರೆ ಮತ್ತು ಮೈಸೂರು ನಗರದಲ್ಲಿ ಪ್ರಪ್ರಥಮವಾಗಿದೆ ಎಂದು ಬಿಜಿಎಸ್ ಅಪೋಲೋ ಆಸ್ಪತ್ರೆಯ ಮುಖ್ಯ ಆರ್ಥೋಪೆಡಿಕ್ಸ್ ಶಸ್ತ್ರ ಚಿಕಿತ್ಸಕರಾದ ಡಾ. ಟಿ.ಎನ್.ಬಾಲಕೃಷ್ಣಗೌಡ ತಿಳಿಸಿದರು.

ಮನೆಯಲ್ಲಿ ಆಯ ತಪ್ಪಿ ಬಿದ್ದ ಶ್ರೀಕಂಠಯ್ಯ ಎಂಬ ವೃದ್ಧರಿಗೆ ಎಡಗಾಲಿನ ಮೇಲೆ ಭಾರ ಬಿಡಲು ಸಾಧ್ಯವಾಗುತ್ತಿರಲಿಲ್ಲ. ಅವರನ್ನು ಪರೀಕ್ಷಿಸಿದಾಗ ಅವರ ಎಡ ಸೊಂಟದ ಹಿಪ್ ಜಾಯಿಂಟ್‌ನಲ್ಲಿ ಮುರಿತ ಉಂಟಾಗಿರುವುದು ಕಂಡು ಬಂತು. ಹೀಗಾಗಿ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು, ಅವರ ಎಡ ಸೊಂಟದ ಸಂದಿಯಲ್ಲಿ ಹಿಪ್ ರೀಪ್ಲೇಸ್‌ಮೆಂಟ್ ಶಸ್ತ್ರ ಚಿಕಿತ್ಸೆಯನ್ನು ಕೇವಲ 20 ನಿಮಿಷಗಳಲ್ಲಿ ಪೂರ್ಣಗೊಳಿಸಲಾಯಿತು. ಇದಾದ 24 ಗಂಟೆಗಳ ಒಳಗಾಗಿಯೇ ಅವರು ನಡೆದಾಡಲು ಶಕ್ತರಾದರು ಎಂದು ಡಾ. ಬಾಲಕೃಷ್ಣಗೌಡ ತಿಳಿಸಿದ್ದಾರೆ.

ಶಸ್ತ್ರ ಚಿಕಿತ್ಸೆ ನಂತರ ಕೀಲುಗಳು ಜಾರುವುದು, ರೀಪ್ಲೇಸ್‌ಮೆಂಟ್ ಸುತ್ತ ಮತ್ತೆ ಮುರಿತ ಉಂಟಾಗುವುದನ್ನು ತಪ್ಪಿಸಲು



ಶಸ್ತ್ರ ಚಿಕಿತ್ಸೆಯ ನಂತರ ವಿಶೇಷ ಕ್ರಮಗಳನ್ನು ರೂಪಿಸಲಾಗಿದೆ ಎಂದಿದ್ದಾರೆ. ಇದೇ ವೇಳೆ ಅರವಳಿಕೆ ತಜ್ಞರಾದ ಡಾ. ಆದರ್ಶ್ ಮಾತನಾಡಿ, ಯಾವುದೇ ತೊಡಕುಗಳನ್ನು ತಪ್ಪಿಸಲು ಪೀಡಿತ ಅಂಗಕ್ಕೆ ಮಾತ್ರ ಅರವಳಿಕೆ ನೀಡಲಾಯಿತು ಎಂದರು. ಶಸ್ತ್ರ ಚಿಕಿತ್ಸೆಗೊಳಗಾದ ಶ್ರೀಕಂಠಯ್ಯನವರ 71 ವರ್ಷದ ಪುತ್ರ ನಂಜುಂಡಸ್ವಾಮಿ, ತಮ್ಮ ತಂದೆಗೆ ಯಶಸ್ವಿ ಶಸ್ತ್ರ ಚಿಕಿತ್ಸೆ ನಡೆಸಿದ ಡಾ. ಬಾಲಕೃಷ್ಣಗೌಡ ಅವರ ಶಸ್ತ್ರ ಚಿಕಿತ್ಸಾ ನೈಪುಣ್ಯತೆಯನ್ನು ಕೊಂಡಾಡಿದರು. ನಮ್ಮ ತಂದೆ 4 ದಿನ ಮಾತ್ರ ಆಸ್ಪತ್ರೆಯಲ್ಲಿ ಇದ್ದು ಮನೆಗೆ ವಾಪಸ್ಸಾದರು. ಇದೇ ಶಸ್ತ್ರ ಚಿಕಿತ್ಸೆ ವಿದೇಶದಲ್ಲಿ ನಡೆಸಿದ್ದರೆ 15 ದಿನಗಳಿಗಿಂತ ಹೆಚ್ಚು ಕಾಲ ಆಸ್ಪತ್ರೆಯಲ್ಲಿರಬೇಕಾಗಿತ್ತು ಎಂದು ವಿದೇಶದಲ್ಲಿರುವ ತಮ್ಮ ಕುಟುಂಬದ ಸದಸ್ಯರು ಹೇಳಿದರು ಎಂದು ನಂಜುಂಡಸ್ವಾಮಿ ತಿಳಿಸಿದರು.

ಸುತ್ತೂರು ಮಠಕ್ಕೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ದಂಪತಿ ಭೇಟಿ

ಮೈಸೂರು, ಜೂ.1(ಎಸ್‌ಪಿಎನ್)–ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ



ಹಾಗೂ ಪತ್ನಿ ಶಿವಮಾಲಾ ದಂಪತಿ ಮೇ. 29 ರಂದು ಭೇಟಿ ನೀಡಿ ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ದೇಶದ ಯಾವುದೇ ಮೂಲೆಯ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಯಾವ ಅಡೆತಡೆಗಳಿಲ್ಲದೆ ಎಲ್ಲ ಸೌಲಭ್ಯಗಳು ದೊರೆಯಬೇಕು. ಈ ವ್ಯವಸ್ಥೆ ಜಾರಿಗೆ ಬಂದಾಗ ಸೌಲಭ್ಯಗಳಿಗಾಗಿಯೇ ಜನಸಾಮಾನ್ಯರು ನ್ಯಾಯಾಲಯಗಳ ಮೊರೆ ಹೋಗುವುದು ಕಡಿಮೆಯಾಗುತ್ತದೆ ಎಂದು ಸುತ್ತೂರು ಶ್ರೀಗಳೊಂದಿಗೆ ಮಾತುಕತೆ ಸಂದರ್ಭದಲ್ಲಿ ಮಾತನಾಡಿದರು.

ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾ ವಿದ್ಯಾಪೀಠದ ವತಿಯಿಂದ ರಾಜ್ಯ, ರಾಷ್ಟ್ರ ಹಾಗೂ ವಿದೇಶಗಳಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಸಲ್ಲಿಸುತ್ತಿರುವ ಸೇವೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಅವರು ಅಮೆರಿಕಕ್ಕೆ ಭೇಟಿ ನೀಡಿದಾಗ ಅಲ್ಲಿನ ಮೇರಿಲ್ಯಾಂಡ್‌ನಲ್ಲಿರುವ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಭೇಟಿ ನೀಡುವಂತೆ ಆಹ್ವಾನಿಸಲಾಯಿತು. ಈ ವೇಳೆ ನ್ಯಾ.ಎನ್.ವಿ.ರಮಣ ದಂಪತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವದಿಸಿದರು.

ವರ್ಷದೊಳಗೆ ಮೈಸೂರು ವಿವಿಯಿಂದ ಫಾರ್ಮಸಿ ಕಾಲೇಜು ಕಾರ್ಯಾರಂಭ

● ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ವಿಶ್ವಾಸ ● ವಿವಿಯ ತಾಂತ್ರಿಕ ಶಾಲೆಯ 2ನೇ ಸೆಮಿಸ್ಟರ್‌ನ 5 ದಿನಗಳ ಪರಿಚಯಾತ್ಮಕ ಕಾರ್ಯಾಗಾರಕ್ಕೆ ಚಾಲನೆ

ಮೈಸೂರು, ಜೂ.1(ಪಿಎಂ)– ಮೈಸೂರು ವಿವಿಯಿಂದ ಈಗಾಗಲೇ ಇಂಜಿನಿಯರಿಂಗ್ ಕಾಲೇಜು ಕಾರ್ಯಾರಂಭ ಮಾಡಿದ್ದು, ಇದೇ ವರ್ಷದೊಳಗೆ ಫಾರ್ಮಸಿ ಕಾಲೇಜು ಪ್ರಾರಂಭಗೊಳ್ಳುವ ವಿಶ್ವಾಸವಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ತಿಳಿಸಿದರು.

ಮೈಸೂರು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿವಿ ತಾಂತ್ರಿಕ ಶಾಲೆಯ (ಇಂಜಿನಿಯರಿಂಗ್ ಕಾಲೇಜು) 2ನೇ ಸೆಮಿಸ್ಟರ್‌ನ ಐದು ದಿನಗಳ ಎಐಸಿಟಿಇ (ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್) ಪರಿಚಯಾತ್ಮಕ ಕಾರ್ಯಾಗಾರಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದರು.

2019ರಲ್ಲಿ ವಿವಿಯಿಂದ ತಾಂತ್ರಿಕ ಶಾಲೆ ಮತ್ತು ಫಾರ್ಮಸಿ ಕಾಲೇಜು ಪ್ರಾರಂಭಿಸುವುದಾಗಿ ಘೋಷಣೆ ಮಾಡಲಾಗಿತ್ತು. ಚಾಮುಂಡಿಬೆಟ್ಟದ ಬಳಿಯಲ್ಲಿರುವ ವಿವಿಯ 23 ಎಕರೆ ಪ್ರದೇಶದಲ್ಲಿ ತಾಂತ್ರಿಕ ಶಾಲೆ ಆರಂಭಿಸಲು ಮುಂದಾಗಿದ್ದೆವು. ನಂತರ ಅನಿವಾರ್ಯ ಕಾರಣಗಳಿಂದ



ಮೈಸೂರು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ವಿವಿ ತಾಂತ್ರಿಕ ಶಾಲೆಯ 2ನೇ ಸೆಮಿಸ್ಟರ್‌ನ ಐದು ದಿನಗಳ ಎಐಸಿಟಿಇ ಪರಿಚಯಾತ್ಮಕ ಕಾರ್ಯಾಗಾರವನ್ನು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಬುಧವಾರ ಉದ್ಘಾಟಿಸಿದರು.

ಮಾನಸ ಗಂಗೋತ್ರಿಯಲ್ಲೇ ತಾಂತ್ರಿಕ ಶಾಲೆ ಆರಂಭ ಮಾಡಲಾಯಿತು. ಫಾರ್ಮಸಿ ಕಾಲೇಜು ಆರಂಭಕ್ಕಿದ್ದ ತೊಡಕುಗಳನ್ನು ಬಗೆಹರಿಸಿದ್ದು, ಇದೇ ಡಿಸೆಂಬರ್ ಒಳಗೆ ಆರಂಭಗೊಳ್ಳುವ ವಿಶ್ವಾಸವಿದೆ ಎಂದು ಹೇಳಿದರು.

24 ವರ್ಷಗಳ ಹಿಂದಿದ್ದ ವಿವಿ ಇಂಜಿನಿಯರಿಂಗ್ ಬೋಧಕ ವರ್ಗ ಮತ್ತೆ ಕಾರ್ಯಾರಂಭವಾಗಿದೆ. ತಾಂತ್ರಿಕ ಶಾಲೆ ಆರಂಭವಾಗಿ 6 ತಿಂಗಳ ಮೊದಲ ಸೆಮಿಸ್ಟರ್ ಪೂರ್ಣಗೊಂಡಿದೆ. ಹೀಗಾಗಿ ಇನ್ನು ಮೂರೂವರೆ ವರ್ಷಗಳಲ್ಲಿ ವಿವಿಯಿಂದ 180 ಎಂಜಿನಿಯರ್‌ಗಳು ಹೊರಹೊಮ್ಮಲಿದ್ದಾರೆ. ಈ ವಿದ್ಯಾರ್ಥಿಗಳು ನಮ್ಮ ಇಂಜಿನಿಯರಿಂಗ್ ಕಾಲೇಜಿನ ಮೊದಲ ರಾಯಭಾರಿಯಾಗಲಿದ್ದಾರೆ. ಈ ವಿದ್ಯಾರ್ಥಿಗಳು ಮುಂದಿನ ಭವಿಷ್ಯದ ಬಗ್ಗೆ ದೊಡ್ಡ ಕನಸುಗಳನ್ನು ಕಾಣಬೇಕು. ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಮೈಸೂರು ವಿವಿಯ ಇಂಜಿನಿಯರಿಂಗ್ ಕಾಲೇಜು ಆರಂಭಿಸುವ ಪ್ರಸ್ತಾವನೆಯನ್ನು ಎಐಸಿಟಿಇಗೆ ಸಲ್ಲಿಸಿದ್ದ ಸಂದರ್ಭದಲ್ಲಿ 60ಕ್ಕೂ ಸಂಸ್ಥೆಗಳಿಂದಲೂ ಇಂಜಿನಿಯರಿಂಗ್ ಕಾಲೇಜು ಆರಂಭಕ್ಕೆ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದವು. ಆದರೆ ಅನುಮೋದನೆ ಸಿಕ್ಕಿದ್ದು ಮೈಸೂರು ವಿವಿಗೆ ಮಾತ್ರ ಎಂದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ತಾಂತ್ರಿಕ ಶಿಕ್ಷಣ ಮಾತೃಭಾಷೆಯಲ್ಲಿಯೂ ಸಿಗಬೇಕೆಂದು ಹೇಳುತ್ತದೆ. ಹೀಗಾಗಿ ಕಾರ್ಯಾಗಾರದಲ್ಲಿ ಕನ್ನಡ ಭಾಷೆಗೆ ಆದ್ಯತೆ ನೀಡಲಾಗಿದೆ. ಜೊತೆಗೆ ಶಿಕ್ಷಣ, ಅಪರಾಧ ಜಾಗೃತಿ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಪರಿಸರ ಕುರಿತು ಉಪನ್ಯಾಸ ಆಯೋಜಿಸಲಾಗಿದೆ ಎಂದು ಹೇಳಿದರು.

'ಭಾಷೆ ಮತ್ತು ಸಂಸ್ಕೃತಿ' ಕುರಿತು ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಉಪನ್ಯಾಸ ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿವಿಯ ಆಡಳಿತಾಂಗ ಕುಲಸಚಿವ ಪ್ರೊ.ಆರ್.ಶಿವಪ್ಪ, ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಪಿ.ಜ್ಞಾನಪ್ರಕಾಶ್, ವಿಶೇಷ ಅಧಿಕಾರಿ ಡಾ.ಹೆಚ್.ಕೆ.ಚೇತನ್, ತಾಂತ್ರಿಕ ಶಾಲೆಯ ನಿರ್ದೇಶಕ ಪ್ರೊ.ಟಿ. ಅನಂತಪದ್ಮನಾಭ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ನಿರ್ದೇಶಕ : "ನಾಟಕದಲ್ಲಿ ಬರೋ ಸಂಭಾಷಣೆ ಎಲ್ಲಾ ಜ್ಞಾಪಕ ಇದೆಯೇನ್ರೀ?"

ನಟ : "ಸಾರ್, ನನ್ನದು ಯಾವ ಮಾತೂ ಇಲ್ಲ. ಯಾಕೆಂದ್ರೆ ನನ್ನದು ಗಂಡನ ಪಾತ್ರ!"

ಮೈಸೂರು ಮಿತ್ರ

ಗುರುವಾರ, 2 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನೋವು ಆಲೋಚನೆಗೆ ಪ್ರೇರಣೆ, ಆಲೋಚನೆ ವಿವೇಚನೆಗೆ ಪ್ರೇರಣೆ, ವಿವೇಚನೆ ತಾಳ್ಮೆಗೆ ಮೂಲ – ಜಾನ್‌ಫ್ಯಾಟ್ರಿಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅರ್ಧ ಕಲಿತವನ ಆರ್ಭಟ ಹೆಚ್ಚು

ನಿಮ್ಮ ಪತ್ರಗಳು

ವಿದೇಶದಲ್ಲಿ ಕನ್ನಡದ ಕಂಪು ಪಸರಿಸಿದ ಅಪರೂಪದ ಸಂಸದ ಚಂದ್ರಕಾಂತ ಆರ್ಯ

ಮಾನ್ಯರೆ,



ಇತ್ತೀಚೆಗೆ ಕೆನಡಾ ಸಂಸತ್ತಿನಲ್ಲಿ ಕನ್ನಡ ಮಾತನಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ, ಮೊಟ್ಟ ಮೊದಲ ವ್ಯಕ್ತಿ ಹಾಗೂ ಇತಿಹಾಸ ಸೃಷ್ಟಿಸಿದ ಕೀರ್ತಿಗೆ ಭಾಜನರಾದ ಕರ್ನಾಟಕದ ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ದ್ವಾರಾಳು ಗ್ರಾಮದ ಚಂದ್ರಕಾಂತ ಆರ್ಯ ಅವರು ಆರು ಕೋಟಿ ಕನ್ನಡಿಗರ ಮನಗೆದ್ದಿದ್ದಾರೆ. ಚಂದ್ರಕಾಂತ ಆರ್ಯ ಅವರು 20 ವರ್ಷಗಳಿಂದ ಕೆನಡಾದಲ್ಲಿ ನೆಲೆಸಿದ್ದು, ಕನ್ನಡಕ್ಕೆ ಮಾತ್ರ ಅಪ್ಪಟ ಅಭಿಮಾನಿಯಾಗಿ ವಿಶ್ವಮಟ್ಟದಲ್ಲಿ ಕನ್ನಡದ ಕಂಪನ್ನು ಪಸರಿಸಿದ್ದಾರೆ. ಕರ್ನಾಟಕ ದಲ್ಲಿ ಕನ್ನಡ ಮಾತನಾಡಲು ಹಿಂದೇಟು ಹಾಕುವ ಅನೇಕ ಮಂದಿ ಇದ್ದಾರೆ. ಕನ್ನಡದಲ್ಲಿ ಮಾತನಾಡಿದರೆ ಅದೆಲ್ಲಿ ನಮ್ಮ ಗೌರವಕ್ಕೆ ಚ್ಯುತಿ ಬರುವುದು ಎಂದು ಕನ್ನಡ ಗೊತ್ತಿದ್ದರೂ ಸಾರ್ವಜನಿಕ ಸ್ಥಳ, ಭಾಷಣ, ಸುದ್ದಿವಾಹಿನಿ, ಸಭೆ–ಸಮಾರಂಭಗಳಲ್ಲಿ ಸ್ಟೇಟಸ್‌ಗಾಗಿ ಇಂಗ್ಲಿಷನ್ನು ಮಾತನಾಡುತ್ತಾರೆ.

ಕರ್ನಾಟಕದಿಂದ ಆಯ್ಕೆಯಾದ ಕನ್ನಡದ ಸಂಸದರು ಬೆರಳೆಣಿಕೆಯಷ್ಟು ಮಾತ್ರ ಸಂಸತ್‌ನಲ್ಲಿ ಕನ್ನಡ ಮಾತನಾಡುತ್ತಾರೆ. ಇನ್ನುಳಿದವರು ಹಿಂದಿ, ಇಂಗ್ಲಿಷ್‌ನಲ್ಲಿ ಹೆಚ್ಚಾಗಿ ಮಾತನಾಡುತ್ತಾರೆ. ಕೇಂದ್ರ ಸರ್ಕಾರ ಬಲವಂತವಾಗಿ ಹಿಂದಿಯನ್ನು ಹೇರುವ ಇಂತಹ ದಿನಗಳಲ್ಲಿ ಎರಡು ಸಾವಿರ ವರ್ಷಗಳ ಸುದೀರ್ಘ ಪ್ರಾಚೀನ ಇತಿಹಾಸ ಹೊಂದಿರುವ ಸುಂದರ ಭಾಷೆ ಕನ್ನಡವನ್ನು ಕರ್ನಾಟಕದಲ್ಲಿ ಕಡೆಗಣಿಸುತ್ತಿರುವುದು ನೋವಿನ ಸಂಗತಿಯಾಗಿದೆ. ಈ ರೀತಿಯಾಗಿ ಕನ್ನಡ ನೆಲದಲ್ಲಿ ಹೆಚ್ಚಾಗಿ ಕನ್ನಡ ಎಂದರೆ ಮುಖ ಸಿಂಡರಿಸುವ ಜನರಿಗೆ ನಾಚಿಕೆಯಾಗಬೇಕು. ವಿದೇಶಕ್ಕೆ ತೆರಳಿದ ನಂತರ ಸ್ವದೇಶವನ್ನು ಮರೆಯುವ ಇಂತಹ ದಿನಗಳಲ್ಲಿ ಚಂದ್ರಕಾಂತ ಆರ್ಯ ಅವರು ಹುಟ್ಟೂರನ್ನು ಮರೆತಿಲ್ಲ. ವರ್ಷಕ್ಕೆರಡು ಬಾರಿ ಹಾಗೂ ಮನೆ ದೇವರ ಜಾತ್ರೆಯ ಕಾರ್ಯಗಳಿಗೆ ತಪ್ಪದೇ ಹಾಜರಾಗುತ್ತಾರೆ. ಇದೇ ತಾಯಿನಾಡಿನ ಬಗ್ಗೆ ಇರುವ ನಿಜವಾದ ಪ್ರೀತಿ, ಅಭಿಮಾನ ಅಲ್ಲವೇ? ಇವರ ಈ ನಡೆ ಕನ್ನಡ ಅಭಿಮಾನಿಗಳಿಗೆ ಸ್ಫೂರ್ತಿ ಮತ್ತು ಮಾದರಿಯಾಗಿದೆ.

–ಪರಶಿವಮೂರ್ತಿ ಎನ್.ಪಿ, ಸರಗೂರು ತಾಲೂಕು

ನಾದಬ್ರಹ್ಮದಲ್ಲಿ ಶೌಚಾಲಯದ ಅವ್ಯವಸ್ಥೆ

ಮಾನ್ಯರೆ,

ಮೈಸೂರಿನ ಜೆಎಲ್‌ಬಿ ರಸ್ತೆಯ ನಂಜುಮಳಿಗೆಯ ವೃತ್ತದಲ್ಲಿರುವ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿರುವ ಶೌಚಾಲಯ ಅವ್ಯವಸ್ಥೆಯಿಂದ ಕೂಡಿದೆ. ಇಲ್ಲಿ ನಡೆದ ಸಂಗೀತ ರಸಮಂಜರಿ ಕಾರ್ಯಕ್ರಮ ವೀಕ್ಷಿಸಲು ಸಾವಿರಾರು ಅಭಿಮಾನಿಗಳು ಆಗಮಿಸುತ್ತಾರೆ. ಇಲ್ಲಿನ ಶೌಚಾಲಯದಲ್ಲಿರುವ ಯಾವ ನಲ್ಲಿಯಲ್ಲೂ ನೀರು ಬರುವುದಿಲ್ಲ. ಇಲ್ಲಿ ಮೂತ್ರ ವಿಸರ್ಜನೆ ಮಾಡಿದರೆ ಖಂಡಿತ ಇನ್‌ಫೆಕ್ಷನ್ ಗ್ಯಾರಂಟಿ. ಈ ಬಗ್ಗೆ ಸಂಬಂಧಪಟ್ಟವರು ತುರ್ತು ಗಮನಹರಿಸಿ ಶೌಚಾಲಯದ ಎಲ್ಲಾ ನಲ್ಲಿಗಳಲ್ಲೂ ನೀರು ಬರುವಂತೆ ಮಾಡುವರೇ?

– ನೊಂದ ಕಲಾಭಿಮಾನಿಗಳು, ಮೈಸೂರು.

ರಾಜ್ಯದಲ್ಲಿ ಏಮ್ಸ್ ಸಂಸ್ಥೆ ಸ್ಥಾಪನೆಗೆ ಸ್ವಾಗತಾರ್ಹ

ಮಾನ್ಯರೆ,

ರಾಜ್ಯ ಆರೋಗ್ಯ ಕ್ಷೇತ್ರವನ್ನು ಮತ್ತಷ್ಟು ಬಲವರ್ಧನೆಗೊಳಿಸಲು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (All India Institute of Medical Sciences -AIMS) ಆರಂಭಿಸುವ ರಾಜ್ಯ ಸರ್ಕಾರದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಏಮ್ಸ್ ಸ್ಥಾಪನೆಗೆ ಕ್ರಮ ವಹಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ರಾಜ್ಯ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ. ರಾಷ್ಟ್ರೀಯ ಆರೋಗ್ಯ ಅಭಿಯಾನ, ಪ್ರಾದೇಶಿಕ ಆರೋಗ್ಯ ಸಮಸ್ಯೆ ಹಾಗೂ ರಾಜ್ಯದ ವೈದ್ಯಕೀಯ ಶಿಕ್ಷಣದಲ್ಲಿ ಸುಧಾರಣೆ ತರುವ ಉದ್ದೇಶದಿಂದ ಏಮ್ಸ್ ಸಂಸ್ಥೆ ಸ್ಥಾಪನೆಗೆ ಮುಂದಾಗಿದ್ದು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ವೈದ್ಯರಾಗುವ ಕನಸು ಹೊತ್ತ ಬಡ ವಿದ್ಯಾರ್ಥಿಗಳಿಗೆ ಆಶಾದಾಯಕವಾಗಿದ್ದು, ಇದರಿಂದ ಬಡವರಿಗೆ ವಿಶ್ವ ದರ್ಜೆ ಆರೋಗ್ಯ ಸೇವೆ ದೊರೆಯಲಿದ್ದು, ಇದು ಸಂತಸದಾಯಕ ವಿಷಯವಾಗಿದೆ.

–ಜಿ. ನಾಗೇಂದ್ರ ಶರ್ಮ, ಕುವೆಂಪುನಗರ, ಮೈಸೂರು.

ಇದೇನು ಸಾರ್ವಜನಿಕ ಶೌಚಾಲಯವೋ ರೋಗ ಹರಡುವ ಕೇಂದ್ರವೋ

ಮಾನ್ಯರೆ,

ನಾನು ಮೂಲತಃ ಪಾಂಡವಪುರದವನಾಗಿದ್ದು, ಆರೋಗ್ಯ ತಪಾಸಣೆಗೆಂದು ಮೈಸೂರಿಗೆ ಬಂದಿದ್ದೆ. ಪ್ರಕೃತಿ ಕರೆಗೆಂದು ಚಾಮರಾಜ ಜೋಡಿ ರಸ್ತೆಯ ಸಹಕಾರ ಭವನದ ಎದುರುಗಡೆ ಇರುವ ಪಾವತಿಸಿ ಉಪಯೋಗಿಸುವ ಸಾರ್ವಜನಿಕ ಶೌಚಾಲಯಕ್ಕೆ ಹೋಗಿದ್ದಾಗ ಅಲ್ಲಿ ಒಳಗಡೆ ಬಿಸಾಡಿರುವ ಗುಟ್ಕಾ ಚೀಟಿಗಳು, ಬೀಡಿ ಸಿಗರೇಟುಗಳು, ಕೊಳಕು, ಅಶುಚಿತ್ವ ಎದ್ದು ಕಾಣುತ್ತಿತ್ತು. ಹಣ ಪಡೆದು ಕನಿಷ್ಠ ಸೌಲಭ್ಯ ಒದಗಿಸದ ಗುತ್ತಿಗೆದಾರನ ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಇದರ ಬಗ್ಗೆ ಸಂಬಂಧಪಟ್ಟ ಕೂಗಳತೆಯ ದೂರದಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಆರೋಗ್ಯ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮನವಿ.

–ರೇವಣ್ಣ, ಪಾಂಡವಪುರ.

ಆಲ್‌ರೌಂಡರ್

ಮಾನ್ಯರೆ,

ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರನ್ನೂ ಅಭಿನಂದಿಸುತ್ತ ಡಾ. ಎನ್.ಎಸ್.ತಾರಾನಾಥ್ ಹೇಳಿದ್ದು (ಮಿತ್ರ ಮೇ 19): "ಕೆಲವರು ಒಂದು ಕ್ಷೇತ್ರದಲ್ಲಿ ಅಥವಾ ವಿಭಾಗದಲ್ಲಿ ಪರಿಣತಿ ಹೊಂದಿರುತ್ತಾರೆ. ಆದರೆ ಶಾಸ್ತ್ರಿಯವರು 9ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕೆಲಸ ಮಾಡಿ ಪರಿಣತಿ ಹೊಂದಿದ್ದಾರೆ" ಸರಿಯೇ. ಡಾ. ತಾರಾನಾಥ್ ಒಂದೆಡೆ ನನಗೆ ಸಲ್ಲಿಸಿರುವ ಪ್ರಶಂಸೆ; "ಸಾಹಿತ್ಯ ಲೋಕದ ಆಲ್‌ರೌಂಡರ್" (ಕೃತಜ್ಞತೆಯಿಂದ ನೆನೆಯುತ್ತೇನೆ).– **ಸಿಪಿಕೆ, ದತ್ತ ಪೀಠ ಆಸ್ಥಾನ ವಿದ್ವಾನ್, ಮೈಸೂರು**



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಅರಣ್ಯಾವಲಂಬಿ ಸಮುದಾಯಗಳ ಸ್ಥಳಾಂತರ: ಪ್ರಶ್ನೆಗಳು ಅನೇಕ, ಉತ್ತರಗಳು ಮಾತ್ರ ವಿರಳ

> ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಜನ ವಸತಿ ಎರಡು ಮುಖ್ಯ ಕಾರಣಗಳಿಗಾಗಿ ಸಾಧ್ಯವಿಲ್ಲ. ಮೊದಲನೆಯದು ಈಗಾಗಲೇ ನಿಧಾನವಾಗಿ ನಶಿಸುತ್ತಿರುವ ಅರಣ್ಯದ ಜೀವ ವೈವಿಧ್ಯ, ಇನ್ನು ಮುಂದೆ ಯಾವುದೇ ಬಗೆಯ ಆಘಾತಗಳನ್ನೂ ತಡೆದುಕೊಳ್ಳುವ ಹಂತದಲ್ಲಿ ಇಲ್ಲ. ಪ್ರಾಕೃತಿಕ ಅಥವಾ ಮಾನವ ನಿರ್ಮಿತ ಪರಿಸ್ಥಿತಿಗಳಿಂದಾಗಿ ನಿಧಾನವಾಗಿ ಹಿಂದೆಸರಿಯುತ್ತಿರುವ ಕಾಡು, ಅವನತಿಯತ್ತ ಜಾರಿರುವ ಆಹಾರ ಮೂಲಗಳು ಮತ್ತು ನಿಲ್ಲದ ಮಾನವ–ವನ್ಯಜೀವಿ ಸಂಘರ್ಷ ಇವು ಕೂಡ ಪರಿಗಣಿಸಬೇಕಾದ ಅಂಶಗಳು. ಎರಡನೆಯದು, ಜನವಸತಿ ಇದ್ದ ಮೇಲೆ ಆಹಾರ ಪೂರೈಕೆಗಾಗಿಯಾದರೂ ಸೊಪ್ಪು, ತರಕಾರಿ, ರಾಗಿ ಮುಂತಾದ ಬೆಳೆಗಳನ್ನು ಬೆಳೆಯಲೇ ಬೇಕು, ಆದರೆ ಅವುಗಳು ದಿನೇ–ದಿನೇ ಕಾಡು ಪ್ರಾಣಿಗಳಿಂದ ನಷ್ಟವಾಗುತ್ತಿರುವುದನ್ನು ನೋಡುತ್ತಾ ಅರಣ್ಯಾವಲಂಬಿ ಸಮುದಾಯಗಳು ಹಸಿವಿನ ಕೂಪದೊಳಗೆ ಜಾರುತ್ತಾ ಹೋಗಬೇಕು. ಈ ಕಾರಣಗಳಿಗಾಗಿಯೇ ಆಡಳಿತ ವ್ಯವಸ್ಥೆ ಜನ ಸಮುದಾಯಗಳನ್ನು ಸುರಕ್ಷಿತ ಅರಣ್ಯ ಪ್ರದೇಶಗಳಿಂದ ಒಕ್ಕಲೆಬ್ಬಿಸುತ್ತಿರುವುದು.

ಅರಣ್ಯ ಸಂರಕ್ಷಣೆಗೆ ಒಂದು ಮಾರ್ಗವೆಂದರೆ ಬಹು ತಲೆಮಾರುಗಳಿಂದ ಜೀವನ ನಿರ್ವಹಣೆಗೆ ಅರಣ್ಯವನ್ನು ಅವಲಂಬಿಸಿರುವ ಜನ ಸಮುದಾಯಗಳನ್ನು ತಮ್ಮ ನೆಲೆಗಳಿಂದ ಸ್ಥಳಾಂತರಿಸುವುದು ಎಂಬ ಭಾವನೆ–ಆಚರಣೆಗಳಿಗೆ ಈ ದೇಶದಲ್ಲಿ ಒಂದು ದೀರ್ಘ ಇತಿಹಾಸವೇ ಇದೆ. ಇಪ್ಪತ್ತನೇ ಶತಮಾನದಲ್ಲಂತೂ ಈ ಕಾರ್ಯಾಚರಣೆ ದೇಶದ ವಿವಿಧ ಅರಣ್ಯಗಳಲ್ಲಿ, ವಿಶೇಷವಾಗಿ ಸಂರಕ್ಷಿತ ಅರಣ್ಯಗಳೆಂದು ಘೋಷಿತವಾದ ಭೂ ಪ್ರದೇಶದಲ್ಲಿ ವ್ಯಾಪಕವಾಗಿ ನಡೆದಿದೆ. ಅರಣ್ಯ ಸಂಪತ್ತು ಕಾಲಕ್ರಮೇಣ ನಶಿಸುತ್ತಿರುವುದನ್ನು ತಡೆಗಟ್ಟಲು ಅರಣ್ಯ ನಿವಾಸಿಗಳನ್ನು ಅರಣ್ಯದ ಎಲ್ಲೆಗಳಿಂದ ಹೊರಗೆ ಕರೆತಂದು ಅವರಿಗೆ ಪರ್ಯಾಯ ಆಶ್ರಯತಾಣಗಳನ್ನು ನಿರ್ಮಿಸಿ ಕೊಟ್ಟರೆ ಅದೊಂದು ಸಿದ್ಧ ಔಷಧವೇನೋ ಎಂಬಂತೆ ಬಿಂಬಿಸುವ ಆಡಳಿತ ವ್ಯವಸ್ಥೆ ಹಾಗೂ ತಮ್ಮ ನೆಲ–ನೆಲೆಗಳಿಂದ ದೂರವಾಗಿ ಕಂಡು ಕೇಳರಿಯದ ಜಾಗಗಳಲ್ಲಿ ಬದುಕನ್ನು ಕಟ್ಟಿಕೊಳ್ಳಲಾಗದಿರುವ ಮೂಲನಿವಾಸಿ ಸಮುದಾಯಗಳ ನಡುವೆ ನಿರಂತರವಾಗಿ ಸಂಭವಿಸುತ್ತಲೇ ಇರುವ ಘರ್ಷಣೆಗಳು ನಮ್ಮ ಮುಂದೆ ಇಟ್ಟಿರುವ ಪ್ರಶ್ನೆಗಳು ಬಹುತೇಕ ಸಂದರ್ಭಗಳಲ್ಲಿ ಪ್ರಶ್ನೆಗಳಾಗಿಯೇ ಉಳಿದಿವೆ.

ಅರಣ್ಯದ ಜೀವವೈವಿಧ್ಯದ ರಕ್ಷಣೆ, ಅರಣ್ಯಾವಲಂಬಿ ಸಮುದಾಯಗಳ ಸ್ಥಳಾಂತರದಿಂದ ಎಷ್ಟರ ಮಟ್ಟಿಗೆ ಆಗುತ್ತದೆ? ಹೊರ ಪ್ರಪಂಚದೊಡನೆ ಸಂಪರ್ಕವೇ ಇಲ್ಲದೆ ವರ್ಷಗಟ್ಟಲೆ ಬದುಕನ್ನು ಸವೆಸುತ್ತಿರುವ ಈ ಸಮುದಾಯಗಳನ್ನು ಆಧುನಿಕತೆಯತ್ತ ಕರೆತಂದು ಅವರ ಬದುಕಿನಲ್ಲಿ ಬದಲಾವಣೆಗಳನ್ನು ತರಲು ಸ್ಥಳಾಂತರ ಅವಕಾಶ ಮಾಡಿಕೊಡುತ್ತಿದೆ ಎಂಬ ಆಡಳಿತಾತ್ಮಕ ಧೋರಣೆಯಲ್ಲಿ ಎಷ್ಟು ಹುರುಳಿದೆ? ಸ್ಥಳಾಂತರ ಮಾಡುವ ನಿರ್ಧಾರ ತೆಗೆದುಕೊಳ್ಳುವಾಗಲಾಗಲಿ, ಪುನರ್ವಸತಿಗೆ ಜಾಗಗಳನ್ನು ಆಯ್ಕೆ ಮಾಡುವಾಗಲಾಗಲಿ ಅವರ ಆಯ್ಕೆಗಳಿಗೆ ಮನ್ನಣೆ ನೀಡಲಾಗಿದೆಯೇ? ಹೊಸ ಪ್ರದೇಶಗಳಿಗೆ ಇಡೀ ಸಮುದಾಯಗಳನ್ನೇ ಸ್ಥಳಾಂತರಿಸಿದಾಗ ಅವರ ಬದುಕಿನ ಅಗತ್ಯಗಳು, ಕೃಷಿ ಪದ್ಧತಿಗಳು, ಅವರಿಗೆ ಇರುವ–ಇಲ್ಲದಿರುವ ಕೌಶಲಗಳು, ಎಲ್ಲಕಿಂತ ಮಿಗಿಲಾಗಿ ಆ ಪ್ರದೇಶದಲ್ಲಿನ ಮೂಲ ಸೌಕರ್ಯಗಳ ಲಭ್ಯತೆ – ಇವೇ ಮುಂತಾದ ಬಹು ಗಂಭೀರ ಪ್ರಶ್ನೆಗಳಿಗೆ ಇಂದಿಗೂ ಅನೇಕ ಕಡೆಗಳಲ್ಲಿ ಉತ್ತರಗಳು ದೊರೆಯದಿರುವುದೇ ಆಗಿದೆ. ಈಗಾಗಲೇ ಅಂಚಿನಲ್ಲಿರುವ ಈ ಸಮುದಾಯಗಳನ್ನು ಮತ್ತಷ್ಟು ಅಂಚಿಗೆ ತಳ್ಳುತ್ತಿದೆ.

ಭಾರತದಲ್ಲಿ ರಾಷ್ಟ್ರೀಯ ಉದ್ಯಾನಗಳೂ, ವನ್ಯಜೀವಿ ಧಾಮಗಳೂ, ಹುಲಿ ಸಂರಕ್ಷಿತ ಕಾಡುಗಳು ಹೆಚ್ಚುತ್ತಾ ಹೋದ ಹಾಗೆಲ್ಲಾ ಆ ಪ್ರದೇಶಗಳಿಂದ ಜನರನ್ನು ಹೊರಗೆ ಸ್ಥಳಾಂತರಿಸುವ ಪ್ರಕ್ರಿಯೆ ನಡೆಯುತ್ತಲೇ ಬಂದಿದೆ. ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಜನ ವಸತಿ ಎರಡು ಮುಖ್ಯ ಕಾರಣಗಳಿಗಾಗಿ ಸಾಧ್ಯವಿಲ್ಲ. ಮೊದಲನೆಯದು ಈಗಾಗಲೇ ನಿಧಾನವಾಗಿ ನಶಿಸುತ್ತಿರುವ ಅರಣ್ಯದ ಜೀವವೈವಿಧ್ಯ, ಇನ್ನು ಮುಂದೆ ಯಾವುದೇ ಬಗೆಯ ಆಘಾತಗಳನ್ನೂ ತಡೆದುಕೊಳ್ಳುವ ಹಂತದಲ್ಲಿ ಇಲ್ಲ. ಪ್ರಾಕೃತಿಕ ಅಥವಾ ಮಾನವ ನಿರ್ಮಿತ ಪರಿಸ್ಥಿತಿಗಳಿಂದಾಗಿ ನಿಧಾನವಾಗಿ ಹಿಂದೆಸರಿಯುತ್ತಿರುವ ಕಾಡು, ಅವನತಿಯತ್ತ ಜಾರಿರುವ ಆಹಾರ ಮೂಲಗಳು ಮತ್ತು ನಿಲ್ಲದ ಮಾನವ–ವನ್ಯಜೀವಿ ಸಂಘರ್ಷ ಇವು ಕೂಡ ಪರಿಗಣಿಸಬೇಕಾದ ಅಂಶಗಳು. ಎರಡನೆಯದು, ಜನವಸತಿ ಇದ್ದ ಮೇಲೆ ಆಹಾರ ಪೂರೈಕೆಗಾಗಿಯಾದರೂ ಸೊಪ್ಪು, ತರಕಾರಿ, ರಾಗಿ ಮುಂತಾದ ಬೆಳೆಗಳನ್ನು ಬೆಳೆಯಲೇ ಬೇಕು, ಆದರೆ ಅವುಗಳು ದಿನೇ–ದಿನೇ ಕಾಡುಪ್ರಾಣಿಗಳಿಂದ ನಷ್ಟವಾಗುತ್ತಿರುವುದನ್ನು ನೋಡುತ್ತಾ ಅರಣ್ಯಾವಲಂಬಿ ಸಮುದಾಯಗಳು ಹಸಿವಿನ ಕೂಪದೊಳಗೆ ಜಾರುತ್ತಾ ಹೋಗಬೇಕು. ಈ ಕಾರಣಗಳಿಗಾಗಿಯೇ ಆಡಳಿತ ವ್ಯವಸ್ಥೆ ಜನ ಸಮುದಾಯಗಳನ್ನು ಸುರಕ್ಷಿತ ಅರಣ್ಯ ಪ್ರದೇಶಗಳಿಂದ ಒಕ್ಕಲೆಬ್ಬಿಸುತ್ತಿರುವುದು.

ಸಂರಕ್ಷಿತ ಅರಣ್ಯ ಪ್ರದೇಶಗಳಿಂದ ಸ್ಥಳಾಂತರಗೊಂಡ ಸಮುದಾಯಗಳು ಅಲ್ಲಿಂದ ಹೊರಬಂದು ಪರ್ಯಾಯ ತಾಣಗಳಲ್ಲಿ ನೆಲೆಗೊಳ್ಳುವುದು ಅವರ ಸಮಸ್ಯೆಗಳಿಗೆ 'ಕ್ಯಾಪ್‌ಸೂಲ್' ಮಾದರಿ ಪರಿಹಾರವಲ್ಲ. ಅಧಿಕೃತ ದಾಖಲೆಗಳ ಪ್ರಕಾರ ಕಳೆದ 50 ವರ್ಷಗಳಿಂದ ಹುಲಿ ಸಂರಕ್ಷಿತ ಪ್ರದೇಶಗಳ ಒಳಗಿದ್ದ 215 ಗ್ರಾಮಗಳಿಂದ 18,500 ಕುಟುಂಬಗಳನ್ನು ಸ್ಥಳಾಂತರ ಮಾಡಲಾಗಿದ್ದು, ಈಗಲೂ ಭಾರತದ ಸೂಕ್ಷ್ಮ ಹುಲಿ ವಸತಿ ಪ್ರದೇಶಗಳಲ್ಲಿರುವ 500 ರಷ್ಟು ಹಳ್ಳಿಗಳಲ್ಲಿ 41,000 ಜನರು ವಾಸವಾಗಿದ್ದಾರೆ. ದೇಶದಲ್ಲೇ ಅತ್ಯಂತ ಸಮರ್ಥವಾಗಿ ನಿರ್ವಹಿಸಲ್ಪಡುತ್ತಿರುವ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿರುವ ಕರ್ನಾಟಕದ ಅಣಶಿ–ದಾಂಡೇಲಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಸುಮಾರು 250 ಕುಟುಂಬಗಳನ್ನು ಸ್ಥಳಾಂತರ ಮಾಡಿದ್ದರೂ ಇನ್ನೂ 8000 ಜನರು ಸಂರಕ್ಷಿತ ಅರಣ್ಯದ ಒಳಗೆ ವಾಸಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಒಂದೆಡೆ ಹೆಚ್ಚುತ್ತಿರುವ ಹುಲಿಗಳ ಸಂಖ್ಯೆ, ಮತ್ತೊಂಡೆ ಅದರಿಂದುಂಟಾಗುತ್ತಿರುವ ಮಾನವ–ವನ್ಯಜೀವಿ ಸಂಘರ್ಷ. ಈ ಪರಿಸ್ಥಿತಿ ಜನರಿಗೆ, ಸ್ಥಳೀಯ ಆಡಳಿತಕ್ಕೆ ಹಾಗೂ ಅರಣ್ಯ ಇಲಾಖೆಗೆ ಒಂದು ದೊಡ್ಡ ಪ್ರಶ್ನೆಯಾಗಿಯೇ ಉಳಿದಿದೆ.

ಸ್ಥಳಾಂತರದ ಪ್ರಕ್ರಿಯೆ ಆರಂಭವಾದಾಗಿನಿಂದ ಅದರ ಪರಿಣಾಮಗಳನ್ನು ಬಹು ತೀವ್ರ ಸ್ವರೂಪದಲ್ಲಿ ಎದುರಿಸುತ್ತಿರುವವರು ಅರಣ್ಯವಾಸಿಗಳು, ಅರಣ್ಯದ ಆಜು–ಬಾಜಿನಲ್ಲಿರುವ ಜನ ವಸತಿ ಪ್ರದೇಶಗಳು, ಬುಡಕಟ್ಟು ಸಮುದಾಯಗಳು ಹಾಗೂ ಗ್ರಾಮೀಣ ಬಡವರು. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಗಣಿಗಾರಿಕೆ, ಮರಗಳ ಹನನ, ಅರಣ್ಯ ಸಂಪತ್ತಿನ ಸುಸ್ಥಿರ ರಕ್ಷಣೆಯ ಬಗ್ಗೆ ಯಾವುದೇ ಜ್ಞಾನ ಅಥವಾ ಕಾಳಜಿಗಳಿಲ್ಲದೆ ಲಾಭ ಗಳಿಕೆಯನ್ನೇ ಪ್ರಧಾನ ಗುರಿಯನ್ನಾಗಿಟ್ಟುಕೊಂಡ ಗುತ್ತಿಗೆದಾರರಿಗೆ ಅರಣ್ಯ ಉತ್ಪನ್ನಗಳ ಸಂಗ್ರಹಣೆಗೆ ಪರವಾನಗಿ ನೀಡುವುದು, ಅರಣ್ಯಕ್ಕೆ ಹಾನಿಯಾಗುತ್ತಿರುವುದೇ ಅರಣ್ಯವಾಸಿ ಸಮುದಾಯಗಳಿಂದ ಎಂದು ಪ್ರಚಾರದಲ್ಲಿ ತೊಡಗುವುದು, ಈ ಸಮುದಾಯಗಳನ್ನು ಹೊರಗೆ ಕಳುಹಿಸುವಾಗ ಹಾಗೂ ಪುನರ್ವಸತಿ ಮಾಡುವಾಗ ಅವರ ಸಾಂಸ್ಕೃತಿಕ–ಆರ್ಥಿಕ ಪರಿಸ್ಥಿತಿಗಳನ್ನೂ ಬದುಕಿನ ವಾಸ್ತವಗಳನ್ನೂ ಸಂಪೂರ್ಣವಾಗಿ ನಿರ್ಲಕ್ಷಿಸುವುದು, ಅವರೇನಾದರೂ ಪ್ರತಿಭಟನೆ ವ್ಯಕ್ತಪಡಿಸಿದಾಗ ಅವರ ಮೇಲೆ ಬಲ ಪ್ರಯೋಗ ಮಾಡುವುದು– ಹೀಗೆ ಅರಣ್ಯವನ್ನು ಅವಲಂಬಿಸಿ ಜೀವನವನ್ನು ಕಟ್ಟಿಕೊಂಡ ಸಮುದಾಯಗಳ ಬದುಕಿನ ಬವಣೆ ವರ್ಣನಾತೀತ.

ಅರಣ್ಯಗಳಿಂದ ಸ್ಥಳಾಂತರಗೊಂಡಿರುವ ಸಮುದಾಯಗಳು ಒಂದು ಸಮರೂಪ ವರ್ಗವಲ್ಲ. ಇವರಲ್ಲಿ ವಿವಿಧ ವಯೋ ಗುಂಪುಗಳು, ಸ್ತ್ರೀ–ಪುರುಷರು, ಅಕ್ಷರ ಜ್ಞಾನವನ್ನೇ ಪಡೆಯಲಾಗದಿದ್ದವರು ಅಥವಾ ತೀರಾ ಸಣ್ಣ ವಯಸ್ಸಿನಲ್ಲೇ ಶಾಲೆಗಳನ್ನು ಬಿಟ್ಟವರು, ಹೆದ್ದಾರಿಗಳಿಗೆ, ಪಟ್ಟಣಗಳಿಗೆ ಸಮೀಪವಿರುವ ಅರಣ್ಯದ ಅಂಚಿನಲ್ಲಿರುವ ಪ್ರದೇಶಗಳಲ್ಲಿ ವಾಸಿಸುತ್ತಿರುವವರು ಅಥವಾ ದಟ್ಟ ಅರಣ್ಯದ ನಡುವೆ ತಮ್ಮ ವಾಸಸ್ಥಾನಗಳನ್ನು ಕಟ್ಟಿಕೊಂಡಿರುವವರು, ಖುಷ್ಕಿ ಬೇಸಾಯ ಪದ್ಧತಿಯನ್ನು ಬಿಟ್ಟರೆ ಬೇರೆ ಇನ್ಯಾವ ವ್ಯವಸಾಯ ಪ್ರಕಾರದ ಬಗ್ಗೆಯೂ ತಿಳಿಯದವರು, ಸಣ್ಣ ಬೇಟೆ ಅಥವಾ ಆಹಾರ ಸಂಗ್ರಹಣೆಯನ್ನೇ ಆಶ್ರಯಿಸಿಕೊಂಡು ಇಡೀ ಬದುಕನ್ನು ಸವೆಸಿದವರು– ಹೀಗೆ ಅರಣ್ಯವಾಸಿ ಸಮುದಾಯಗಳಲ್ಲಿ ಅರಣ್ಯದಷ್ಟೇ 'ಜೀವವೈವಿಧ್ಯ'ವಿದೆ.

ಅರಣ್ಯದಲ್ಲಿದ್ದರೆ ತಮ್ಮ ಬದುಕಿನ ಆಶೋತ್ತರಗಳನ್ನು ಸಾರ್ಥಕ ಮಾಡಿಕೊಳ್ಳಲು ಯಾವ ಮಾರ್ಗವೂ ಇಲ್ಲ, ಆದರಿಂದ ಹೊರಗೆ ಹೋಗಿ ಹೊಸ ಬದುಕಿನ ದಾರಿಗಳನ್ನು ಹುಡುಕಿಕೊಳ್ಳಬೇಕು ಎನ್ನುವ ಕನಸುಗಳನ್ನು ಕಟ್ಟಿಕೊಂಡಿರುವ ಯುವ ಜನತೆ ಸ್ಥಳಾಂತರವನ್ನು ಪರಿಭಾವಿಸುವ ರೀತಿಯೇ ಬೇರೆ, ತಮ್ಮ ಜೀವನದುದ್ದಕ್ಕೂ ಕಾಡಿನಲ್ಲೇ ವಾಸಿಸಿ ಹೊರ ಪ್ರಪಂಚದ ಸಂಪರ್ಕವೇ ಇಲ್ಲದೆ ಹೊಸ ಆಲೋಚನೆಗಳಿಗೆ–ಅಭ್ಯಾಸಗಳಿಗೆ ಅವಕಾಶವನ್ನು ನೀಡಲು ಸಿದ್ಧರಿಲ್ಲದ ಬದುಕಿನ ಸಂಧ್ಯಾಕಾಲದಲ್ಲಿರುವ ಹಿರಿಯರು ಸ್ಥಳಾಂತರಕ್ಕೆ ತೋರುವ ಪ್ರತಿಕ್ರಿಯೆಯೇ ಬೇರೆ. ಇವರೆಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗಿ ಅವರನ್ನು ಹೊರಗೆ ಕರೆತಂದು ವಾಸಿಸಲು ಒಂದು ಸೂರು, ಕೃಷಿ ಮಾಡಲು ಒಂದಿಷ್ಟು ಭೂಮಿ ಕೊಟ್ಟು ಬಿಟ್ಟರೆ ಅವರ ಬದುಕು ಸಾರ್ಥಕವಾಯಿತು ಎಂಬ ಧೋರಣೆಯಿರುವ ಬಂಡವಾಳಶಾಹಿ ವ್ಯವಸ್ಥೆ ಸ್ಥಳಾಂತರ ಮತ್ತು ಪುನರ್ವಸತಿ ಅರಣ್ಯ ಸಂರಕ್ಷಣೆಗೆ ಏಕೈಕ ಮಾರ್ಗವೇನೋ ಎಂಬಂತೆ ನಡೆದುಕೊಳ್ಳುತ್ತಿದೆ. ಸ್ಥಳಾಂತರದ ಪ್ರತಿ ಅನುಭವವೂ ಹೊಸ ಪ್ರಶ್ನೆಗಳನ್ನು ಎತ್ತುತ್ತಿದೆ, ಉತ್ತರಗಳ ಹುಡುಕಾಟವನ್ನು ಮತ್ತಷ್ಟು ಕ್ಲಿಷ್ಟ ಮಾಡುತ್ತಿದೆ.

ಪುನರ್ವಸತಿ ಅರಣ್ಯವಾಸಿ ಸಮುದಾಯಗಳ ಬದುಕಿನಲ್ಲಿ ಸರ್ವತೋಮುಖ ಬದಲಾವಣೆಯನ್ನು ತರುವಂತಿದ್ದರೆ ಆ ಪ್ರಕ್ರಿಯೆ ಆರಂಭವಾದಾಗಿನಿಂದ ದೇಶದ ನಾನಾ ಭಾಗಗಳಲ್ಲಿ ಅದಕ್ಕೆ ಪ್ರತಿಭಟನೆಯೇಕೆ ವ್ಯಕ್ತವಾಗುತ್ತಿತ್ತು? ಕಳೆದ ಕೆಲ ದಿನಗಳಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯಗಳು ನಡೆಸುತ್ತಿರುವ ಹೋರಾಟವೇ ಇದಕ್ಕೆ ಸಾಕ್ಷಿ. ನಾಗರಹೊಳೆ ಅಭಯಾರಣ್ಯದಿಂದ ಸ್ಥಳಾಂತರಗೊಂಡು ಪುನರ್ವಸತಿಗೊಂಡಿರುವ ಆದಿವಾಸಿ ಸಮುದಾಯಗಳು ಹೊಸ ತಾಣದಲ್ಲಿ ಹತ್ತು ವರ್ಷಗಳಾದರೂ ಮೂಲಸೌಕರ್ಯಗಳನ್ನು ಕಲ್ಪಿಸದಿರುವುದನ್ನು ಪ್ರತಿಭಟಿಸಿ ತಾವು ಅರಣ್ಯಕ್ಕೆ ಹಿಂದಿರುಗುತ್ತೇವೆಂದು ಹೇಳುತ್ತಿರುವುದು, ಪುನರ್ವಸತಿಯ ಪರಿಣಾಮಕತ್ವದ ಬಗ್ಗೆ ಗಂಭೀರವಾದ ಪ್ರಶ್ನೆಗಳನ್ನು ಎತ್ತುತ್ತಿದೆ. ಮಲೈ ಮಹದೇಶ್ವರ ವನ್ಯಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸುವುದಕ್ಕೆ ವ್ಯಕ್ತವಾಗುತ್ತಿರುವ ವಿರೋಧವೂ ಆ ಪ್ರದೇಶದ ಅರಣ್ಯಾವಲಂಬಿ ಸಮುದಾಯಗಳ ಬದುಕಿನಲ್ಲಿ ಆಗಬಹುದಾದ ನಕಾರಾತ್ಮಕ ಮಾರ್ಪಾಡುಗಳ ಬಗ್ಗೆ ಎಚ್ಚರಿಕೆಯ ಕರೆಗಂಟೆಗಳನ್ನು ಬಾರಿಸುತ್ತಿದೆ.

ಸ್ಥಳಾಂತರವಾಗಲಿ, ಪುನರ್ವಸತಿಯಾಗಲಿ ಜನರ ಬದುಕಿನ ವಾಸ್ತವಗಳಿಂದ ಪ್ರತ್ಯೇಕಿಸಿ ನೋಡುವಂಥ ವಿಚಾರಗಳಲ್ಲ. ಎಲ್ಲಿಯವರೆಗೂ ಹಿಂದಿನ ಅನುಭವಗಳು ಹಾಗೂ ಭವಿಷ್ಯದ ಸವಾಲುಗಳು–ಇವುಗಳೆರಡನ್ನೂ ಆಧರಿಸಿ ಈ ಕಾರ್ಯಕ್ರಮಗಳನ್ನು ಪುನರ್ವಿಮರ್ಶೆಗೆ ಒಳಪಡಿಸುವುದಿಲ್ಲವೋ ಅವು ಅರಣ್ಯಾವಲಂಬಿ ಸಮುದಾಯಗಳ ಬದುಕಿನಲ್ಲಿ ಗಮನಾರ್ಹವಾದ ಯಾವುದೇ ಬದಲಾವಣೆಯನ್ನೂ ತರಲು ಸಾಧ್ಯವಿಲ್ಲ.

3 ದಿನಗಳ ಪಿ.ಲಂಕೇಶ್‌ರ ನಾಟಕೋತ್ಸವ ಮುಕ್ತಾಯ

ವಚನ ಸಾಹಿತ್ಯದಲ್ಲಿ ಜಾತ್ಯತೀತೆ ಅಂಶ ದೊಡ್ಡ ಪ್ರಮಾಣದಲ್ಲಿದೆ



ಮೈಸೂರು, ಜೂ.1(ಎಸ್‌ಪಿಎನ್)– ವಚನ ಚಳವಳಿಯಲ್ಲಿ ಜಾತ್ಯತೀತತೆಯ ಅಂಶ ದೊಡ್ಡ ಪ್ರಮಾಣದಲ್ಲಿ ಒಳಗೊಂಡಿದೆ ಎಂದು ನಿವೃತ್ತ ಪ್ರಾಧ್ಯಾಪಕ ಹಾಗೂ ಪ್ರಗತಿ ಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ರಂಗಜಗಲಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಾಟಕಕಾರ ಪಿ.ಲಂಕೇಶ್ ಅವರ ಸ್ಮರಣಾರ್ಥ ಮೂರು ದಿನಗಳ ಪಿ.ಲಂಕೇಶ್ ನಾಟಕೋತ್ಸವ ಮುಕ್ತಾಯ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಹಿರಿಯ ರಂಗಕರ್ಮಿ ಪಿ.ಲಂಕೇಶ್ ಕುರಿತು ಎಷ್ಟು ಮಾತನಾಡಿದರೂ ಅದು ಕಡಿಮೆಯೇ. ಅವರೊಬ್ಬ ಪ್ರಾಮಾಣಿಕ ಸಾಮಾಜಿಕ ಹೋರಾಟಕಾರ, ನಾಟಕಕಾರ, ಪತ್ರಕರ್ತ ಹಾಗೂ ಕನಸುಗಾರ ಒಟ್ಟಿನಲ್ಲಿ ಬಹುಮುಖ ಪ್ರತಿಭೆ ಎಂದರೆ ತಪ್ಪಾಗಲಾರದು. 1970ರ ದಶಕದಲ್ಲಿ ಜ್ಞಾನಪೀಠ ಪುರಸ್ಕೃತ ಪ್ರೊ. ಅನಂತಮೂರ್ತಿ, ಪಿ.ಲಂಕೇಶ್, ತೇಜಸ್ವಿ ಸೇರಿದಂತೆ ಇತರೆ ಚಿಂತಕರು ಸಮಾಜವಾದಿ ಚಳುವಳಿಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡು ಸಮಾಜ ಬದಲಾವಣೆಗೆ ಶ್ರಮಿಸಿದ್ದರು ಎಂದು ತಿಳಿಸಿದರು. ಲಂಕೇಶ್, ಅನಂತ ಮೂರ್ತಿ, ಪೂರ್ಣಚಂದ್ರ ತೇಜಸ್ವಿ ಸೇರಿದಂತೆ ಹಲವು ಚಿಂತಕರು ವಿಶ್ವಮಟ್ಟದ ಸಾಹಿತ್ಯವನ್ನು ರಚನೆ ಮಾಡಿದ್ದಾರೆ. ಲಂಕೇಶ್ ನವರೊಂದಿಗೆ ಇಲ್ಲದಿದ್ದರೂ ಅವರ ಸಾಧನೆ ಇಂದಿಗೂ ಅವರನ್ನು ನೆನೆಯುವಂತಾಗಿದೆ. ಅವರ ಸಾಧನೆಯನ್ನು ಇಂದಿನ ಪೀಳಿಗೆಗೆ ರಂಗಜಗಲಿ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ದಯಾನಂದ ಕಟ್ಟೆ ಅವರು ಪರಿಚಯಿಸುವ ಕೆಲಸ ಮಾಡಿರುವುದು ಸ್ವಾಗತಾರ್ಹ ಎಂದರು.

ಆರೋಗ್ಯ ಸಮಾಜ ಕಟ್ಟುವಲ್ಲಿ ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್ ಸೇರಿದಂತೆ ಇತರರು ಅಪಾರ ಕೊಡುಗೆ ನೀಡಿದ್ದಾರೆ. ಸಾಮಾಜಿಕ ಚಳವಳಿಗಳನ್ನು ರೂಪಿಸುವ ಬರದಲ್ಲಿ ಇವರೆಲ್ಲಾ ತಮ್ಮ ತಮ್ಮ ಕುಟುಂಬವನ್ನು ಮರೆತು ಕುಟುಂಬ ನಿರ್ವಹಣೆಯನ್ನೇ ಮರೆತಿದ್ದರು. ಅವರ ಆರ್ಥಿಕ ನಿರ್ವಹಣೆ ತುಂಬಾ ಕೆಟ್ಟದಾಗಿತ್ತು ಎಂದ ಅವರು, ನಾನು ಅವರೊಂದಿಗೆ ಬೆಂಗಳೂರು ವಿವಿಯಲ್ಲಿ 12 ವರ್ಷ ಕೆಲಸ ಒಟ್ಟಿಗೆ ಮಾಡಿದ್ದೇನೆ. ನಾನು ಕಂಡಂತೆ ಪಿ.ಲಂಕೇಶ್ ಎಲ್ಲಾ ವರ್ಗದ ಜನರೊಂದಿಗೆ ಬೆರೆಯುತ್ತಿದ್ದರು ಎಂದು ವಿವರಿಸಿದರು.

12ನೇ ಶತಮಾನದಲ್ಲಿ ಅಕ್ಕಮಹಾದೇವಿ ರಚಿಸಿದ ವಚನಗಳು ವಿಶ್ವ ಮಟ್ಟದ್ದಾಗಿವೆ. ಇದರ ಬಗ್ಗೆ ರಾಮ ಮನೋಹರ ಲೋಹಿಯಾ ಅವರು, ಸಂಸತ್ತಿನಲ್ಲಿ ಪ್ರಸ್ತಾಪಿಸಿ, ಅಕ್ಕನ ಬಗ್ಗೆ ಭಾವನಾತ್ಮಕವಾಗಿ ಮಾತನಾಡಿದ್ದ ಪ್ರಸಂಗವನ್ನು ವಿವರಿಸಿದರು.

ಅಲ್ಲಮ ಪ್ರಭು, ಬಸವಣ್ಣ ಸೇರಿದಂತೆ ಅನೇಕ ವಚನಕಾರರು ಸಮಾಜದ ಪರಿವರ್ತನೆ ಬಗ್ಗೆ ಗಮನ ಸೆಳೆದಿದ್ದಾರೆ. ಅದರಲ್ಲೂ ಅಕ್ಕನ ವಚನಗಳಲ್ಲಿ ಆಧ್ಯಾತ್ಮಿಕ ಪ್ರೇಮ ಕಾವ್ಯಗಳಂತೆ ಭಾಸವಾಗುತ್ತದೆ. ವಚನಗಳಲ್ಲಿ ಜಾತ್ಯತೀತತೆ ಅಂಶಗಳು ಹಾಸು ಹೊಕ್ಕಾಗಿದೆ. ಇದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದು. ಇದರ ಬಗ್ಗೆ ತಿಳಿದುಕೊಳ್ಳಲು ಸಾಂಸ್ಕೃತಿಕವಾಗಿ ಯುವ ಪೀಳಿಗೆ ಹೆಚ್ಚು ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಸಾತ್ವಿಕ ರಂಗಮಂಚ ಕಲಾವಿದರು ಅಭಿನಯದ ರಂಗಕರ್ಮಿ ಪುರುಷೋತ್ತಮ್ ಆರ್.ಕಾಕಂಬಿ ನಿರ್ದೇಶನದ ಟಿ.ಪ್ರಸನ್ನನ ಗೃಹಸ್ಥಾಶ್ರಮ ಪ್ರದರ್ಶನಗೊಂಡಿತು. ಮೈಸೂರು ವಿವಿ ಲಲಿತ ಕಲಾ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಕುಮಾರ್, ಜಾನಪದ ಕಲಾ ಒಕ್ಕೂಟದ ಅಧ್ಯಕ್ಷ ಆರ್.ಕೆ.ಸ್ವಾಮಿ, ನಿರ್ದೇಶಕ ಸಿದ್ದೇಗೌಡ, ಸಾಹಿತಿ ಪಳನಿಸ್ವಾಮಿ ಮುಡುಕುತೊರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹನೂರು ಚೆನ್ನಪ್ಪ ಉಪಸ್ಥಿತರಿದ್ದರು.

ಡಿ.ವಿ.ಸದಾನಂದಗೌಡರ ಹೇಳಿಕೆಗೆ ಕಾಂಗ್ರೆಸ್ ಖಂಡನೆ



ಹೆಚ್.ಎ.ವೆಂಕಟೇಶ್

ಮೈಸೂರು, ಜೂ.1(ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ .ರವಿಶಂಕರ್ ಅವರಿಗೆ ಪ್ರತಿಸ್ಪರ್ಧಿಗಳೇ ಇಲ್ಲ ಎಂಬ ಕೇಂದ್ರದ ಮಾಜಿ ಸಚಿವ ಡಿ.ವಿ. ಸದಾನಂದಗೌಡರ ಹೇಳಿಕೆಯನ್ನು ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್ ಖಂಡಿಸಿದ್ದಾರೆ.

ಸದಾನಂದಗೌಡರ ಹೇಳಿಕೆಯನ್ನು ಪ್ರಜ್ಞಾವಂತ ಮತದಾರರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲಾಗದ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ಜನರಿಗೆ ಸುಳ್ಳು ಭರವಸೆಗಳನ್ನು ನೀಡುತ್ತಿದೆ. ನೇಮಕಾತಿ ಹಗರಣದಲ್ಲಿ ಪ್ರಾಮಾಣಿಕ ಪದವೀಧರರಿಗೆ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿದರು.

ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಮತದಾರರಿಗೆ ಸುಳ್ಳು ಆಮಿಷಗಳನ್ನು ನೀಡುತ್ತಿದೆ. ಸಚಿವರನ್ನು ಬಳಸಿಕೊಂಡು ಸರ್ಕಾರಿ ನೌಕರರು, ಮೈಮುಲ್ ನೌಕರರು, ಶಿಕ್ಷಕರು, ಖಾಸಗಿ ಶಿಕ್ಷಣ ಆಡಳಿತ ಮಂಡಳಿಗಳ ಮೇಲೆ ಪ್ರಭಾವ ಬೀರುವ ಕೆಲಸ ನಡೆಯುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಬಗ್ಗೆ ಉತ್ತಮವಾದ ವಾತಾವರಣ ಇರುವ ಕಾರಣ ಮತದಾರರು ಕಾಂಗ್ರೆಸ್‌ನ ಕಡೆಗೆ ಮುಖ ಮಾಡಿದ್ದಾರೆ. ಜೊತೆಗೆ ಸಿದ್ದರಾಮಯ್ಯ ಅವರ ಸರ್ಕಾರದ ವೇಳೆ ನೌಕರರಿಗೆ ಅನೇಕ ಸವಲತ್ತುಗಳನ್ನು ನೀಡಲಾಗಿತ್ತು. ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಹಲವಾರು ಸೌಲಭ್ಯಗಳನ್ನು ನೀಡಲಾಗಿತ್ತು. ಜೊತೆಗೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಗಮನ ಹರಿಸಿತ್ತು ಇವೆಲ್ಲವೂ ಮತದಾರರ ಮನಸ್ಸಿನಲ್ಲಿದೆ ಇವೆಲ್ಲವೂ ಬಿಜೆಪಿಗೆ ದುಷ್ಪರಿಣಾಮ ಉಂಟಾಗಲಿದೆ. ಬಿಜೆಪಿ ಸಚಿವರು ಯಾವುದೇ ಭರವಸೆ ನೀಡಿದರೂ ಮತದಾರರು ನಂಬುವ ಸ್ಥಿತಿಯಲ್ಲಿ ಇಲ್ಲ ಎಂದು ವೆಂಕಟೇಶ್ ತಿಳಿಸಿದರು.

ಆಡಳಿತದ ಮೇಲೆ ದುಷ್ಪರಿಣಾಮ ಬೀರುವ ವ್ಯವಸ್ಥೆಯನ್ನು ಬಿಜೆಪಿ ಕಲ್ಪಿಸಿದೆ. ವಿಶ್ವವಿದ್ಯಾನಿಲಯಗಳು ಸೇರಿ ವಿವಿಧ ಇಲಾಖೆಗಳಲ್ಲಿ ಅಪಾರ ಪ್ರಮಾಣದ ಹುದ್ದೆಗಳು ಖಾಲಿಯಾಗಿದ್ದರೂ ನೇಮಕ ಮಾಡುತ್ತಿಲ್ಲ. ಇದರಿಂದಾಗಿ ಪದವೀಧರರು ಕೆಲಸ ಸಿಗದೆ ನಿರುದ್ಯೋಗಿಗಳಾಗಿದ್ದಾರೆ ಎಂದರು.

ಯೋಗ ಬೋಧಕರಿಗೆ ತರಬೇತಿ ಶಿಬಿರ

ಮೈಸೂರು, ಜೂ.1– ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ಸ್ಕೂಲ್ ಆಫ್ ಯೋಗ ಅವರಿಂದ ಹೈಬ್ರಿಡ್ 50 ಗಂಟೆಗಳ ಸಹಾಯಕ ಯೋಗ ಬೋಧಕರ ತರಬೇತಿಯನ್ನು ಜೂ.4ರಿಂದ 12ರವರೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯ ಶಿವಾನಂದ ಜ್ಞಾನಾಲಯದಲ್ಲಿ ನೀಡಲಾಗುತ್ತದೆ ಶ್ರೀ ಶ್ರೀ ಸ್ಕೂಲ್ ಆಫ್ ಯೋಗ ಮತ್ತು ಆಯುಷ್ ಸಚಿವಾಲಯದೊಂದಿಗೆ ಪ್ರಮಾಣೀಕೃತ ಸಹಾಯಕ ಯೋಗ ಬೋಧಕರಾಗಿ ಈ ತರಬೇತಿಯ ಪದವೀಧರರು ರಾಷ್ಟ್ರಾದ್ಯಂತ ಸಾಮೂಹಿಕವಾಗಿ ಉಚಿತ ಯೋಗ ಸೆಷನ್‌ಗಳು ಮತ್ತು ತರಬೇತಿಯನ್ನು ನೀಡಬಹುದು. ನೋಂದಣಿಗಾಗಿ ಮೊ. 9663376393, ಹೆಚ್ಚಿನ ಮಾಹಿತಿಗಾಗಿ tiny.cc/AYI ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಣ್ಣಿನ ಉಚಿತ ತಪಾಸಣಾ ಶಿಬಿರ

ಮೈಸೂರು, ಜೂ.1– ಮೈಸೂರಿನ ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಇಎಸ್‌ಐ ಕಾರ್ಡುದಾರರಿಗೆ ಮತ್ತು ಕುಟುಂಬ ವರ್ಗದವರಿಗೆ ಕಣ್ಣಿನ ಉಚಿತ ತಪಾಸಣಾ ಶಿಬಿರವನ್ನು ಜೂ. 15ರವರೆಗೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಯ್ಯಾಜಿರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ನೀಡಿ ತಪಾಸಣೆ ಮಾಡಿಸಿಕೊಳ್ಳಬಹುದಾಗಿದೆ. ಹೆಸರು ನೋಂದಾಯಿಸಲು 8884477956 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
60x40
Site for Sale, 90 Lakhs. MUDA Approved Gramina Employees Layout, Bogadi.
7208048435

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಒಂದು ಚದರಕ್ಕೆ 1,80,000– *ಷರತ್ತು ಅನ್ವಯ. ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361 / 9380885787

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷಿನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

ಮನೆ ಮಾರಾಟಕ್ಕಿದೆ
ಹುಣಸೂರು KSRTC ಬಸ್ ನಿಲ್ದಾಣದ ಪಕ್ಕದಲ್ಲಿರುವ ಪೂರ್ಣಿಮಾ ಬಾರ್ ಹಿಂಭಾಗದಲ್ಲಿ 40x60 ಸೈಟ್‌ನಲ್ಲಿ ಎಲ್ಲಾ ಸೌಕರ್ಯಗಳನ್ನು ಹೊಂದಿರುವ (Borewell ಮತ್ತು Solar) 3BHK RCC ಮನೆ ಮಾರಾಟಕ್ಕೆ ಇದೆ
9448850596

HOUSE FOR SALE
Door No. 5257, 30x25 land, Vijayanagar 2nd Stage, 3rd Main, 9th Cross, Near SBI ATM. No brokerage.
Call: Owner
Mob: 9980606546

ಮಾರಾಟಕ್ಕಿದೆ
ಮೈಸೂರುನಗರದ, ಶಾರದಾದೇವಿನಗರ ಬಡಾವಣೆಯಲ್ಲಿರುವ ಹೆಚ್.ಐ.ಜಿ –32 ಕ್ಕೆ ಸೇರಿದ ತುಂಡು ಜಾಗ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 12.00 ಮೀಟರ್ ಉತ್ತರದಿಂದ ದಕ್ಷಿಣಕ್ಕೆ 10.30 + 17.20/ 2 ಮೀಟರ್ ಅಳತೆಯ ಒಟ್ಟು 165.00 ಚ.ಮೀಟರ್ ಖಾಲಿ ನಿವೇಶನ ಮಾರಾಟಕ್ಕೆ ಇದೆ. ಸಂಪರ್ಕಿಸಿ.
9844444069 / 9845113207

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಕಡಕೊಳ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ITI & PUC Pass /Fail (8) Hr ಕೆಲಸ ESI & PF ಸಂಪರ್ಕಿಸ ಬೇಕಾದ ಸಂಖ್ಯೆಗಳು
9148532537 / 6366421093

ಮನೆ ಬಾಡಿಗೆಗಿದೆ
20x30 ಅಳತೆಯ 2BHK ಯ ಮೊದಲ ಮಹಡಿಯ ಮನೆ ಶ್ರೀರಾಂಪುರ 2ನೇ ಹಂತದಲ್ಲಿ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ:
9845692320

ಡ್ರೈವರ್ ಬೇಕಾಗಿದ್ದಾರೆ
ಕನಿಷ್ಠ 5 ವರ್ಷ ಚಾಲನ ಅನುಭವವಿರುವ ಹೈಯರ್ ಎಂಡ್ ವಾಹನ ಚಾಲನೆ ನಡೆಸಿರುವ ಹಾಗೂ ಬೆಂಗಳೂರು ನಗರದ ಸಂಪೂರ್ಣ ಪರಿಚಯವಿರುವ ಚಾಲಕರು ಬೇಕಾಗಿದ್ದಾರೆ. ವೇತನ 25,000 (ESI, PF) ಆಸಕ್ತರು Email ಮೂಲಕ ಪೂರ್ಣ ವಿವರಗಳೊಂದಿಗೆ ಅರ್ಜಿ ಸಲ್ಲಿಸಿ
Email ID: hrnypschool@gmail.com

LMV ಶಾಲಾ ವಾಹನಕ್ಕೆ ಚಾಲಕರು ಬೇಕಾಗಿದ್ದಾರೆ
ಆಸಕ್ತರು Email ಮೂಲಕ ಪೂರ್ಣ ವಿವರಗಳೊಂದಿಗೆ ಅರ್ಜಿ ಸಲ್ಲಿಸಿ
Email ID: hrnypschool@gmail.com

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವೀಸ್ ಇಂಜಿನಿಯರ್ಸ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಶ್ರೀ ಗೌರಿಶಂಕರ ಟೂರಿಸ್ಟ್
10–7–22 (1 ದಿನ) ಘಾಟಿ ಸುಬ್ರಮಣ್ಯ, ಕೋಟಿಲಿಂಗ, ಚಿಕ್ಕತಿರುಪತಿ ಇತ್ಯಾದಿ.
15–7–22 (9 ದಿನ) ಪಳನಿ, ಮಧುರೈ, ಕನ್ಯಾಕುಮಾರಿ, ರಾಮೇಶ್ವರ, 9 ನವಗ್ರಹ ಇತ್ಯಾದಿ.
12–8–22 (7 ದಿನ) ಕಾಶಿ, ಅಯೋಧ್ಯ, ಪ್ರಯಾಗ್‌ರಾಜ್, ಗಯ ಇತ್ಯಾದಿ.
12–9–22 (13 ದಿನ) ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಉತ್ತರಕಾಶಿ ಇತ್ಯಾದಿ.
(ವಿಮಾನ ಮತ್ತು ಎ.ಸಿ. ಬಸ್ಸು) (ಊಟ, ವಸತಿ ಸೇರಿರುತ್ತದೆ)
9620002114

ಮಂಟಪ ಮನೆ

ನಮ್ಮಲ್ಲಿ ಬೀಟೆ, ಹಲಸು, ಸಾಗ್ವಾನಿ ಮರಗಳಿಂದ ತಯಾರಾದ ಮಂದಾಸನ, ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಶ್ರೀನಗರ, ಮೈಸೂರು
9448207634 / 9036742526

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು
11B ಮತ್ತು 9&11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟು ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಬಿಸಿನೆಸ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ. ಸಂಪರ್ಕಿಸಿ.
8088647887

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysuru, DTCP approved, (Corporation Limit) 1.5 kms from J P Nagar Ring Road.
8660105902

HOUSE FOR SALE / RENT
New Gr.Flr, 1BHK, Super Builtup area 887.16 Sq.ft Registered, Fully Furnished, 2 Bathrooms, Individual Car Parking Space, AC, Modular Kitchen for Sr. Citizen, Min 50 Yrs Age in Tapovan Solace Apartment, Sharada Devi Nagar. No Brokers
9686617133

S.M. GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5200
ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ ಕೂಡಲೇ ಸಂಪರ್ಕಿಸಿ.(T&C)
8050518881

Dr. D.H. BAGALKOT SEXOLOGIST (Since 1983)
ಲೈಂಗಿಕ ನಿಶ್ಯಕ್ತಿ ಹಾಗೂ ನಶಾಮುಕ್ತಿ

ಶೀಘ್ರ ಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತೆಳಿಯಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ
*ಮೈಸೂರು : ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ, ಧನವಂತ್ರಿ ರೋಡ್
Cell:9743193428
www.drbagalkot.com

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಕಂಪನಿ ಹಾಗೂ ಆಫೀಸ್ ವರ್ಕ್‌ಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ ವೇತನ + ಓಟಿ 18,000 ರಿಂದ 30,000
9538811223
9538811104

ದೈವ ಕೃಪ
ಒಳ್ಳೆಯ ಉದ್ಯೋಗದಲ್ಲಿರುವ ವರಗಳಿಗೆ ವಧುಗಳು ಬೇಕಾಗಿದೆ. ಎಲ್ಲಾ ಜನಾಂಗದ ಮಡಿವಾಳ (1) ಭಾವಸಾರ್ ಕ್ಷತ್ರಿಯ, 29 ವರ್ಷದ ಬ್ಯಾಂಕ್ ಉದ್ಯೋಗಿ. (2) ಭಾವಸಾರ ಕ್ಷತ್ರಿಯ, 2ನೇ ಸಂಬಂಧಕ್ಕೆ ಶಿವಾಜಿ ಮರಾಠ, ಅರಸು, ತಮಿಳ್, ಕನ್ನಡ ಆಚಾರ್, SC, ST ಲಿಂಗಾಯತ ಆಚಾರ್ ಕರೆಮಾಡಿ ಕುರುಬಗೌಡ, ನಯನ ಕ್ಷತ್ರಿಯ ಹಾಗೂ 2ನೇ ಸಂಬಂಧಕ್ಕೆ ಸಂಪರ್ಕಿಸಿ:
Puttaswamy DIC Rtd.
9902802154

TEACHERS WANTED
1) Montessori Teacher - 02
2) B.Sc, B.Ed - 02, 3) BA, B.Ed in English - 2
4) Hindi B.Ed - 02
5) D.Ed any Subejct - 02
6) P.E Teacher - 01 7) Music Teacher - 01
8) Dance Teacher - 01
9) Computer Teacher - 01
Gayathri Vidyalaya, Santhemala, K.R.Sagara
8892927318 / 6360302911

ತಕ್ಷಣ ಬೇಕಾಗಿದ್ದಾರೆ
PART TIME /FULL TIME / HOME-BASED
E-CODE GAS SAFE

EDUCATION	WORK TIME	SALARY
SSLC,PUC,DIP	4 HOURS	8000/-
Any Degree	8 HOURS	16000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಾರ್ಖಾನೆಗಳಲ್ಲಿ ಕೆಲಸ ಮಾಡಲು SSLC, PUC, (Pass or Fail) ಮತ್ತು ಅನುಭವವಿರುವ ಮೆಕ್ಯಾನಿಕಲ್ ಮೇಂಟೆನೆನ್ಸ್, ಎಲೆಕ್ಟ್ರಿಷಿಯನ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ
8553934317
8660196479

WANTED
Female Experienced Office Assistant, Fluency in English, Smart Hair Fixing, Anikethana Road, Kuvempunagar
8792945515

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

HOUSE FOR SALE
MUDA 30x40
New 4 BHK Duplex House with 22 Squares Furnished, E/F Door at SBM Layout, Bogadi - Rs.1.40 Cr Pillar construction,100 mtrs from Gaddige Road
Direct Owner: 6361295132

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
EXECUTIVE ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ :–
6364414499

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ – ನೀಮ್
ನಂ.203, ಬನ್ನಿಮಂಟಪ ಬಡಾವಣೆ ಮೈಸೂರು – 570015
8088887802

ITI ಗೆ ಪ್ರವೇಶಾವಕಾಶ
2022–23ನೇ ಸಾಲಿಗೆ Fitter & Electronics Mechanic ವಿಭಾಗಗಳಿಗೆ SSLC Pass or PUC Pass/Fail ವಿದ್ಯಾರ್ಥಿ / ವಿದ್ಯಾರ್ಥಿನಿಯರು ಪ್ರವೇಶ ಪಡೆಯಬಹುದಾಗಿದೆ. ಭಾರತ ಸರ್ಕಾರದಿಂದ DGE&T (NCVT) ಶಾಶ್ವತ ಸಂಯೋಜನೆ ಗೊಂಡಿರುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ. ಶ್ರೀ ಅರುಣೋದಯ ITI :(ಹಿನಕಲ್ ರಿಂಗ್ ರೋಡ್ ಫ್ಲೈ ಓವರ್ ಹತ್ತಿರ) Online ಮೂಲಕ ಅರ್ಜಿ ಸಲ್ಲಿಸಲು www.arunodayaitimys.com ಭೇಟಿ ಕೊಡಿ. ಕೆಲವೇ ಸೀಟುಗಳು ಲಭ್ಯವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ.
0821-2515667 / 9902309566
9845004150

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9845755668

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಉದ್ಯೋಗಾವಕಾಶ
ಉಚಿತ ತರಬೇತಿಯೊಂದಿಗೆ ಪ್ರಸಿದ್ಧ ಹಣಕಾಸು ಕಂಪನಿಯಲ್ಲಿ ಉದ್ಯೋಗ ಪಡೆಯುವ ಸುವರ್ಣಾವಕಾಶ ದ್ವಿತೀಯ ಪಿಯುಸಿ ಪೂರ್ಣಗೊಂಡ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಸಂಪರ್ಕಿಸಿ:
9844344393
ಸ್ವವಿವರವನ್ನು ಇ ಮೇಲ್ ಮಾಡಿ: info.kaushalyadarpana@gmail.com

HOUSE FOR SALE
MUDA Allotted 40x55
N/F, 4 BHK Duplex Furnished, 32 squares, 15 years Old House at T K Layout, 4th Stage, Prime Location, Rs. 1.95 cr. Owner will give 6 months Time for registration. Brokers Excuse
8660105902

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

CHANGE OF NAME
I, Mohammed Moin, residing at No. #292, 6th Cross, Bannimantap 'C' Layout, Mysore-570 015, have changed my name as Mohamed Moin, on my own free will, in front of Notary Leelavathi on 1.6.2022. That I therefore request the concerned authorities to may please update and rectify my name as Mohamed Moin.
Sd/- Mohamed Moin

WANTED
Female Telecaller : 6 Nos.
Male Marketing Executives : 5 Nos.
Event Manager: 2 Nos.
Data Entry Operator : 8 Nos.
T.V. Actors : 2 Nos.
Contact: Media TV
Mob: 9743283001

ಉದ್ಯೋಗವಕಾಶ
(Consultancy ಅಲ್ಲ) ಮೈಸೂರಿನಲ್ಲಿರುವ Govt/ Regtd AWG ಕಂಪನಿಗೆ ಕನ್ನಡ ಬಲ್ಲ ಅಭ್ಯರ್ಥಿಗಳನ್ನು ನೇರ Interview ನೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಕೂಡಲೇ ಕರೆಮಾಡಿ. ವಯೋಮಿತಿ: 18-34 years, ತಿಂಗಳಿಗೆ: 27,000-35,000 + ಉಚಿತ ವಸತಿ
ಅಮೃತ: 9844219943
9663481922

BRAHMIN LAYOUT
30x40 E/F site for sale
30x40 KHB, Kenchalagudu, Mysuru.
9886481265, 8310972636

ಬೇಕಾಗಿದ್ದಾರೆ
ಐಶ್ವರ್ಯ ಡ್ರೈವಿಂಗ್ ಸ್ಕೂಲ್, ಮೈಸೂರು.
ಡ್ರೈವರ್
5 ವರ್ಷ ಅನುಭವವುಳ್ಳವರು –5
ರಿಸೆಪ್ಷನಿಸ್ಟ್
ಕಂಪ್ಯೂಟರ್ ಅನುಭವವುಳ್ಳವರು –6
ಉದಯಗಿರಿ, ಸುಭಾಷ್‌ನಗರ, ವಿ.ವಿ.ಮೊಹಲ್ಲಾ, ಹೂಟಗಳ್ಳಿ, ಪಾಂಡವಪುರ, ಜಕ್ಕನಹಳ್ಳಿ
9341922646

CONSTRUCTING DREAM HOMES SINCE 25 YEARS
Construction Starts @
Basic 1,70,000/- Sq.
Standard 1,85,000/- Sq.
Free Plan / 3D Elevation
9035138426

ಕಳೆದಿದೆ
ಸೋಮಶೇಖರ ನಾದ ನಾನು ಖರೀದಿಸಿರುವ ಆಸ್ತಿಯ Document No-6083 Volume -1391 Pages 135-136 of Book 1 Date 28/02/1951 ರ ದಾನಪತ್ರವನ್ನು ಕಳೆದು ಕೊಂಡಿದ್ದೀರಿ ಯಾರಿಗಾದರು ಸಿಕ್ಕಿದಲ್ಲಿ 7 ದಿನಗಳ ಒಳಗೆ ಕೆಳಗಿನ ನಂಬರ್ ಅನ್ನು ಸಂಪರ್ಕಿಸಿ – ರಾಮಚಂದ್ರ
9448773612

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ –ಯುವತಿಯರು ಬೇಕಾಗಿದ್ದಾರೆ
Salary :13,000–21,000 + ESI. PF
ವಿದ್ಯಾರ್ಹತೆ – 10th. PUC. ITI. DIPLOMA And Any Degree
ಇಂದೇ ಸಂಪರ್ಕಿಸಿ
9035734821

40X60 K.H.B SITE FOR SALE
ವೇದಪುರಂ ಮೈಸೂರು (ಹಳೇ ಕೆಸರೆ ರಸ್ತೆ)
Good location
(Sqft 2600-00)
9008984941

Hotel Management Admission Open
Govt of karnataka Department of Tourism
Affiliated by NCHMCT - Noida
FOOD CRAFT INSTITUTE
Dasara Exhibition Grounds Mysuru
www.fcimysuru.com
Mob: 6362018821
Landline : 0821-2445388

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮೈಸೂರಿನ ಪ್ರಸಿದ್ಧ ಹೋಟೆಲ್‌ಗಳಲ್ಲಿ ಕಾರ್ಯ ನಿರ್ವಹಿಸಲು ಊಟ, ತಿಂಡಿ, ಸೌಲಭ್ಯವಿದೆ. ESI, PF, ಇದೆ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ
6364560079
9900763507

ROOM FOR RENT
with furniture and attached bathroom for working Gents only at Saraswathipuram
9448166187

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು. ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೊಂದಾಯಿತ ಸಂಸ್ಥೆ) ಸಂಬಳ ಊಟ, ವಸತಿಯೊಂದಿಗೆ 12,000–18000 ರವರೆಗೆ
9739292222
9035113222

ಬೇಕಾಗಿದ್ದಾರೆ
ಮೈಸೂರು ನಗರದಲ್ಲಿ ಕೇಬಲ್ ಕೆಲಸ ಮಾಡಲು ಟೆಕ್ನಿಷಿಯನ್ ಡ್ರೈವರ್ ಮತ್ತು ಕಲೆಕ್ಷನ್ ಮಾಡಲು ಹುಡುಗರು ಬೇಕಾಗಿದ್ದಾರೆ
9483508822
9113965244

ಶಿಕ್ಷಕರು ಬೇಕಾಗಿದ್ದಾರೆ
ಹಿಂದಿ ಶಿಕ್ಷಕರು
BA.BEd ಮಾಡಿರುವವರು ಈ ಕೂಡಲೇ ಬೇಕಾಗಿದ್ದಾರೆ ಸಂಪರ್ಕಿಸಿ
8861220628

ಮಹಿಳಾ ಆಯಾ ಬೇಕಾಗಿದ್ದಾರೆ
ಎಸ್.ಎಸ್.ಎಲ್.ಸಿ ಪಾಸ್/ಫೇಲ್ ತಕ್ಷಣ ಮುಖ್ಯ ಶಿಕ್ಷಕರನ್ನು ಕಾಣಬೇಕು, ಸೆಂಟ್ ಮೆರಿನಾಸ್ ಆಂಗ್ಲ ಮಾಧ್ಯಮ ಶಾಲೆ ರಾಜೇಂದ್ರ ನಗರ ಮುಖ್ಯರಸ್ತೆ, ಕಾವೇರಿ ಫಂಕ್ಷನ್ ಹಾಲ್ ಎದುರು, ಎನ್.ಆರ್ ಮೊಹಲ್ಲಾ ಮೈಸೂರು ಸಂದರ್ಶನದ ಸಮಯ ಮಧ್ಯಾಹ್ನ 2 ರಿಂದ 4 ಗಂಟೆವರೆಗೆ
ದಿನಾಂಕ: 03.06.2022

ತಕ್ಷಣ ಬೇಕಾಗಿದ್ದಾರೆ
House Keeping, Security, Office boy, Production line, Data Entry, cashier, Billing, Sales executives, promoters ಮುಂತಾದ ಕೆಲಸಗಳಿಗೆ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ, ಸರಸ್ವತಿಪುರಂ, ಒಂಟಿಕೊಪ್ಪಲ್, ಜೆ.ಪಿ.ನಗರ, ಕುವೆಂಪು ನಗರ, ಎನ್.ಆರ್ ಮೊಹಲ್ಲಾ ಮುಂತಾದ ಏರಿಯಾ ಗಳಿಗೆ ಬೇಕಾಗಿದ್ದಾರೆ. (Any Qualification) ಸಂಬಳ 14000–35000 (ESI+PF+OT) ಸೇರಿ ಸಂಪರ್ಕಿಸಿ
9353753194/9980850141

ಮೈತ್ರಿ
ವಿಶೇಷ ಬುದ್ದಿಮಾಂದ್ಯ ಮಕ್ಕಳ ಶಾಲೆ ದಾಖಲಾತಿ ಆರಂಭವಾಗಿದೆ ನುರಿತ ವಾಹನ ಚಾಲಕರು ಬೇಕಾಗಿದ್ದಾರೆ. ಕುವೆಂಪುನಗರ
8618223393
7259639128

ಬೇಕಾಗಿದ್ದಾರೆ
1) ಮೆಕ್ಯಾನಿಕ್ : (ಟ್ರಕ್ ಮೆಕ್ಯಾನಿಕ್–ಟಾಟಾ, ಈಚರ್, ಅಶೋಕ್ ಲೇಲ್ಯಾಂಡ್) 2) ಎಲೆಕ್ಟ್ರಿಷಿಯನ್ (ಟ್ರಕ್ ಎಲೆಕ್ಟ್ರಿಷಿಯನ್ – ಟಾಟಾ, ಈಚರ್, ಅಶೋಕ್ ಲೇಲ್ಯಾಂಡ್) 3) ಡಿಪ್ಲೋಮಾ ಕ್ಯಾಂಡಿಡೇಟ್ಸ್: (ಆಟೋ ಮೊಬೈಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಡಿಪ್ಲೊಮಾ ಕ್ಯಾಂಡಿಡೇಟ್ಸ್) ಬೇಕಾಗಿದ್ದಾರೆ.
8105078113

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

ಮೈಸೂರು ಮ್ಯಾರೇಜ್ ಲಿಂಕ್ಸ್
ಎಲ್ಲಾ ಜಾತಿಯ ವಧು ವರರು ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ನಿಮ್ಮ ಫೋಟೋ & ಬಯೋಡೇಟಾ ವಾಟ್ಸಪ್ ಮಾಡಿರಿ.
ಡಾ.ಗುರೂಜಿ ಮೈಸೂರು
6361740552

ಕೆಲಸಕ್ಕೆ ಬೇಕಾಗಿದ್ದಾರೆ
ಬೆಂಗಳೂರು, ಮೈಸೂರು ಮತ್ತು ನಂಜನಗೂಡು ಪ್ರಖ್ಯಾತ MNC ಕಂಪನಿಗಳಿಗೆ ಮತ್ತು ಆಫೀಸ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. 4, 7, 10, PUC, ITI, Diploma (Any Pass/ Fail) ಆದವರಿಗೆ ನೇರ ನೇಮಕಾತಿ ಸಂಬಳ 40,000 ರಿಂದ 65,000 ರೂಗಳು ಊಟ ವಸತಿಯೊಂದಿಗೆ ESI/PF ಸೌಲಭ್ಯಗಳಿರುತ್ತದೆ. ಆಫೀಸು ಕೆಲಸಗಳಿಗೆ Degree Pass/Fail ಆದವರು ಬೇಕಾಗಿದ್ದಾರೆ. (ವಿದ್ಯಾರ್ಹತೆ ಇಲ್ಲದವರಿಗೆ ಮೊದಲ ಆದ್ಯತೆ) ಆಸಕ್ತಿ ಉಳ್ಳವರು ಕೂಡಲೇ ಸಂಪರ್ಕಿಸಿ.
9035722158 / 9035594719

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನಲ್ಲಿ ಕೆಲಸ ಮಾಡಲು ಈ ಕೆಳಕಂಡ ಹುದ್ದೆಗೆ ಬೇಕಾಗಿದ್ದಾರೆ.
1) ವೆಲ್ಡರ್: (ಹ್ಯಾಂಡ್ ವೆಲ್ಡರ್ & ಆರ್ಗನ್ ವೆಲ್ಡರ್).
2) ಹೆಲ್ಪರ್ : (ಮೆಕ್ಯಾನಿಕಲ್ ಹೆಲ್ಪರ್, ಕ್ಯಾಶುವಲ್ ಹೆಲ್ಪರ್). 3). ಫಿಟ್ಟರ್, 4) ಎಲೆಕ್ಟ್ರಿಷಿಯನ್ : (ಇಂಡಸ್ಟ್ರಿಯಲ್ ಎಲೆಕ್ಟ್ರಿಷಿಯನ್)
8105078113

ಸಾಲ ಬೇಕಾಗಿದೆ
1 ಲಕ್ಷ ರೂ. ಮೇಲ್ಪಟ್ಟು ಸಂಬಳ ಇರುವ ಸರ್ಕಾರಿ ನೌಕರನಿಗೆ $1\frac{1}{2}$ % (ಒಂದೂವರೆ ಪರ್ಸೆಂಟ್) ಬಡ್ಡಿ ದರದಲ್ಲಿ ರೂ. 15 ಲಕ್ಷ ಸಾಲ ಚೆಕ್ ಹಾಗೂ ಪ್ರನೋಟ್ ಭದ್ರತೆಯ ಮೇಲೆ 6 ತಿಂಗಳ ಅವಧಿಗೆ ಬೇಕಾಗಿದೆ. ಸಂಪರ್ಕಿಸಿ
9035565199

WANTED TRAINED TEACHERS
1. BA B.Sc/ M.A, M.Sc with B.Ed
2. BCA/MCA/NTT.
Free Accomodation,
SAI NALANDA CENTRAL SCHOOL
K.R.NAGAR MYSORE DISTRICT-571602.
Email: nalandakrn@gmail.com,
Web:www.sainalanda.com
8722073456 / 8722093456

WANTED
Teachers for Montessori School in Bogadi.
9741781179

ರೆವಿನ್ಯೂ ಸೈಟ್ ಮಾರಾಟಕ್ಕಿದೆ
ಅಳತೆ – 40x30
ನಂ. – 73 & 74
ದಿಕ್ಕು – ದಕ್ಷಿಣ
ಬೆಲೆ – 30 Lakhs Nego.
ಕೊಲಂಬಿಯಾ ಆಸ್ಪತ್ರೆಯಿಂದ 1 km
9113991509
7676342692

JOB OPPORTUNITY
Exclusively for Retired officials VRS/ Ex Bankers / Retired Teachers. Entrepreneurs / Busniess Professionals / Interested House wives invited for JOB (1) Age 30 to 65 years. (2) Qualification SSLC & above any Degree (3) Benefit : Fixed Salary +PF+ESI+Variabel Incentives
9449068132 / 7022034200

ಶ್ರೀ ಕಾರ್ಯಸಿದ್ಧಿ ಸ್ವರ ಭವಿಷ್ಯ
ನುಡಿದಂತೆ ನಡೆಯುವುದು
ಗುರೂಜಿ : ರಾಘವೇಂದ್ರರಾವ್
ವಿವಾಹದಲ್ಲಿ ಅಡೆತಡೆ, ಪ್ರೀತಿಯಲ್ಲಿ ನಂಬಿ ಮೋಸ, ಸತಿಪತಿ ಕಲಹ, ಇಷ್ಟಪಡುವವರು ನಿಮ್ಮಂತೆ ಆಗಲು, ಶತ್ರುಬಾಧೆ, ಲೈಂಗಿಕ ಸಮಸ್ಯೆ, ಇನ್ನು ಹಲವಾರು ಸಮಸ್ಯೆಗಳಿಗೆ ಅಷ್ಟಮಂಗಳ ಪ್ರಶ್ನೆಗಳಿಂದ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ.
9036367905

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಬಾಧೆ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮದುವೆಯಾಗುವುದಾಗಿ ನಂಬಿಸಿ ವಿದ್ಯಾರ್ಥಿನಿ ಬಾಳಲ್ಲಿ ಚೆಲ್ಲಾಟವಾಡಿದ ವಾರ್ಡನ್

ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದರೂ ಆರೋಪಿ ಬಿಂದಾಸ್ ಓಡಾಟ

- ಸಂತ್ರಸ್ತೆ ಯುವತಿಗೆ ಜೀವ ಬೆದರಿಕೆ ಹಾಕಿರುವ ಆರೋಪಿ
- ವಂಚಕನನ್ನು ನಂಬಿ ಮೋಸ ಹೋದ ವಿದ್ಯಾರ್ಥಿನಿ


ಸತೀಶ್

ಮದ್ದೂರು, ಜೂ.1(ಮೋಹನ್‌ರಾಜ್)– ಮದುವೆ ಆಗುವುದಾಗಿ ನಂಬಿಸಿ ವಿದ್ಯಾರ್ಥಿನಿಯ ಬಾಳಲ್ಲಿ ಹಾಸ್ಟೆಲ್ ವಾರ್ಡನ್ ಚೆಲ್ಲಾಟವಾಡಿರುವ ಬಗ್ಗೆ ಘಟನೆ ಮದ್ದೂರು ತಾಲೂಕಿನಿಂದ ವರದಿಯಾಗಿದೆ.

ಇಲ್ಲಿನ ಓಬಿಸಿ ಹಾಸ್ಟೆಲ್ ವಾರ್ಡನ್ ಸತೀಶ್ ಎಂಬಾತನೇ ಆರೋಪಕ್ಕೆ ಗುರಿಯಾದವನಾಗಿದ್ದಾನೆ. ಈತ ವಾರ್ಡನ್ ಆಗಿರುವ ಹಾಸ್ಟೆಲ್‌ನ ಸತೀಶ್ ವಿದ್ಯಾರ್ಥಿನಿಯನ್ನು ಮದುವೆಯಾಗುವುದಾಗಿ ನಂಬಿಸಿ, ಪದೇ ಪದೆ ದೈಹಿಕ ಸಂಪರ್ಕ ಬೆಳೆಸಿದ್ದ. ಈ ಕುರಿತು ಹುಡುಗಿಯ ತಾಯಿ ಕೇಳಿದಾಗ ಸರಿಯಾಗಿ ಉತ್ತರ ನೀಡದೆ ನುಣುಚಿಕೊಂಡಿದ್ದ. ಈ ವೇಳೆ ಗರ್ಭಿಣಿಯಾಗಿದ್ದ ವಿದ್ಯಾರ್ಥಿನಿಯನ್ನು ವಾರ್ಡನ್ ಮೂರು ಬಾರಿ ಅಬಾರ್ಷನ್ ಮಾಡಿಸಿದ್ದ ಎಂದು ಆರೋಪಿಸಲಾಗಿದೆ.

ಮದುವೆಯಾಗುವಂತೆ ಸಂತ್ರಸ್ತೆ ಒತ್ತಾಯಿಸುತ್ತಿದ್ದಂತೆ ಸತೀಶ್ ಹೊಸ ವರಸೆ ತೆಗೆದಿದ್ದು, ಸರ್ಕಾರಿ ನೌಕರಿಯನ್ನು ಮದುವೆಯಾಗುವುದಾಗಿ ಉಡಾಫೆ ಉತ್ತರ ನೀಡಿದ್ದಾನೆ ಎಂದು ಹೇಳಲಾಗಿದೆ. ಇದರಿಂದ ನೊಂದ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಮದ್ದೂರು ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ದಾಖಲು ಮಾಡಲಾಗಿದೆ.

ನನ್ನನ್ನು ಏನೂ ಮಾಡಲು ಸಾಧ್ಯವಿಲ್ಲ, ನನಗೆ ರಾಜಕಾರಣಿಗಳು ಗೊತ್ತು ನಿನ್ನನ್ನು ಜೀವ ಸಮೇತ ಬಿಡುವುದಿಲ್ಲವೆಂದು ವಾರ್ಡನ್ ಅವಾಜ್ ಹಾಕಿದ್ದಾನೆ. ಪೊಲೀಸ್ ಇಲಾಖೆ ನನ್ನನ್ನು ಟಚ್ ಕೂಡ ಮಾಡಲು ಸಾಧ್ಯವಿಲ್ಲ ಎಂದು ಹೇಳಿಕೊಂಡು ಆತ ರಾಜಾರೋಷವಾಗಿ ಓಡಾಡಿಕೊಂಡಿದ್ದಾನೆ. ಪ್ರಕರಣ ದಾಖಲಾದರು ಪೊಲೀಸರು ಕ್ರಮ ಕೈಗೊಳ್ಳದಿರುವುದಿಲ್ಲ ಎಂದು ಸಂತ್ರಸ್ತೆ ಕುಟುಂಬಸ್ಥರು ಅಳಲು ತೋಡಿಕೊಂಡಿದ್ದಾರೆ.

ಕಬ್ಬು ಅರೆಯುವಿಕೆ ಪ್ರಾರಂಭ

ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಲ್ಲಿ 11 ಲಕ್ಷ ಟನ್ ಕಬ್ಬು ಅರೆಯುವ ಸಾಧ್ಯತೆ: ಕಾರ್ಖಾನೆ ಉಪಾಧ್ಯಕ್ಷ ಮಣಿ



ಭಾರತೀನಗರ,ಜೂ.1–(ಅಣ್ಣೂರು ಸತೀಶ್)– ಇಲ್ಲಿನ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಪ್ರಸ್ತುತ ಸಾಲಿನ ಕಬ್ಬು ಅರೆಯುವ ಕಾರ್ಯಕ್ಕೆ ಕಾರ್ಖಾನೆ ಉಪಾಧ್ಯಕ್ಷ ಆರ್.ಮಣಿ ಕಾರ್ಖಾನೆ ನೌಕರರು ಮತ್ತು ರೈತರ ಸಮ್ಮುಖದಲ್ಲಿ ಚಾಲನೆ ನೀಡಿದರು.

ನಂತರ ಕಾರ್ಖಾನೆ ಉಪಾಧ್ಯಕ್ಷ ಮಣಿ ಮಾತನಾಡಿ, ಪ್ರಸ್ತುತ 2022–23ನೇ ಸಾಲಿನ ಕಬ್ಬು ಅರೆಯುವಿಕೆಗೆ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ರೈತರ ಸಹಕಾರದಿಂದ 11 ಲಕ್ಷ ಟನ್ ಕಬ್ಬು ಅರೆಯುವ ನಿರೀಕ್ಷೆ ಇದೆ. ಕಳೆದ ವರ್ಷ 9.78 ಲಕ್ಷ ಟನ್ ಕಬ್ಬು ಅರೆಯಲಾಗಿತ್ತು. ಕಳೆದ ವರ್ಷ ಟನ್ ಕಬ್ಬಿಗೆ 2,770 ರೂಗಳನ್ನು ನೀಡಲಾಗಿತ್ತು. ಪ್ರಸಕ್ತ ವರ್ಷವೂ ಸಹ ಅದೇ ದರವನ್ನು ನೀಡಲು ತೀರ್ಮಾನ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗದಿಗೊಳಿಸುವ ಎಫ್‌ಆರ್‌ಪಿ ದರವನ್ನು ನೀಡಲು ನಾವು ಬದ್ಧರಾಗಿದ್ದೇವೆ ಎಂದರು. ರೈತರಿಗೋಸ್ಕರ ಹೊಸ ತಳಿಗಳನ್ನು ಪರಿಚಯಿಸುತ್ತಿದ್ದೇವೆ. ಇದರಿಂದ ಸೂಲಂಗಿ ಬರುವಿಕೆ ಕಡಿಮೆ ಇದೆ. 11 ರಿಂದ 12 ತಿಂಗಳೊಳಗೆ ಕಬ್ಬು ಕಟಾವಿಗೆ ಬರುತ್ತದೆ. ವರ್ಷಕ್ಕೆ ಒಂದು ಬೆಳೆ ಸಿಗುತ್ತದೆ. ಶೀಘ್ರದಲ್ಲೇ ಹೊಸ ತಳಿಯನ್ನು ಕೂಡ ಕಾರ್ಖಾನೆ ವತಿಯಿಂದ ಪರಿಚಯಿಸುತ್ತಿದ್ದೇವೆ ಎಂದರು.

ಕಳೆದ ಸಾಲಿನ ಕಬ್ಬು ಸರಬರಾಜು ಮಾಡಿದ ರೈತರಿಗೆ ಯಾವುದೇ ರೀತಿಯ ತೊಂದರೆ ನೀಡದೆ ಸಕಾಲಕ್ಕೆ ಹಣ ಬಟಾವಡೆ ಮಾಡಲಾಗಿದೆ. ಹಾಗೆಯೇ ಪ್ರಸ್ತುತ ಸಾಲಿನಲ್ಲೂ ಒಂದು ತಿಂಗಳೊಳಗೆ ಹಣ ನೀಡುವುದಾಗಿ ಭರವಸೆ ನೀಡಿದರು. ಕಬ್ಬು ನುರಿಸುವ ಕಾರ್ಯಕ್ಕೆ ಚಾಲನೆ ನೀಡುವ ಮುನ್ನ ಗಣಪತಿ ಹೋಮ, ಚಾಮುಂಡೇಶ್ವರಿ ಪೂಜೆ ನಡೆಸಿ ಪೂರ್ಣಾಹುತಿ ನೀಡಿದ ನಂತರ ಕಾರ್ಖಾನೆಗೆ ಚಾಲನೆ ನೀಡಿ ನೌಕರರಿಗೆ ಹಸ್ತಲಾಘವ ಮಾಡುವುದರ ಮೂಲಕ ಶುಭಹಾರೈಸಿದರು. ತದ ನಂತರ ಪ್ರಸಾದ ವಿನಿಯೋಗ ನಡೆಯಿತು. ಈ ಸಂದರ್ಭ ಕಾರ್ಖಾನೆಗೆ ಮೊದಲು ಕಬ್ಬು ತುಂಬಿಕೊಂಡು ಬಂದಂತಹ ಎತ್ತಿನಗಾಡಿ, ಟ್ರ್ಯಾಕ್ಟರ್, ಲಾರಿಗೆ ಬಹುಮಾನ ವಿತರಿಸಲಾಯಿತು. ಇದೇ ವೇಳೆ ಕಾರ್ಖಾನೆಯ ಅಧಿಕಾರಿಗಳಾದ ಸೆಂಥಿಲ್, ರವಿ, ಮಣಿಮಾರನ್, ಮಾದೇವ, ಪ್ರಭು, ನಿತೀಶ್ ಇತರರಿದ್ದರು.

ಮಂಡ್ಯದ ವಿವಿಧೆಡೆ ಹೆಚ್.ಕೆ.ರಾಮು ಪರ ಕೆಟಿಎಸ್ ಭರ್ಜರಿ ಪ್ರಚಾರ



ಮಂಡ್ಯ,ಜೂ.1(ಮೋಹನ್‌ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ. ರಾಮು ಪರವಾಗಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಂಡ್ಯ ನಗರವ್ಯಾಪ್ತಿಯ 35 ವಾರ್ಡ್‌ಗಳಲ್ಲಿ ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಸ್.ಪಿ.ಗೌರೀಶ್ ಅವರ ನೇತೃತ್ವದಲ್ಲಿ ಪದವೀಧರರ ಮನೆಮನೆಗೆ ತೆರಳಿ ಜೆಡಿಎಸ್ ಮುಖಂಡರುಗಳ ಜೊತೆ ಚುನಾವಣಾ ಪ್ರಚಾರ ನಡೆಸಿದರು.

ನಂತರ ಮಾತನಾಡಿದ ಕೆ.ಟಿ.ಶ್ರೀಕಂಠೇಗೌಡ ಅವರು ನಗರದ ಎಲ್ಲ 35 ವಾರ್ಡ್‌ಗಳಲ್ಲಿ ಸಂಚಾರ ಮಾಡಿ ಜೆಡಿಎಸ್ ಅಭ್ಯರ್ಥಿ ರಾಮು ಪರ ಮತಯಾಚನೆ ಮಾಡುತ್ತಿದ್ದು, ಪೂರಕವಾದ ವಾತಾವರಣವಿದ್ದು, ಸಕರಾತ್ಮಕ ಅಭಿಪ್ರಾಯ ಕೇಳಿ ಬರುತ್ತಿದೆ ಎಂದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ರಾಮು ಅವರು ಪದವೀಧರರು ಹಾಗೂ ನೌಕರರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಇವರ ಶ್ರಮವಿದೆ. ಸರ್ಕಾರಿ ನೌಕರರ 5 ಮತ್ತು 6ನೇ ವೇತನ ಬರಲು ಹೋರಾಟ ಮಾಡಿದ್ದಾರೆ. ಈ ಬಾರಿ ಪದವೀಧರರ ಬೇಡಿಕೆ ಈಡೇರಿಸಲು ಹೆಚ್.ಡಿ.ಕುಮಾರಸ್ವಾಮಿ ಮತ್ತು ಜೆಡಿಎಸ್ ಸಿದ್ಧವಿದ್ದು, ಜೆಡಿಎಸ್ ಅಭ್ಯರ್ಥಿ ರಾಮು ಬೆಂಬಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ ಉದಯಶಂಕರ್, ನಗರ ಘಟಕದ ಅಧ್ಯಕ್ಷೆ ಜಯಶೀಲಮ್ಮ, ಜೆಡಿಎಸ್ ಅಲ್ಪಸಂಖ್ಯಾತ ಅಧ್ಯಕ್ಷ ಮಹಮದ್, ಶ್ರೀನಿವಾಸ್, ದಾಸೇಗೌಡ, ನಗರಸಭಾ ಮಾಜಿ ಸದಸ್ಯ ಶಂಕರೇಗೌಡ, ಸೇರಿದಂತೆ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನೆಲಮನೆ ಕೃಷಿಪತ್ತಿನ ಸಹಕಾರ ಸಂಘಕ್ಕೆ ಕೆ.ಕೃಷ್ಣ ಅವಿರೋಧ ಆಯ್ಕೆ



ಶ್ರೀರಂಗಪಟ್ಟಣ, ಜೂ.1(ವಿನಯ್ ಕಾರೇಕುರ)– ತಾಲೂಕಿನ ನೆಲಮನೆ ಗ್ರಾಮದ ಕೃಷಿಪತ್ತಿನ ಸಹಕಾರ ಸಂಘಕ್ಕೆ ಜೆಡಿಎಸ್ ಬೆಂಬಲಿತ ಕಾಂಗ್ರೆಸ್ ಅಭ್ಯರ್ಥಿ ಕೆ.ಕೃಷ್ಣ ಅವಿರೋಧ ಆಯ್ಕೆಯಾದರು.

ನಿಕಟಪೂರ್ವ ಅಧ್ಯಕ್ಷ ಮರೀಗೌಡ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಸಹಕಾರ ಸಂಘದಲ್ಲಿ ಒಟ್ಟು 12 ಮಂದಿ ನಿರ್ದೇಶಕರಲ್ಲಿ ಕೇವಲ 7 ಮಂದಿ ಮಾತ್ರ ಚುನಾವಣಾ ಸಭೆಗೆ ಹಾಜರಾಗಿದ್ದರು. ಕೆ. ಕೃಷ್ಣ ಒಬ್ಬರೇ ಅಧ್ಯಕ್ಷ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದು, ಬೇರೆ ಯಾರೂ ಅರ್ಜಿ ಸಲ್ಲಿಸದ ಹಿನ್ನೆಲೆ ಚುನಾವಣಾಧಿಕಾರಿ ಜೆ.ಸಂತೋಷ್ ಕುಮಾರ್ ಅವಿರೋಧ ಆಯ್ಕೆ ಎಂದು ಘೋಷಣೆ ಮಾಡಿದರು. ಸಂಘದ ನಿರ್ದೇಶಕರಾದ ದೇವರಾಜು, ಎನ್.ಆರ್.ಪ್ರಶಾಂತ್, ಸರೋಜಮ್ಮ, ಜಯಂತಿ ಜೆಡಿಎಸ್ ಮುಖಂಡರಾದ ದಯಾನಂದ್, ಅನೀಲ್, ಸಂತೋಷ್, ಮರೀಗೌಡ ನಾಗರಾಜು ಸೇರಿದಂತೆ ಇತರರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಜೂ.4, ಉಪ ಲೋಕಾಯುಕ್ತರಿಂದ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ, ವಿಚಾರಣೆ

ಮಂಡ್ಯ, ಜೂ.1– ಕರ್ನಾಟಕ ಲೋಕಾಯುಕ್ತ ಇಲಾಖೆಯ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್ ಪಣೀಂದ್ರರವರು ಜೂನ್ 4 ರಂದು ಬೆಳಿಗ್ಗೆ 11;30 ರಿಂದ ಮಧ್ಯಾಹ್ನ 1:30 ರವರೆಗೆ ಹಾಗೂ ಮ. 2:30 ರಿಂದ ಸಂಜೆ 3:30 ರವರೆಗೆ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಮಂಡ್ಯ ಜಿಲ್ಲೆಯ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆಯನ್ನು ನಡೆಸಲಿದ್ದಾರೆ.

ಜಿಲ್ಲೆಯಲ್ಲಿ ಸರ್ಕಾರಿ ಅಧಿಕಾರಿ, ನೌಕರರಿಂದ ಕಾನೂನು ರೀತ್ಯಾ ಆಗಬೇಕಾದ ಕೆಲಸ ವಿಳಂಬವಾಗಿದ್ದಲ್ಲಿ ಅಥವಾ ಅಧಿಕಾರಿ, ನೌಕರರು ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುವುದು ಅಥವಾ ಇನ್ನ್ಯಾವುದೇ ತರಹದ ದುರಾಡಳಿತದಲ್ಲಿ ತೊಡಗಿದ್ದರೆ, ತೊಂದರೆಗೊಳಗಾದ ಸಾರ್ವಜನಿಕರು ಗೌರವಾನ್ವಿತರ ಮುಂದೆ ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದು. ಜೂ.6 ರಂದು ಬೆ.10 ಗಂಟೆಯಿಂದ ಮಧ್ಯಾಹ್ನ 1:30 ರವರೆಗೆ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪ ಲೋಕಾಯುಕ್ತರ ಕಾರ್ಯ ವ್ಯಾಪ್ತಿಗೆ ಒಳಪಡುವ) ತನಿಖೆ/ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಿಸಿದ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸಲಿದ್ದಾರೆ.

ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

ಮಂಡ್ಯ, ಜೂ.1– ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2022–23ನೇ ಸಾಲಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳನ್ನು 6ನೇ ತರಗತಿಗೆ ದಾಖಲಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ಜೂನ್ 7 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ಹಾಗೂ ವಾರ್ಷಿಕ ರೂ.2,00,000/–ಲಕ್ಷಗಳ ಆದಾಯದ ಮಿತಿಯೊಳಗಿರುವ ಅರ್ಹ ಅಭ್ಯರ್ಥಿಗಳು ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಅರ್ಜಿ ನಮೂನೆಯನ್ನು ಪಡೆದು ಅರ್ಜಿಯನ್ನು ಭರ್ತಿ ಮಾಡಿ ಸದರಿಯವರ ಕಛೇರಿಯಲ್ಲಿಯೇ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಕಛೇರಿಯನ್ನು ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಶ್ರೀರಂಗಪಟ್ಟಣ ತಾಲೂಕಿನ ಹಲವೆಡೆ ವಿದ್ಯುತ್ ವ್ಯತ್ಯಯ

ಪಾಲಹಳ್ಳಿ, ಜೂ.1– ಉಪವಿಭಾಗ ವ್ಯಾಪ್ತಿಯ ಗರುಡನ ಉಕ್ಕಡ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.2 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೂ ಸಬ್ಬನಕುಪ್ಪೆ ಹಾಗೂ ಟಿ.ಎಂ.ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನೀರು ಸರಬರಾಜು ವ್ಯತ್ಯಯ

ಮಂಡ್ಯ, ಜೂ.1– ಮಂಡ್ಯ ನಗರದ ನೀರು ಸರಬರಾಜು ವ್ಯವಸ್ಥೆ ನಿರ್ವಹಣಾ ಅಡಿ ರಾಗಿಮುದ್ದನಹಳ್ಳಿ ಸಮೀಪವಿರುವ ಜಲಶುದ್ಧೀಕರಣಾಗಾರದ ತುರ್ತು ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುವುದರಿಂದ ಮಂಡ್ಯದಲ್ಲಿ ಜೂ.2 ಮತ್ತು 3 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಮಂಡ್ಯ ಉಪ ವಿಭಾಗ ನಿರ್ವಹಣಾ ಕನನೀಸ ಮತ್ತು ಒಚ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ ಜೂ.5ರವರೆಗೆ ಶ್ರೀರಂಗಪಟ್ಟಣದಲ್ಲಿ ನಿಷೇಧಾಜ್ಞೆ

ಶ್ರೀರಂಗಪಟ್ಟಣ, ಜೂ.1(ವಿನಯ್ ಕಾರೇಕುರ)–ಶ್ರೀರಂಗಪಟ್ಟಣದಲ್ಲಿ ಯಾವುದೇ ಮೆರವಣಿಗೆ, ರಥಯಾತ್ರೆ ಮತ್ತು ಪ್ರತಿಭಟನೆ ನಡೆಸದಂತೆ ಜೂ.3ರ ಸಂಜೆ 6 ಗಂಟೆಯಿಂದ ಜೂ.5ರ ಬೆಳಗ್ಗೆ 6 ಗಂಟೆಯವರೆಗೆ ಸೆಕ್ಷನ್ 144ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ತಾಲೂಕು ದಂಡಾಧಿಕಾರಿ ಶ್ರೀಮತಿ ಶ್ವೇತಾ ಎನ್.ರವೀಂದ್ರ ಆದೇಶ ಹೊರಡಿಸಿದ್ದಾರೆ.

ಪಟ್ಟಣದಲ್ಲಿರುವ ಕುವೆಂಪು ವೃತ್ತದಿಂದ ಪುರಸಭೆ ಬಳಿ ಇರುವ ಜಾಮಿಯಾ ಮಸೀದಿವರೆಗೆ ಮಂಡ್ಯ ಜಿಲ್ಲಾ ವಿಶ್ವ ಹಿಂದೂ ಪರಿಷತ್ ವತಿಯಿಂದ ಜೂ.4ರಂದು 'ಶ್ರೀರಂಗಪಟ್ಟಣ ಚಲೋ' ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಕಾನೂನು–ಸುವ್ಯವಸ್ಥೆ ಮತ್ತು ಶಾಂತಿ ಕಾಪಾಡುವ ದೃಷ್ಟಿಯಿಂದ ಈ ನಿಷೇಧಾಜ್ಞೆ ಹೊರಡಿಸಲಾಗಿದೆ.

ಶ್ರೀರಂಗಪಟ್ಟಣದಲ್ಲಿರುವ ಜಾಮಿಯಾ ಮಸೀದಿ ಸ್ಥಳದಲ್ಲಿ ಆಂಜನೇಯಸ್ವಾಮಿ ದೇವಸ್ಥಾನವಿತ್ತೆಂದು ಅಲ್ಲಿ ನಮ್ಮ ಭಾವನೆಗಳಿಗೆ ಧಕ್ಕೆ ತರಲಾಗುತ್ತಿದೆ ಎಂದು ಆಪಾದಿಸಿ ಮೇ 24ರಂದು ವಿಶ್ವ ಹಿಂದೂ ಪರಿಷದ್ ಕಾರ್ಯದರ್ಶಿ ಶ್ರೀರಂಗಪಟ್ಟಣ ಟೌನ್ ಠಾಣೆಗೆ ದೂರು ನೀಡಿ ಜೂ.4ರಂದು ಪಟ್ಟಣದಲ್ಲಿ ಶ್ರೀರಂಗಪಟ್ಟಣ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ತಿಳಿಸಿದ್ದರು. ಈ ಸಂಬಂಧ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ನೀಡಿರುವ ವರದಿ ಆಧಾರದ ಮೇಲೆ ಈ ನಿಷೇಧಾಜ್ಞೆ ಜಾರಿಗೊಳಿಸಿರುವುದಾಗಿ ತಹಸೀಲ್ದಾರ್ ಅವರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ನಾಳೆಯಿಂದ 5ರವರೆಗೆ ಪುನೀತ್ ಕಪ್–ಮೈಸೂರು ಪ್ರೋ ಕಬಡ್ಡಿ



ಮೈಸೂರು,ಜೂ.1(ಪಿಎಂ)–ಮೈಸೂರು ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಮತ್ತು ಮೈಸೂರು ಸ್ನೇಹಿತರ ಬಳಗದ ಆಶ್ರಯದಲ್ಲಿ ಜೂ.3ರಿಂದ 5ರವರೆಗೆ ಪುನೀತ್ ಕಪ್–ಮೈಸೂರು ಪ್ರೋ ಕಬಡ್ಡಿ ಪಂದ್ಯಾವಳಿ ಆಯೋಜಿಸ ಲಾಗಿದೆ ಎಂದು ಬಳಗದ ಕಾರ್ಯದರ್ಶಿ ಬಿ.ಎಸ್.ರಾಘವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಒಳಾಂಗಣದಲ್ಲಿ ಪಂದ್ಯಾವಳಿ ನಡೆಯಲಿದೆ. ಜೂ.3ರಂದು ಬೆಳಗ್ಗೆ 10.30ಕ್ಕೆ ಪಂದ್ಯಾವಳಿಯ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ ಮತ್ತು ಮಾಜಿ ಶಾಸಕ ವಾಸು ಪಾಲ್ಗೊಳ್ಳಲಿದ್ದಾರೆ ಎಂದರು. ಪಾಲೀಕತ್ವದ 8 ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದು, ಮೊದಲ ಬಹುಮಾನ 2 ಲಕ್ಷ ರೂ., ದ್ವಿತೀಯ ಬಹುಮಾನ 1 ಲಕ್ಷ ರೂ., ತೃತೀಯ ಮತ್ತು 4ನೇ ಬಹುಮಾನ ತಲಾ 50 ಸಾವಿರ ರೂ. ನಗದು ಒಳಗೊಂಡಿದೆ. ಪಂದ್ಯಗಳನ್ನು ವೀಕ್ಷಿಸಲು ಉಚಿತ ಪ್ರವೇಶವಿದೆ ಎಂದರು. ಬಳಗದ ಉಪಾಧ್ಯಕ್ಷ ಜಿ.ಚಂದ್ರು, ಸಂಘಟನಾ ಕಾರ್ಯದರ್ಶಿಗಳಾದ ನಂದೀಶ್, ಶಶಿಧರ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಇಂದು ಚಿತ್ರಕಲಾ ಸ್ಪರ್ಧೆ

ಮೈಸೂರು, ಜೂ.1– ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಶಾಲಾ ಮಕ್ಕಳಿಗೆ ಪರಿಸರ ಸಂರಕ್ಷಣೆ ಕುರಿತಾಗಿ "ಒಂದೇ ಒಂದು ಭೂಮಿ – ಪ್ರಕೃತಿಯ ಜೊತೆ ಸಾಮರಸ್ಯದಿಂದ ಸಮರ್ಥವಾಗಿ ಬದುಕೋಣ" "ONLY ONE EARTH - Living Sustainably in Harmony with Nature" ಎಂಬ ವಿಷಯ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಕಲಾಮಂದಿರ ಆವರಣದಲ್ಲಿ ಜೂ.2 ರಂದು ಬೆಳಗ್ಗೆ 11 ರಿಂದ 12.30 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಭಾಗವಹಿಸಬಹುದು ಎಂದು ಮೈಸೂರಿನ ಪ್ರಾದೇಶಿಕ ಕಚೇರಿ – 1 ರ ಪರಿಸರ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನಿಕೇತನ ಚಕ್ರವರ್ತಿ ನಿಧನ



ಮೈಸೂರು, ಜೂ.1– ಮೈಸೂರಿನ ಬೋಗಾದಿ ನಿವಾಸಿ ಹಾಗೂ ಶಾರದಾದೇವಿನಗರದ ಎಲ್‌ಐಸಿ ಶಾಖೆಯ ಉಪಶಾಖಾಧಿಕಾರಿ ಎಸ್.ಎನ್.ರಂಗಯ್ಯ ಅವರ ಪುತ್ರ ಅನಿಕೇತನ ಚಕ್ರವರ್ತಿ(21) ಬುಧವಾರ ನಿಧನರಾದರು.

ಬಾಲ್ಯದಿಂದಲೂ ಬುದ್ಧಿಮಾಂದ್ಯತೆಯಿಂದ ಬಳಲುತ್ತಿದ್ದ ಅನಿಕೇತನ ಚಕ್ರವರ್ತಿ, ತಾಯಿ–ತಂದೆ, ಸಹೋದರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜೂ.2) ಚಿತ್ರದುರ್ಗ ಜಿಲ್ಲೆ ಹಿರಿಯೂರು ಬಳಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಗುಂಡಾಲ್ ಜಲಾಶಯದಿಂದ ನೀರು ಹರಿಸಲು ಆಗ್ರಹಿಸಿ

ಅಚ್ಚುಕಟ್ಟುದಾರರ ಅಹೋರಾತ್ರಿ ಧರಣಿ

• ಮೂವರು ಇಂಜಿನಿಯರ್‌ಗಳಿಗೂ ದಿಗ್ಬಂಧನ • ಸಭೆಯ ಭರವಸೆ ಮೇರೆಗೆ ಬಂಧಮುಕ್ತ

ಕೊಳ್ಳೇಗಾಲ, ಜೂ.1(ನಾಗೇಂದ್ರಸ್ವಾಮಿ)– ಗುಂಡಾಲ್ ಜಲಾಶಯದಿಂದ ಬೆಳೆಗಳಿಗೆ ನೀರು ಬಿಡುವಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿ ಜಲಾಶಯದ ಅಚ್ಚುಕಟ್ಟುದಾರರು ಮೂವರು ಇಂಜಿನಿಯರ್‌ಗಳಿಗೂ ದಿಗ್ಬಂಧನ ವಿಧಿಸಿ, ತಮ್ಮ ಜೊತೆಯಲ್ಲಿಯೇ ಕೂರಿಸಿಕೊಂಡು ಆಕ್ರೋಶ ವ್ಯಕ್ತಪಡಿಸಿದ ಘಟನೆಗೆ ಬುಧವಾರದ ಅಹೋರಾತ್ರಿ ಧರಣಿ ಸಾಕ್ಷಿಯಾಯಿತು.



ನಗರದ ಕಾವೇರಿ ನೀರಾವರಿ ನಿಗಮದ ಕಚೇರಿಯ ಎದುರು ಬೆಳಗ್ಗೆ 11 ಗಂಟೆ ವೇಳೆಗೆ ಜಮಾಯಿಸಿದ ರೈತರು ಧರಣಿ ಆರಂಭಿಸಿದರು. ಆದರೆ 12 ಗಂಟೆಯಾದರೂ ಅಧಿಕಾರಿಗಳು ಇವರಿಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಕಚೇರಿ ಒಳಗಿದ್ದ ನಿಗಮದ ಹಿರಿಯ ಇಂಜಿನಿಯರ್ ವೆಂಕಟೇಶಮೂರ್ತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶಾಂತಕುಮಾರ್, ಕಿರಿಯ ಇಂಜಿನಿಯರ್ ಯದುಕೃಷ್ಣ ಅವರನ್ನು ಹೊರಕರೆದು ತಮ್ಮ ಜೊತೆಯಲ್ಲಿ ಧರಣಿಗೆ ಕೂರಿಸಿಕೊಂಡು ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ರೈತ ಹೋರಾಟಗಾರ ಅಣಗಳ್ಳಿ ಬಸವರಾಜು, ಹನೂರು ಶಾಸಕರ ಅವರ ಮಾತಿಗೆ ಕಟ್ಟು ಬಿದ್ದು ಅಧಿಕಾರಿಗಳು ಮೃದುಧೋರಣೆ ತಾಳಿದ್ದಾರೆ. ಈ ಭಾಗದಲ್ಲಿ ಪೂರ್ಣ ನೀರಾವರಿಯನ್ನು ಅರೆ ನೀರಾವರಿ ಎಂದು ಬಿಂಬಿಸಿರುವುದಲ್ಲದೆ, ಈಗ ಅರೆ ನೀರಾವರಿ ಬೆಳೆಗಳಿಗೂ ನೀರು ಬಿಡದೆ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದರಿಂದಾಗಿ ಕೋಟ್ಯಾಂತರ ರೂ. ಮೌಲ್ಯದ ಬೆಳೆ ಒಣಗುತ್ತಿವೆ ಎಂದು ಕಿಡಿಕಾರಿದರು. ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಬಂದು ನಮ್ಮ ಬೇಡಿಕೆಗೆ ಸ್ಪಂದಿಸಬೇಕು. ನ್ಯಾಯಯುತ ಹೋರಾಟಕ್ಕೆ ಬೆಂಬಲ ಸೂಚಿಸಬೇಕು. ಇಲ್ಲದಿದ್ದರೆ ನಮ್ಮನ್ನು ಬಂಧಿಸಿದರೂ ಸರಿ ಮೂವರು ಅಧಿಕಾರಿಗಳನ್ನು ಮಾತ್ರ ಧರಣಿ ಸ್ಥಳದಿಂದ ಕದಲಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಈಗಾಗಲೇ ಹಲವು ಜಿಲ್ಲಾಧಿಕಾರಿಗಳು ಬಂದು ನಮ್ಮ ಸಮಸ್ಯೆ ಆಲಿಸಿದ್ದರೂ ಪ್ರಯೋಜನವಾಗಿಲ್ಲ. ಹಾಗಾಗಿ ಅಧಿಕಾರಿಗಳ ದಿಗ್ಬಂಧನವನ್ನು ತೆರವುಗೊಳಿಸುವುದಿಲ್ಲ. ಅವರು ನಮ್ಮ ಜೊತೆಯೇ ಪ್ರತಿಭಟನೆಯಲ್ಲಿ ಕೂರುತ್ತಾರೆ. ಹಿರಿಯ ಅಧಿಕಾರಿಗಳು ಬರುವತನಕ ನಾವು ಕದಲುವುದಿಲ್ಲ ಎಂದು ಧರಣಿನಿರತರು ಪಟ್ಟುಹಿಡಿದರು.

ವಿಷಯ ತಿಳಿದು ಕಾವೇರಿ ನೀರಾವರಿ ನಿಗಮದ ಮೈಸೂರು ಮುಖ್ಯ ಇಂಜಿನಿಯರ್ ಪುಟ್ಟಮಾದಯ್ಯ ಸಂಜೆ ಸ್ಥಳಕ್ಕೆ ಆಗಮಿಸಿ ಧರಣಿನಿರತರ ಮನವೊಲಿಸಲು ಯತ್ನಿಸಿದರು. ಈ ವೇಳೆ ರೈತರು ಗುರುವಾರ 10.30ಕ್ಕೆ ಶಾಸಕರು, ಹಿರಿಯ ಅಧಿಕಾರಿಗಳ ಸಭೆ ನಡೆಸಿ ಸಮಸ್ಯೆಗೆ ಸ್ಪಂದಿಸಿದರೆ ಮಾತ್ರ ಧರಣಿ ಕೈಬಿಡುವುದಾಗಿ ಷರತ್ತು ವಿಧಿಸಿ ಅಧಿಕಾರಿಗಳನ್ನು ದಿಗ್ಬಂಧನದಿಂದ ಮುಕ್ತಗೊಳಿಸಿದರಾದರೂ ಕಚೇರಿ ಆವರಣದಲ್ಲೇ ಮಲಗಿ ಅಹೋರಾತ್ರಿ ಧರಣಿ ಮುಂದುವರೆಸಿದರು.

ಧರಣಿಯಲ್ಲಿ ಜಿಪಂನ ಮಾಜಿ ಸದಸ್ಯ ಚಾಮರಾಜು, ಅಣಗಳ್ಳಿ ದಶರಥ್, ಮಧುವನಹಳ್ಳಿ ಬಸವರಾಜು, ಎಂ.ನಟರಾಜಮಾಳಿಗೆ, ರಾಮಕೃಷ್ಣ, ಮುಕುಂದ, ಸಿದ್ದರಾಜು, ದಾಸನಪುರ ಚಿನ್ನಸ್ವಾಮಿ, ಮರಿಸಿದ್ದಯ್ಯ, ಚಿನ್ನಸ್ವಾಮಿ ಮಾಳಿಗೆ, ಆರ್.ಮಹದೇವಪ್ಪ, ಮಾಲಂಗಿ ಬಸವರಾಜು, ಗುರುಮಲ್ಲಯ್ಯ, ಜೋಗಿ ಸಿದ್ದಯ್ಯ,ಅಶೋಕ ಇನ್ನಿತರರಿದ್ದರು.

ಹಿಮವದ್ ಗೋಪಾಲಸ್ವಾಮಿಬೆಟ್ಟಕ್ಕೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಭೇಟಿ



ಗುಂಡ್ಲುಪೇಟೆ, ಜೂ.1–ತಾಲೂಕಿನ ಇತಿಹಾಸ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಹಿಮವದ್ ಗೋಪಾಲಸ್ವಾಮಿಬೆಟ್ಟಕ್ಕೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಕುಟುಂಬ ಸಮೇತ ಮಂಗಳವಾರ ಭೇಟಿ ನೀಡಿ, ಗೋಪಾಲಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಹಿಮಚ್ಛಾದಿತ ಪರ್ವತ ಕಂಡು ಪುಳಕಿತರಾದ ರಮಣ ಅವರು, ಪ್ರಕೃತಿ ಸೌಂದರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ತಮಿಳುನಾಡಿನ ಮಧುಮಲೈ ಆನೆ ಶಿಬಿರ ಹಾಗೂ ಬಂಡೀಪುರದಲ್ಲಿ ಒಂದು ಗಂಟೆಗಳ ಕಾಲ ಸಫಾರಿಗೆ ತೆರಳಿ ಕಾಡು ಹಾಗೂ ವನ್ಯಜೀವಿಗಳನ್ನು ಕಣ್ತುಂಬಿಕೊಂಡರು. ಸೋಮವಾರ ರಾತ್ರಿ ಬಂಡೀಪುರದ ಸರಾಯ್ ರೆಸಾರ್ಟ್‌ನಲ್ಲೇ ತಂಗಿದ್ದ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಇಂದು ಸಂಜೆ ಮೈಸೂರಿಗೆ ತೆರಳಿದ್ದಾರೆ. ಸೋಮ ವಾರ ಹರಳುಕೋಟೆ ದೇವಾಲಯ, ದೀನಬಂಧು ಶಾಲೆಗೆ ಭೇಟಿ ನೀಡಿದ್ದರು.

ವಿದ್ಯುತ್ ಕಂಬದಿಂದ ಆಯತಪ್ಪಿ ಬಿದ್ದು ಪವರ್‌ಮ್ಯಾನ್ ಸಾವು

ಹನೂರು, ಜೂ. 1(ಸೋಮು)–ವಿದ್ಯುತ್ ಮಾರ್ಗ ದುರಸ್ತಿ ವೇಳೆ ಸೆಸ್ಕ್ ನೌಕರ ವಿದ್ಯುತ್ ಕಂಬದಿಂದ ಆಯತಪ್ಪಿ ಬಿದ್ದು ಮೃತಪಟ್ಟಿರುವ ಘಟನೆ ಬುಧವಾರ ತಾಲೂಕಿನ ಮಾರ್ಟಳ್ಳಿ ಸಮೀಪದ ಸಂದನ ಪಾಳ್ಯದಲ್ಲಿ ನಡೆದಿದೆ. ಬಾಗಲಕೋಟೆ ಜಿಲ್ಲೆ ಹುನಗುಂದ ಪಟ್ಟಣದ ಪ್ರಶಾಂತ್ ಹಿರೇಮಠ (27)ಮೃತಪಟ್ಟ ನೌಕರ. ಇವರು ರಾಮಾಪುರ ಸೆಸ್ಕ್ ಉಪ ವಿಭಾಗ ಪವರ್‌ಮ್ಯಾನ್ ಕಾರ್ಯ ನಿರ್ವಹಿಸಿದ್ದರು. ಇಂದು ಸಂದನಪಾಳ್ಯ ಬಳಿ ವಿದ್ಯುತ್ ಮಾರ್ಗ ದುರಸ್ತಿ ಕಾರ್ಯಕ್ಕಾಗಿ ವಿದ್ಯುತ್ ಕಂಬವೇರಿದ್ದು, ಈ ವೇಳೆ ಆಯಾ ತಪ್ಪಿ ಕೆಳಗೆ ಬಿದ್ದ ಪರಿಣಾಮ ಗಂಭೀರವಾಗಿ ಗಾಯಗೊಂಡರು.



ತಕ್ಷಣ ಸಮೀಪದ ಸುಳ್ವಾಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ರಾಮಾಪುರ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಪ್ರಶಾಂತ್ ಕೊನೆಯುಸಿರೆಳೆದಿದ್ದಾರೆ. ಮೃತದೇಹವನ್ನು ಹನೂರು ತಾಲೂಕು ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗಿದೆ.

ಗ್ರಾಮಸ್ಥರ ಕಂಬನಿ: ಸ್ನೇಹಪರ ವ್ಯಕ್ತಿಯಾಗಿದ್ದ ಪ್ರಶಾಂತ್ ಹಿರೇಮಠ್ ಸಾವಿನ ಸುದ್ದಿ ತಿಳಿದು ಮಾರ್ಟಳ್ಳಿ ಗ್ರಾಮಸ್ಥರು ಕಂಬನಿ ಮಿಡಿದರು. ಸೆಸ್ಕ್ ನೌಕರರು ಮತ್ತು ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

ಭೂಮಿಕಾಗೆ 584 ಅಂಕ



ಯಳಂದೂರು, ಜೂ.1(ವಿ.ನಾಗರಾಜು)–ತಾಲೂಕಿನ ಯಳಂದೂರು ಮಹಿಳಾ ಜೆಎಸ್‌ಎಸ್ ಶಾಲೆ ವಿದ್ಯಾರ್ಥಿನಿ ಭೂಮಿಕಾ.ಎಂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 584 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಕನ್ನಡ 116, ಇಂಗ್ಲಿಷ್ 97, ಹಿಂದಿ 98, ಗಣಿತ 93, ವಿಜ್ಞಾನ 83, ಸಮಾಜದಲ್ಲಿ 97 ಅಂಕ ಪಡೆದಿದ್ದು, ಶಾಲೆಯ ಮುಖ್ಯಶಿಕ್ಷಕರು ಅಭಿನಂದಿಸಿದ್ದಾರೆ. ಭೂಮಿಕಾ.ಎಂ ವೈ.ಕೆ.ಮೋಳೆ ಗ್ರಾಮದ ಎನ್.ಮಂಜುನಾಥ ಹಾಗೂ ಆರ್.ಸವಿತಾ ದಂಪತಿ ಪುತ್ರಿ.

ಡಾ.ಬಾಬು ಚಾರಿಟಬಲ್ ಟ್ರಸ್ಟ್ ಕಾರ್ಯ ಶ್ಲಾಘನೀಯ: ಚನ್ನಬಸವ ಶ್ರೀ



ಚಾಮರಾಜನಗರ, ಜೂ.1(ಎಸ್‌ಎಸ್)–ಡಾ.ಬಾಬು ಸೋಶಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್‌ನ ಸೇವಾ ಕಾರ್ಯ ಶ್ಲಾಘನೀಯ ಎಂದು ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ವರ್ತಕರ ಭವನದಲ್ಲಿ ಡಾ.ಬಾಬು ಸೋಶಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್, ಜೆಎಸ್‌ಎಸ್ ಆಸ್ಪತ್ರೆ ಚಾಮರಾಜನಗರ ಸಹಯೋಗದಲ್ಲಿ ಕಾರ್ಮಿಕರ ದಿನಾಚರಣೆ ಅಂಗವಾಗಿ ಪೌರಕಾರ್ಮಿಕರಿಗೆ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣೆ ಹಾಗೂ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ, ಆಶೀರ್ವಚನ ನೀಡಿದರು. ನಗರವನ್ನು ಸ್ವಚ್ಛವಾಗಿಡುವಲ್ಲಿ ಪ್ರಮುಖಪಾತ್ರ ವಹಿಸಿರುವ ಹಾಗೂ ಕೊರೊನಾ ಸಂದರ್ಭದಲ್ಲಿ ತಮ್ಮ ಪ್ರಾಣದ ಹಂಗು ತೊರೆದು ವಾರಿಯರ್ಸ್ ಆಗಿ ಸಲ್ಲಿಸಿರುವ ಪೌರಕಾರ್ಮಿಕರ ಸೇವೆ ಗುರುತಿಸಿ ಅವರಿಗೆ ಆರೋಗ್ಯ ತಪಾಸಣೆ, ಸನ್ಮಾನ ಹಮ್ಮಿಕೊಂಡಿರುವುದು ಅವರ ಸಮಾಜ ಸೇವೆಗೆ ಸಾಕ್ಷಿಯಾಗಿದೆ. ಬಸವಣ್ಣನವರ ಕಾಯಕತತ್ವವನ್ನು ಎಲ್ಲರೂ ಪಾಲನೆ ಮಾಡಬೇಕು ಎಂದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಸಂವಿಧಾನದಡಿಯಲ್ಲಿ ಕೊಟ್ಟಿದ್ದಾರೆ. ಅವರನ್ನು ಆದರ್ಶವಾಗಿಟ್ಟುಕೊಂಡು ಡಾ.ಬಾಬು ಅವರು ಸಮಾಜಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸೇವೆ ಮಾಡುತ್ತಿದ್ದಾರೆ. ಅವರ ಸೇವಾ ಕಾರ್ಯ ಅನನ್ಯ ಎಂದರು.

ಕಿವಿ,ಮೂಗು, ಗಂಟಲು ತಜ್ಞ, ಟ್ರಸ್ಟ್‌ನ ಮುಖ್ಯಸ್ಥ ಡಾ.ಎ.ಆರ್.ಬಾಬು ಮಾತನಾಡಿದರು. 120ಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಿ ಔಷಧೋಪಚಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಮುಖಂಡರಾದ ನಾಗಶ್ರೀ ಪ್ರತಾಪ್, ಅಯ್ಯನಪುರ ಶಿವಕುಮಾರ್, ವೆಂಕಟರಮಣಸ್ವಾಮಿ, ನಿಜಗುಣರಾಜು, ಕೋಡಿಮೋಳೆ ರಾಜಶೇಖರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಉಪಾಧ್ಯಕ್ಷೆ ಪಿ.ಸುಧಾ, ಸದಸ್ಯರಾದ ಕುಮುದಾ ಕೇಶವಮೂರ್ತಿ, ಶಿವರಾಜ್, ಚಂದ್ರಶೇಖರ್, ಗಾಯತ್ರಿ, ಮಮತಾ, ರಾಘವೇಂದ್ರ, ವನಜಾಕ್ಷಿ, ಚಂದ್ರಶೇಖರರಾವ್, ಮಾಜಿ ಸದಸ್ಯ ಗಣೇಶ ದೀಕ್ಷಿತ್, ಬಸವಣ್ಣ, ರಾಮಸಮುದ್ರ ವೇಣುಗೋಪಾಲ್, ಬಾಲಸುಬ್ರಹ್ಮಣ್ಯ, ಜೆಎಸ್‌ಎಸ್ ಆಸ್ಪತ್ರೆ ಅಧೀಕ್ಷಕ ಗೋವಿಂದಶೆಟ್ಟಿ ಹಾಗೂ ಪೌರಕಾರ್ಮಿಕರಿದ್ದರು.

ಪುರಸಭಾ ಮಾಜಿ ಅಧ್ಯಕ್ಷ ಎಂ.ಪುಟ್ಟರಂಗನಾಯಕ ನಿಧನ

ಗುಂಡ್ಲುಪೇಟೆ, ಜೂ.1(ಸೋಮ್.ಜಿ)–ಇಲ್ಲಿನ ಪುರಸಭೆಯ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಹಿರಿಯ ಮುಖಂಡ ಎಂ.ಪುಟ್ಟರಂಗನಾಯಕ (80) ಬುಧವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರಿ, ಪುರಸಭೆ ಅಧ್ಯಕ್ಷ ಪಿ.ಗಿರೀಶ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12.30ರ ನಂತರ ಪಟ್ಟಣದಲ್ಲಿರುವ ಅವರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.



ಸಂತಾಪ: ಪುಟ್ಟರಂಗನಾಯಕ್ ಅವರ ನಿಧನಕ್ಕೆ ಶಾಸಕ ಸಿ.ಎಸ್.ನಿರಂಜನಕುಮಾರ್, ಪಿಕಾರ್ಡ್ ಮಾಜಿ ಅಧ್ಯಕ್ಷ ಎನ್.ಮಲ್ಲೇಶ್ ಹಾಗೂ ಹಲವರು ಸಂತಾಪ ಸೂಚಿಸಿದ್ದಾರೆ.

ವೆಂಕಟಲಕ್ಷ್ಮಮ್ಮ



ಚಾಮರಾಜನಗರ, ಜೂ.1–ತಾಲೂಕಿನ ಹೊಮ್ಮ ಗ್ರಾಮದ ಎಲ್‌ಐಸಿ ಪ್ರತಿನಿಧಿ ಹಾಗೂ ಕಾಂಗ್ರೆಸ್ ಮುಖಂಡ ನಾಗನಾಯಕ ಅವರ ತಾಯಿ ವೆಂಕಟಲಕ್ಷ್ಮಮ್ಮ(76) ಬುಧವಾರ ನಿಧನರಾದರು.

ಮೃತರು ನಾಗನಾಯಕ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಸ್ವಗ್ರಾಮದಲ್ಲಿರುವ ಅವರ ಜಮೀನಿನಲ್ಲಿ ನೆರವೇರಿತು.

ಪಡುಗೂರು ರಂಗಪ್ಪ



ಬೇಗೂರು,ಜೂ.1(ಕಿರಣ್)–ಮೂಲತಃ ಗುಂಡ್ಲುಪೇಟೆ ತಾಲೂಕಿನ ಪಡುಗೂರು ಗ್ರಾಮದವರಾಗಿದ್ದು, ನಂಜನಗೂಡಿನಲ್ಲಿ ವಾಸವಿದ್ದ ರಂಗಪ್ಪ(62) ಅನಾರೋಗ್ಯದಿಂದ ಮಂಗಳವಾರ ರಾತ್ರಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರಿ–ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡಿನಲ್ಲಿ ಬುಧವಾರ ನಡೆದಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಬ್ಬಿನಗದ್ದೆ: ಕಿರು ಸೇತುವೆಗಳ ಉದ್ಘಾಟನೆ

ಜೇನುಕುರುಬ ಹಾಡಿಗಳ ಅಭಿವೃದ್ಧಿಗೆ ಕೋಟಿ ರೂ. ಪ್ರಸ್ತಾವನೆ

ಕುಶಾಲನಗರ, ಜೂ.1– ಜಿಲ್ಲೆಯಲ್ಲಿ ಜೇನುಕುರುಬ ಹಾಡಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ.1 ಕೋಟಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಹೇಳಿದರು.



ಸಮೀಪದ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಬ್ಬಿನಗದ್ದೆ ಗ್ರಾಮದಲ್ಲಿ ಚಿಕ್ಲಿಹೊಳೆ ನಾಲೆಗೆ ಅಡ್ಡಲಾಗಿ 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ 6 ನೂತನ ಕಿರು ಸೇತುವೆಗಳನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಗಿರಿಜನ ಸಮುದಾಯದ ಯುವಕರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ರೂ.20 ಲಕ್ಷ ವೆಚ್ಚದಲ್ಲಿ ತಲಾ ಒಂದೊಂದು ರ್‍ಯಾಫ್ಟಿಂಗ್‌ಗಳನ್ನು ನೀಡಲಾಗುತ್ತದೆ ಎಂದರು.

ಲೋಕೋಪಯೋಗಿ ಇಲಾಖೆ ಮೂಲಕ ಸೇತುವೆ ನಿರ್ಮಾಣ ಯೋಜನೆಯಡಿ ಕಬ್ಬಿನಗದ್ದೆ ಗಿರಿಜನ ಹಾಡಿ ಬಳಿ ರೂ.10 ಲಕ್ಷ ವೆಚ್ಚದಲ್ಲಿ ಸೇತುವೆ ನಿರ್ಮಾಣ, ಕಾಳಪ್ಪ ಅವರ ಮನೆ ಬಳಿ ರೂ.5 ಲಕ್ಷ ವೆಚ್ಚದಲ್ಲಿ ಸೇತುವೆ ನಿರ್ಮಾಣ ಹಾಗೂ ಮಸಣ ಎಂಬವರ ಮನೆ ಬಳಿ ರೂ.5 ಲಕ್ಷ ವೆಚ್ಚದಲ್ಲಿ ಒಟ್ಟು 6 ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ.

ಕಳೆದ ಮೂರು ವರ್ಷಗಳ ಹಿಂದೆ ಆಗಸ್ಟ್‌ನಲ್ಲಿ ಬಿದ್ದ ಧಾರಾಕಾರ ಮಳೆ ಹಾಗೂ ಚಿಕ್ಲಿಹೊಳೆಯಿಂದ ಹರಿಸಿದ ನಾಲೆ ನೀರಿನಿಂದ ಜೇನುಕುರುಬ ಗಿರಿಜನ ಹಾಡಿಗೆ ಸಂಪರ್ಕ ಕಲ್ಪಿಸಿದ ಈ ಸೇತುವೆ ಮುರಿದು ಹೋಗಿತ್ತು. ಇದರಿಂದ ಗಿರಿಜನ ಹಾಡಿಯ ಜನರಿಗೆ ಸಂಚಾರಕ್ಕೆ ತೊಂದರೆ ಉಂಟಾಗಿತ್ತು.

ಬಸವನಹಳ್ಳಿ ಲ್ಯಾಂಪ್ಸ್ ಸೊಸೈಟಿ ಅಧ್ಯಕ್ಷ ಆರ್.ಕೆ.ಚಂದ್ರು ಹಾಗೂ ಗ್ರಾಮಸ್ಥರ ಮನವಿ ಮೇರೆಗೆ ಇದೀಗ ಚಿಕ್ಲಿಹೊಳೆ ನಾಲೆಯ ಉದ್ದಕ್ಕೂ ಆರು ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಶಾಸಕ ರಂಜನ್ ಹೇಳಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಹೆಚ್ಚು ಅನುದಾನ ನೀಡಿದೆ. ಗಿರಿಜನರ ಹೆಸರಿನಲ್ಲಿ ಯಾವುದೇ ಬೇರೆ ಜನಾಂಗದ ವ್ಯಕ್ತಿಗಳು ಸೌಲಭ್ಯ ಪಡೆಯಲು ಅವಕಾಶ ಕೊಡುವುದಿಲ್ಲ ಎಂದರು. ಗಿರಿಜನರು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದರು.

ಬಸವನಹಳ್ಳಿ ಲ್ಯಾಂಪ್ಸ್ ಸೊಸೈಟಿ ಅಧ್ಯಕ್ಷ ಆರ್.ಕೆ.ಚಂದ್ರು ಮಾತನಾಡಿ, ಗ್ರಾಮಸ್ಥರ ಮನವಿ ಮೇರೆಗೆ ಶಾಸಕರು ವಿಶೇಷ ಕಾಳಜಿ ವಹಿಸಿ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಆರು ಕಡೆಗಳಲ್ಲಿ ನೂತನ ಕಿರು ಸೇತುವೆಗಳನ್ನು ನಿರ್ಮಿಸಿದ್ದಾರೆ. ಅವರಿಗೆ ಗಿರಿಜನ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭ ಜಿಲ್ಲಾ ಐಟಿಡಿಪಿ ಅಧಿಕಾರಿ ಹೊನ್ನೇಗೌಡ, ಸೋಮವಾರಪೇಟೆ ತಾಲೂಕು ಸಮಾಜ ಇಲಾಖೆ ಸಹಾಯ ನಿರ್ದೇಶಕ ಚಂದ್ರಪ್ಪ, ಲೋಕೋಪಯೋಗಿ ಇಲಾಖೆಯ ಎಂಜಿನಿಯರ್ ಸೈಜನ್ ಪೀಟರ್, ತಾಪಂ ಮಾಜಿ ಸದಸ್ಯ ವಿಜು ಚಂಗಪ್ಪ, ಗ್ರಾಪಂ ಮಾಜಿ ಸದಸ್ಯ ಟಿ.ಕೆ.ಸುರೇಶ್, ಗುತ್ತಿಗೆದಾರ ಡಿ.ಎನ್.ತ್ರಿನೇಶ್ ಗ್ರಾಪಂ ಸದಸ್ಯ ಐಯಂಡ್ರ ಲೋಕನಾಥ್, ಕಾರ್ಯದರ್ಶಿ ಶೇಷಗಿರಿ ಹಾಗೂ ಗ್ರಾಮಸ್ಥರು ಇದ್ದರು.

ಮಡಿಕೇರಿಯಲ್ಲಿ ಯುವತಿ ಅಪಹರಣ ವದಂತಿ

ಮಡಿಕೇರಿ,ಜೂ.1– ಯುವತಿಯೊಬ್ಬಳನ್ನು ಅಪರಿಚಿತರು ಅಪಹರಣ ಮಾಡಿದ್ದಾರೆ ಎಂಬ ವದಂತಿ ಮಡಿಕೇರಿಯಲ್ಲಿ ಹರಡಿ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು. ವಿಷಯ ತಿಳಿದು ಘಟನಾ ಸ್ಥಳಕ್ಕಾಗಮಿಸಿದ ಪೊಲೀಸರು ಸುತ್ತ ಮುತ್ತಲಿನ ಸಿ.ಸಿ. ಕ್ಯಾಮರಾಗಳನ್ನು ಪರಿಶೀಲನೆ ನಡೆಸಿದ್ದು, ಸ್ಥಳದಲ್ಲಿ ಹಾಜರಿದ್ದ ಕೆಲವರನ್ನು ವಿಚಾರಣೆ ನಡೆಸಿದ ಘಟನೆಯೂ ನಡೆಯಿತು.



ಏನಿದು ಪ್ರಕರಣ: ಬುಧವಾರ ಮಧ್ಯಾಹ್ನದ ವೇಳೆ ಮಡಿಕೇರಿ ಕಡೆಯಿಂದ ಸಂಪಿಗೆ ಕಟ್ಟೆ ರಸ್ತೆ ಬಳಿ ಇರುವ ಅಂಗಡಿ ಒಂದಕ್ಕೆ ಯುವತಿಯೊಬ್ಬಳು ಅಳುತ್ತಾ ಆಗಮಿಸಿದ್ದಾಳೆ. ಮಾತ್ರವಲ್ಲದೇ ಅಂಗಡಿಯಲ್ಲಿದ್ದ ರೆಹಮಾನ್ ಎಂಬ ಯುವಕನಿಂದ 500 ರೂ. ನಗದು ಪಡೆದು, ಬಳಿಕ ತನ್ನ ಮೊಬೈಲ್‌ನಿಂದ ಗೂಗಲ್ ಪೇ ಮೂಲಕ ಅಂಗಡಿ ಮಾಲೀಕರ ಮೊಬೈಲ್‌ಗೆ 500 ರೂ.ಗಳನ್ನು ಸಂದಾಯ ಮಾಡಿದ್ದಾಳೆ. ಈ ಸಂದರ್ಭ ಮಡಿಕೇರಿ ಕಡೆಯಿಂದ ಸಂಪಿಗೆಕಟ್ಟೆಗೆ ಇನ್ನೋವಾ ಕಾರಿನಲ್ಲಿ 3 ಮಂದಿ ಯುವಕರು, ಮತ್ತೋರ್ವ ಯುವತಿ ಆಗಮಿಸಿದ್ದಾರೆ.

ಈ ವೇಳೆ ಕಾರಿನಲ್ಲಿದ್ದ ಯುವಕರು ಮತ್ತು ಓರ್ವ ಯುವತಿ ಅಂಗಡಿಯಲ್ಲಿದ್ದ ವ್ಯಕ್ತಿಯಿಂದ ಹಣ ಪಡೆದ ಮತ್ತೋರ್ವ ಯುವತಿಯನ್ನು ಕಾರಿಗೆ ಹತ್ತಿಸಿಕೊಂಡಿದ್ದಾರೆ. ಈ ವೇಳೆ ಯುವತಿ ಅಳುತ್ತಿದ್ದಳಾದರೂ ಯಾವುದೇ ರೀತಿಯಲ್ಲಿಯೂ ಪ್ರತಿರೋಧ ತೋರದೆ ಕಾರನ್ನು ಏರಿದ್ದು, ಕಾರು ಮೈಸೂರು ರಸ್ತೆ ಕಡೆಗೆ ತೆರಳಿದೆ.

ಈ ವಿಚಾರ 'ಅಪಹರಣ' ರೀತಿಯಲ್ಲಿ ಬಿಂಬಿತವಾಗಿ ಕೆಲಕಾಲ ಪಟ್ಟಣದಲ್ಲಿ ಊಹಾಪೋಹಗಳಿಗೆ ಎಡೆ ಮಾಡಿತ್ತು. ಮಾಹಿತಿ ತಿಳಿದ ಮಡಿಕೇರಿ ವೃತ್ತ ನಿರೀಕ್ಷಕ ವೆಂಕಟೇಶ್, ನಗರ ಠಾಣಾಧಿಕಾರಿ ದಿವಾಕರ್, ಕ್ರೈಂ ಬ್ರಾಂಚ್ ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಅಲ್ಲೇ ಪಕ್ಕದಲ್ಲೇ ಇರುವ ಕಾಫಿ ಶಾಪ್ ಮತ್ತು ರೆಸಾರ್ಟ್‌ಗೂ ತೆರಳಿದ ಪೊಲೀಸರು ಅಲ್ಲಿದ್ದ ಸಿ.ಸಿ. ಕ್ಯಾಮರಾಗಳನ್ನು ಪರಿಶೀಲನೆ ನಡೆಸಿದರು.

ಅಂಗಡಿಯಲ್ಲಿದ್ದ ರೆಹಮಾನ್ ಎಂಬಾತನ ವಿಚಾರಣೆ ನಡೆಸಿದ ಪೊಲೀಸರು, ಯುವತಿಯ ಉಡುಗೆ, ಹಾವಭಾವ, ಆಕೆಯನ್ನು ಕಾರಿಗೆ ಹತ್ತಿಸಿಕೊಂಡ ಬಗೆ, ಕಾರಿನಲ್ಲಿದ್ದವರ ವಿವರ ಸೇರಿದಂತೆ ಮತ್ತಿತರ ಮಾಹಿತಿಗಳನ್ನು ಸಂಗ್ರಹಿಸಿದರು.

ಇನ್ನು ಗೂಗಲ್ ಪೇ ಮೂಲಕ ತನ್ನ ಖಾತೆಗೆ 500 ರೂ.ಹಣ ಹೊಂದಿಸಿಕೊಂಡ ಅಂಗಡಿ ಮಾಲೀಕನನ್ನು ಪೊಲೀಸರು ಸಂಪರ್ಕಿಸಲು ಪ್ರಯತ್ನಿಸಿದರೂ, ಆತ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಹೀಗಾಗಿ ಗೂಗಲ್ ಪೇ ಮೂಲಕ ಹಣ ನೀಡಿದ ಯುವತಿಯ ಬಗ್ಗೆ ಯಾವುದೇ ಮಾಹಿತಿಯೂ ಲಭಿಸಲಿಲ್ಲ.

ಬಳಿಕ ಯಾವುದೇ ಶಂಕಾಸ್ಪದ ರೀತಿಯಲ್ಲಿ ಘಟನೆ ನಡೆಯದಿರುವ ಹಿನ್ನೆಲೆಯಲ್ಲಿ ಅಂಗಡಿಯಲ್ಲಿದ್ದ ರೆಹಮಾನ್ ಹಾಗೂ ಅಂಗಡಿ ಮಾಲೀಕನ ಮೊಬೈಲ್ ಸಂಖ್ಯೆಗಳು ಮತ್ತು ವಿಳಾಸಗಳನ್ನು ಪಡೆದುಕೊಂಡು ಪೊಲೀಸರು ಸ್ಥಳದಿಂದ ನಿರ್ಗಮಿಸಿದರು.

ಈ ಘಟನೆ ಕುರಿತು ಯಾವುದೇ ದೂರುಗಳು ದಾಖಲಾಗದ ಕಾರಣ, ಪೊಲೀಸರು ಕೂಡ ಯಾವುದೇ ಪ್ರಕರಣ ದಾಖಲಿಸಲಿಲ್ಲ. ಕಾರಿನಲ್ಲಿ ಬಂದವರ ನಡುವೆ ಒಳ ಜಗಳದಿಂದಾಗಿ ಈ ರೀತಿ ನಡೆದಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಅಭಿವೃದ್ಧಿ ಸಹಿಸದೆ ಬಿಜೆಪಿ ವಿರುದ್ಧ ಕಾಂಗ್ರೆಸ್‌ನಿಂದ ಸುಳ್ಳು ಆರೋಪ

ಸೋಮವಾರಪೇಟೆ, ಜೂ.1– ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೆ ಕಾಂಗ್ರೆಸ್ ಪಕ್ಷ ಸುಳ್ಳು ಆರೋಪಗಳನ್ನು ಮಾಡುತ್ತಿದೆ ಎಂದು ಬಿಜೆಪಿ ದೂರಿದೆ. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 12 ಬಾವಿಗಳ ದುರಸ್ತಿ ಕಾಮಗಾರಿಯನ್ನು ನಗರ ಕಾಂಗ್ರೆಸ್ ಅಧ್ಯಕ್ಷ ನಾಗರಾಜ್ ಸ್ನೇಹಿತರೇ ಮಾಡಿದ್ದಾರೆ. ಇದರಲ್ಲಿ ಬಿಜೆಪಿಯವರ ಪಾತ್ರವಿಲ್ಲ. ಬಾವಿಗಳ ದುರಸ್ತಿಗೆ ಒಂದು ವರ್ಷದ ಹಿಂದೆಯೇ 66 ಸಾವಿರ ಬಿಲ್ ನೀಡಲಾಗಿದೆ ಎಂದು ಬಿಜೆಪಿ ನಗರಾಧ್ಯಕ್ಷ ಎಸ್.ಆರ್.ಸೋಮೇಶ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪಟ್ಟಣ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. 30 ಲಕ್ಷ ರೂ. ವೆಚ್ಚದಲ್ಲಿ ಕುಡಿಯುವ ನೀರು ಶುದ್ಧೀಕರಣ ಘಟಕವನ್ನು ದುರಸ್ತಿಪಡಿಸಲಾಗಿದೆ. ಹೈಟೆಕ್ ಮಾರುಕಟ್ಟೆಯ ದುರಸ್ತಿ ಕಾರ್ಯವೂ ಪ್ರಗತಿಯಲ್ಲಿದೆ. ಅಭಿವೃದ್ಧಿ ಸಹಿಸದ ಕಾಂಗ್ರೆಸ್‌ನವರು ಅಗ್ಗದ ಪ್ರಚಾರಕ್ಕೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಪ.ಪಂ. ಅಧ್ಯಕ್ಷ ಪಿ.ಕೆ. ಚಂದ್ರು ದೂರಿದರು.

ಪಟ್ಟಣದ ಹೈಟೆಕ್ ಮಾರುಕಟ್ಟೆಗೆ 66 ಲಕ್ಷ ರೂ. ವ್ಯಯಿಸಿ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ ಎಂಬ ಹುರುಳಿಲ್ಲದ ಆರೋಪವನ್ನು ಕಾಂಗ್ರೆಸ್ ಮಾಡಿದ್ದು, ಕಳೆದ 12 ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಮಾರುಕಟ್ಟೆ ದುರಸ್ತಿಗೆ ಈವರೆಗೆ 7.50 ಲಕ್ಷ ರೂ. ವ್ಯಯಿಸಲಾಗಿದೆ ಎಂದರು.

ಗೋಷ್ಠಿಯಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರಾದ ಬಿ.ಆರ್.ಮಹೇಶ್, ಮೋಹಿನಿ, ನಾಮನಿರ್ದೇಶನ ಸದಸ್ಯ ಶರತ್‌ಚಂದ್ರ ಇದ್ದರು.

ಇಂದು ಅಹವಾಲು ಸ್ವೀಕಾರ

ಸೋಮವಾರಪೇಟೆ, ಜೂ.1– ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳದ ವತಿಯಿಂದ ಜೂ.2ರ ಗುರುವಾರ ಅರಿವು ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮ ಪತ್ರಿಕಾ ಭವನದ ಸಭಾಂಗಣದಲ್ಲಿ ಬೆಳಗ್ಗೆ 10–30ಕ್ಕೆ ನಡೆಯಲಿದೆ.

ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ರಾಜೇಂದ್ರ, ಇನ್ಸ್‌ಪೆಕ್ಟರ್ ಹರೀಶ್ ಪಾಲ್ಗೊಳ್ಳಲಿದ್ದಾರೆ. ಸರ್ಕಾರಿ ಅಧಿಕಾರಿಗಳಿಂದ ಲಂಚಕ್ಕೆ ಒತ್ತಾಯ, ಅನಗತ್ಯ ವಿಳಂಬ. ಸರ್ಕಾರಿ ಅಧಿಕಾರಿ ಅಕ್ರಮ ಆಸ್ತಿ ಸಂಪಾದನೆಯ ಬಗ್ಗೆ ಅರಿವು ಮೂಡಿಸುವುದರೊಂದಿಗೆ, ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮವಾರಪೇಟೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ

ಸೋಮವಾರಪೇಟೆ, ಜೂ.1– ಎಸ್ಸೆಸ್ಸೆಲ್ಸಿಯಲ್ಲಿ ತಾಲೂಕಿಗೆ ಪ್ರಥಮ ಹಾಗು ದ್ವಿತೀಯ ಸ್ಥಾನ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮತ್ತು ಶೇ.100ರಷ್ಟು ಫಲಿತಾಂಶ ಪಡೆದ ಶಾಲಾ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ವಿಶ್ವಮಾನವ ಕುವೆಂಪು ವಿದ್ಯಾಸಂಸ್ಥೆಯಲ್ಲಿ ಗೌರವಿಸಲಾಯಿತು.



ಶಾಸಕ ಅಪ್ಪಚ್ಚು ರಂಜನ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ರಾಷ್ಟ್ರೀಯ ಸಂಪತ್ತು ಭವ್ಯ ಭಾರತ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಹಿರಿದಾಗಿದ್ದು, ಅಂತಹವರಿಗೆ ವಿದ್ಯಾದಾನ ಮಾಡುವಲ್ಲಿ ಶಿಕ್ಷಕರ ಸೇವೆ ಶ್ಲಾಘನೀಯ ಎಂದು ಪ್ರಶಂಸಿಸಿದರು. ಈ ಬಾರಿ ತಾಲೂಕಿನ ಫಲಿತಾಂಶದಲ್ಲಿ ಪ್ರಗತಿ ಕಂಡಿರುವುದು ಸಂತೋಷದ ವಿಷಯ. ಅದರಲ್ಲೂ 7 ಸರ್ಕಾರಿ ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ಬಂದಿರುವುದು ಶಿಕ್ಷಣ ವ್ಯವಸ್ಥೆಯ ಬಗ್ಗೆ ಹೆಮ್ಮೆ ಎನಿಸಿದೆ. ಸರ್ಕಾರಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣ ವಿದ್ಯಾರ್ಥಿಗಳಿಗೆ ಸಿಗಬೇಕು. ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಈ ಬಗ್ಗೆ ಗಂಭೀರವಾಗಿ ಯೋಜನೆ ಮಾಡಬೇಕು. ಬದಲಾದ ಕಾಲಕ ಘಟ್ಟದಲ್ಲಿ ಶಿಕ್ಷಕರು ಕಲಿತ ನಂತರ ಬೋಧನೆ ಮಾಡಬೇಕು. ಮಕ್ಕಳು ಗೂಗಲ್ ಮೂಲಕ ಉತ್ತರ ಹುಡುಕುವ ಪ್ರಯತ್ನಕ್ಕೆ ಮುಂದಾಗುತ್ತಾರೆ. ಶಿಕ್ಷಕ ಹೇಳಿದ ಉತ್ತರ ಸರಿಯಿಲ್ಲದಿದ್ದರೆ ವಿದ್ಯಾರ್ಥಿಗಳು ಶಾಲೆಯನ್ನು ತ್ಯಜಿಸುವ ನಿರ್ಧಾರ ಮಾಡಬಹುದು. ಈ ಕಾರಣದಿಂದ ಶಿಕ್ಷಕರು ದಿನಂಪ್ರತಿ ಓದಬೇಕು ಎಂದು ಕಿವಿಮಾತು ಹೇಳಿದರು.

622 ಅಂಕ ಪಡೆದ ಶನಿವಾರಸಂತೆ ಸೇಕ್ರೆಡ್‌ಹಾರ್ಟ್ ಶಾಲೆಯ ಪೂರ್ವಿ ಜಗದೀಶ್, ಸೋಮವಾರಪೇಟೆ ಜ್ಞಾನವಿಕಾಸ ಆಂಗ್ಲ ಮಾಧ್ಯಮ ಶಾಲೆ ಪಿ.ಬಿ. ಸಿಂಚನ, 621 ಅಂಕಗಳನ್ನು ಪಡೆದ ಸೇಕ್ರೆಡ್‌ಹಾರ್ಟ್‌ನ ಸಿ.ವಿ.ಕೀರ್ತನಾ, ಫಾತಿಮಾ ಕುಶಾಲನಗರದ ಕೆ.ಗಾಯತ್ರಿ, ಕೊಡ್ಲಿಪೇಟೆ ಸದಾಶಿವಸ್ವಾಮಿ ಆಂಗ್ಲಮಾಧ್ಯಮ ಶಾಲೆಯ ಬಿ.ವಿ. ಮಾನ್ಯಶ್ರೀ ಅವರುಗಳನ್ನು ಸನ್ಮಾನಿಸಲಾಯಿತು.

ಶನಿವಾರಸಂತೆಯ ಸೇಕ್ರೆಡ್ ಹಾರ್ಟ್, ಕಾವೇರಿ ಆಂಗ್ಲ ಮಾಧ್ಯಮ, ಸುಪ್ರಜಾ ಗುರುಕುಲ, ಬಾಪೂಜಿ ಪ್ರೌಢಶಾಲೆ, ಆಲೂರು ಸಿದ್ದಾಪುರ ಜಾನಕಿ ಕಾಳಪ್ಪ ಪ್ರೌಢಶಾಲೆ, ಕುಶಾಲನಗರ ಫಾತಿಮಾ, ಯೂನಿಕ್ ಅಕಾಡೆಮಿ, ಕೊಡಗರಳ್ಳಿ ಶಾಂತಿನಿಕೇತನ, ಸೋಮವಾರಪೇಟೆ ವಿಶ್ವಮಾನವ ಕುವೆಂಪು ವಿದ್ಯಾಸಂಸ್ಥೆ, ಓಎಲ್‌ವಿ ಕಾನ್ವೆಂಟ್, ಸಾಂದೀಪನಿ, ಕೂಡಿಗೆಯ ಮೊರಾರ್ಜಿ ಶಾಲೆ, ಕ್ರೀಡಾ ಪ್ರೌಢಶಾಲೆ, ಅಂಜಲ್ ವಿದ್ಯಾನಿಕೇತನ, ಜ್ಞಾನೋದಯ ಪ್ರೌಢಶಾಲೆ, ಸೋಮವಾರಪೇಟೆ ಡಾ. ಅಂಬೇಡ್ಕರ್ ವಸತಿ ಬಾಲಿಕಾ ಪ್ರೌಢಶಾಲೆ, ಕಿರಿಕೊಡ್ಲಿ ಸದಾಶಿವ ಸ್ವಾಮೀಜಿ ಶಾಲೆ, ಗೌಡಳ್ಳಿ ಬಿ.ಜಿ.ಎಸ್.ಆಂಗ್ಲ ಮಾಧ್ಯಮ ಹಾಗು ಕೆ.ಇ.ಎಸ್.ಕಿಶೋರ ಕೇಂದ್ರ ಕೂಡುಮಂಗಳೂರು ಶಾಲೆಗಳು ಶೇ.100ರಷ್ಟು ಫಲಿತಾಂಶ ಪಡೆದಿದ್ದು, ಶಾಲೆಯ ಮುಖ್ಯಶಿಕ್ಷಕರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಂಘದ ಅಧ್ಯಕ್ಷ ಎ.ಆರ್.ಮುತ್ತಣ್ಣ, ಡಿಡಿಪಿಐಗಳಾದ ವೇದಮೂರ್ತಿ, ಮಲ್ಲೇಶಪ್ಪ, ಮಂಗಳೂರು ಶಿಕ್ಷಕ ತರಬೇತಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ರುಕ್ಸಾನಾ, ಬಿಇಒ ಕೆ.ವಿ. ಸುರೇಶ್, ಡಯಟ್ ಪ್ರಾಂಶುಪಾಲ ಮಲ್ಲೇಶಪ್ಪ, ಬಿಆರ್‌ಸಿ ಜಿ.ಎಂ. ಹೇಮಂತ್, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಡಾ.ಸದಾ ಶಿವ ಪಲ್ಲೇದ್, ಡಯಟ್ ಉಪನ್ಯಾಸಕ ಕೆ.ವಿ.ನಾರಾಯಣ, ಕುವೆಂಪು ಶಾಲೆಯ ಮುಖ್ಯಶಿಕ್ಷಕಿ ಮಿಲ್ರೆಡ್ ಗೊನ್ಸಾಲ್ವೆಸ್ ಇದ್ದರು.

ಜೂ.8ರಂದು ಅಭಿನಂದನಾ ಕಾರ್ಯಕ್ರಮ

ಮಡಿಕೇರಿ, ಜೂ.1– ಇತ್ತೀಚೆಗೆ ಭೋಪಾಲ್‌ನಲ್ಲಿ ನಡೆದ ಭಾರತೀಯ 12ನೇ ಹಾಕಿ ಹಿರಿಯರ ಮಹಿಳಾ ವಿಭಾಗದಲ್ಲಿ ನಗರದ ಭಾರತೀಯ ಕ್ರೀಡಾ ಪ್ರಾಧಿಕಾರದ(ಸಾಯ್) ಐವರು ವಿದ್ಯಾರ್ಥಿನಿಯರು ಪಾಲ್ಗೊಂಡು ಬೆಳ್ಳಿ ಪದಕ ಪಡೆದಿದ್ದಾರೆ. ಈ ವಿದ್ಯಾರ್ಥಿನಿಯರನ್ನು ಅಭಿನಂದಿಸುವ ಕಾರ್ಯಕ್ರಮವು ಜೂ.8 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಭಾರತೀಯ ಕ್ರೀಡಾ ಪ್ರಾಧಿಕಾರ ವಿದ್ಯಾರ್ಥಿ ನಿಲಯದಲ್ಲಿ ನಡೆಯಲಿದೆ.

ಸೆಸ್ಕ್ ಸಹಾಯವಾಣಿ 1912 ಕರೆ ಮಾಡಲು ಸೂಚನೆ

ಮಡಿಕೇರಿ, ಜೂ.1– ಪ್ರಸಕ್ತ ಸಾಲಿನ ಮಳೆಗಾಲದ ಅವಧಿಯಲ್ಲಿ ಅವಘಡ ಮತ್ತು ವಿದ್ಯುತ್ ಅಡಚಣೆಯಾದ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಅರಿತು, ಸಾರ್ವಜನಿಕರು ಸಹಕರಿಸುವಂತೆ ಹಾಗೂ ತುರ್ತು ಸಂದರ್ಭಗಳಲ್ಲಿ ಇಲಾಖೆಯ (24X7) ಕೇಂದ್ರೀಯ ದೂರು ಕೇಂದ್ರ '1912' ದೂರವಾಣಿಗೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ.



ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಎಸ್.ಆರ್.ನಂಜಪ್ಪ ಹುಟ್ಟುಹಬ್ಬಕ್ಕೆ ಶಾಸಕ ಎಲ್.ನಾಗೇಂದ್ರ ಶುಭ ಕೋರಿದರು. ಚಾಮರಾಜ ಕ್ಷೇತ್ರದ ಮುಖಂಡ ಚೌಡಪ್ಪ, ಯುವ ಮೋರ್ಚಾ ಅಧ್ಯಕ್ಷ ಸಚಿನ್‌ಗೌಡ, ಕಾರ್ಪೊರೇಟರ್ ಚಿಕ್ಕವೆಂಕಟು, ಯತೀಶ್, ಕುಶಾಲ್, ಚಿರಂತ್, ಮನೀಷ್ ಇನ್ನಿತರರು ಉಪಸ್ಥಿತರಿದ್ದರು.



ಕುಂಬಾರಕೊಪ್ಪಲು ಫ್ರೆಂಡ್ಸ್ ಕ್ರೀಡಾ ಸಂಸ್ಥೆ ವತಿಯಿಂದ ಡಾ. ಪುನೀತ್ ರಾಜ್‌ಕುಮಾರ್ ಹಾಗೂ ಪೈ.ಅಂಬ್ಯಾಕುಮಾರ್ ಸ್ಮರಣಾರ್ಥ ನಡೆದ ರಾಜ್ಯಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಕಾರ್ಪೊರೇಟರ್ ಎಸ್‌ಬಿಎಂ ಮಂಜು ಕ್ರಿಕೆಟ್ ಆಡುವ ಮೂಲಕ ಉದ್ಘಾಟಿಸಿದರು. ಶಿವು, ಮಹೇಶ್, ಹೇಮಂತ್ ಇನ್ನಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಪಠ್ಯ ಪರಿಷ್ಕರಣೆ ಮಾರ್ಪಾಡಿಗೆ ಚಿಂತನೆ

ಜನ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ಇಂತಹ ಕನ್ನಡ ಬಾವುಟ ಬೇಕು ಎಂಬ ವಿಚಾರ ಚರ್ಚೆ ಸಂದರ್ಭದಲ್ಲಿ ಅವರು ಹಗ್ಗದ ಮೇಲೆ ಇರುವ ಒಳಉಡುಪುಗಳನ್ನು ತೋರಿಸಿ 'ಇಲ್ಲಿಯೂ ಸಾಕಷ್ಟು ಬಾವುಟ ಹಾರಾಡುತ್ತಿವೆ' ಎಂದು ಹೇಳಿ ನಾಡ ಬಾವುಟಕ್ಕೆ ಅಪಮಾನ ಮಾಡಿದ ದುರ್ಬುದ್ಧಿ ಹಾಗೂ ಕೊಳಕು ಮನಸ್ಸು ಎಂಬ ಮಾತು ಕೇಳಿ ಬಂದಿದೆ.

ಕುವೆಂಪು ಅವರು ಕರ್ನಾಟಕ ಏಕೀಕರಣಕ್ಕೂ ಮುನ್ನವೇ ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಅಂದರೆ 1924ರಲ್ಲಿ 'ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂದು ಬರೆದು, ಆಗಲೇ ಭಾರತ ರಾಷ್ಟ್ರಕ್ಕೆ ಹಾಗೂ ಕರ್ನಾಟಕ ರಾಜ್ಯಕ್ಕೆ ಇದ್ದ ಬಾಂಧವ್ಯವನ್ನು ವರ್ಣಿಸಿದ್ದರು. ಅದರ ಬಗ್ಗೆಯೂ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಈ ಅವಹೇಳನಕಾರಿ ಹೇಳಿಕೆ ನನ್ನದಲ್ಲ, ನನಗೆ ವಾಟ್ಸಪ್‌ನಲ್ಲಿ ಫಾರ್ವರ್ಡ್ ಬಂದಿತ್ತು ಎಂದು ಸಮರ್ಥನೆ ನೀಡಿದ್ದಾರೆ. ವಾಟ್ಸಪ್‌ನಲ್ಲಿ ಬಂದಿದ್ದನ್ನು ಫೋರ್ವರ್ಡ್ ಮಾಡಿದರೂ ಆ ವ್ಯಕ್ತಿಯ ವ್ಯಕ್ತಿತ್ವ ಎಂತಹದು ಎಂದು ಟೀಕಾಪ್ರಹಾರ ನಡೆದಿದೆ. ಬಸವಣ್ಣನವರ ಬಗ್ಗೆ ಮಾತನಾಡಿರುವ ಹಿನ್ನೆಲೆಯಲ್ಲಿ ಆ ಸಮುದಾಯದ ಸ್ವಾಮೀಜಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕುವೆಂಪು ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನಿರ್ಮಲಾನಂದನಾಥ ಶ್ರೀಗಳು ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದ್ದಾರೆ. ಸಮಿತಿಯ ಅಧ್ಯಕ್ಷರ ಪರಿಸ್ಥಿತಿ ಹೀಗಾದರೆ ಸಮಿತಿ ಕತೆ ಏನು ಎಂದು ಪ್ರಶ್ನಿಸಿದ್ದಾರೆ.

ಈ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯಲ್ಲಿ 9 ಸದಸ್ಯರಿದ್ದು, ಅದರಲ್ಲಿ 7 ಮಂದಿ ಒಂದೇ ಸಮುದಾಯಕ್ಕೆ ಸೇರಿದವರು. ರಾಜಾರಾಮ್ ಹೆಗಡೆ, ಸತ್ಯಪ್ರಕಾಶ್–ವಿದ್ಯಾವರ್ಧಕ ಸಂಘ, ರಂಗನಾಥ್–ರಾಷ್ಟ್ರೋತ್ಥಾನ, ಬಿ.ಕೆ.ವಾಸಂತಿ–ವಿದ್ಯಾಭವನ, ಅನಂತ ಕೃಷ್ಣ ಭಟ್–ವಿಶ್ವಹಿಂದೂ ಪರಿಷತ್ ಮುಖಂಡರು, ವಿಠಲ ಪೊತೆದಾರ್–ವಿಮಿತಿಕ್ ಸೊಸೈಟಿ ಸದಸ್ಯರು. ಇವರೆಲ್ಲರೂ ಒಂದೇ ಕೋಮಿಗೆ ಸೇರಿದವರಾಗಿದ್ದಾರೆ. ಈ ಸಮಿತಿಯಲ್ಲಿ ಮಹಿಳೆಯರಿಗೆ, ಬೇರೆ ವರ್ಗದವರಿಗೆ ಯಾವುದೇ ಸ್ಥಾನ ನೀಡಿಲ್ಲ.

ನಾಮಪತ್ರಗಳು ಕ್ರಮಬದ್ಧ

ಮನ್ಸೂರ್‌ಖಾನ್ ಅವರನ್ನು ಕಡೇಗಳಿಗೆಯಲ್ಲಿ ಕಣಕ್ಕಿಳಿಸಿದ್ದರು. ಮನ್ಸೂರ್ ಕಣಕ್ಕಿಳಿಯುತ್ತಿದ್ದಂತೆ ಬಿಜೆಪಿ 4ನೇ ಸ್ಥಾನವನ್ನು ಸುಲಭವಾಗಿ ಗಳಿಸಬಹುದೆಂದು ಉದ್ಯಮಿ ಲೆಹರ್‌ಸಿಂಗ್ ಅವರನ್ನು ಕಣಕ್ಕಿಳಿಸಿತ್ತು. ಈ ಬೆಳವಣಿಗೆಯ ನಂತರ ಗೌಡರು–ಸೋನಿಯಾ ಅವರನ್ನು ಸಂಪರ್ಕಿಸಿ, ಬಿಜೆಪಿಗೆ ಅನುಕೂಲ ಮಾಡಿಕೊಡಲು ನೀವು ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದ್ದರು. ಇದಾದ ನಂತರ ರಾಜ್ಯ ಉಸ್ತುವಾರಿ ನೋಡಿಕೊಳ್ಳುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ, ಪ್ರದೇಶ ಕಾಂಗ್ರೆಸ್ ನಾಯಕರನ್ನು ಸಂಪರ್ಕಿಸಿ, ಸಮಾಲೋಚನೆ ನಡೆಸಿದರು. ರಾಜ್ಯಸಭೆಗೆ ಆಯ್ಕೆಗೊಳ್ಳಲು 46 ಮತಗಳ ಅಗತ್ಯವಿದೆ. ಕಾಂಗ್ರೆಸ್ ಮೊದಲ ಪ್ರಾಶಸ್ತ್ಯ 48 ಮತಗಳ ನೀಡಿದ ನಂತರ ಕೇವಲ 22 ಮತಗಳು ಉಳಿಯುತ್ತವೆ. ಇದರಿಂದ ಎರಡನೇ ಅಭ್ಯರ್ಥಿ ಗೆಲ್ಲಲು ಸಾಧ್ಯವಿಲ್ಲ. ಬಿಜೆಪಿಗೆ ಅವಕಾಶ ಮಾಡಿಕೊಡುವ ಬದಲು ಜೆಡಿಎಸ್ ಅಭ್ಯರ್ಥಿಗೆ ಬೆಂಬಲಿಸಿದರೆ, ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಅನುಕೂಲವಾಗಬಹುದೆಂಬ ಲೆಕ್ಕಾಚಾರದಿಂದ ಕಾಂಗ್ರೆಸ್ ವರಿಷ್ಠರು ಇಂತಹ ತೀರ್ಮಾನ ಕೈಗೊಳ್ಳುತ್ತಿದ್ದಾರೆ ಎಂದು ಹೇಳಲಾಗಿದೆ. ಬಿಜೆಪಿಯಿಂದ ಕಣಕ್ಕಿಳಿದಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಚಿತ್ರನಟ ಜಗ್ಗೇಶ್ ಹಾಗೂ ಲೆಹರ್‌ಸಿಂಗ್, ಕಾಂಗ್ರೆಸ್‌ನ ಜೈರಾಂ ರಮೇಶ್, ಮನ್ಸೂರ್ ಖಾನ್ ಹಾಗೂ ಜೆಡಿಎಸ್‌ನ ಕುಪೇಂದ್ರರೆಡ್ಡಿ ಅವರ ನಾಮಪತ್ರಗಳು ಕ್ರಮಬದ್ಧವಾಗಿರುವುದಲ್ಲದೇ, ಅಂಗೀಕೃತವಾಗಿವೆ. ಜೂನ್ 10 ರಂದು ನಡೆಯಲಿರುವ ಚುನಾವಣೆಗೆ ನಿನ್ನೆಯಷ್ಟೇ ನಾಮಪತ್ರ ಸಲ್ಲಿಕೆ ಕಾರ್ಯ ಮುಕ್ತಾಯವಾಗಿದ್ದು, ಪರಿಶೀಲನೆ ನಡೆದು, ಜೂನ್ 3ರಂದು ನಾಮಪತ್ರ ಹಿಂತೆಗೆಯಲು ಕೊನೆಯ ದಿನವಾಗಿದೆ.

ಕಾಂಗ್ರೆಸ್‌ಗೆ ಗುಡ್ ಬೈ

ಎಲ್ಲಾ ಸಮಯದಲ್ಲೂ ನಾನು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದೇನೆ. ಯಾವುದೇ ಪೂರ್ವ ತಯಾರಿ ಇಲ್ಲದೇ ಯಾವುದೇ ಚರ್ಚೆಯಲ್ಲೂ ಎಂದಿಗೂ ನಾನು ಭಾಗವಹಿಸಿಲ್ಲ. 2014 ಮತ್ತು 2019ರ ಸೋಲುಗಳ ನಂತರ ಪಕ್ಷಕ್ಕೆ ಅತ್ಯಂತ ಕೆಟ್ಟ ಸಮಯವಿದ್ದಾಗಲೂ ನಾನು ಎಂದಿಗೂ ಉತ್ಸಾಹದ ಕೊರತೆಯನ್ನು ಅನುಭವಿಸಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಏನೋ ಕೊರತೆಯನ್ನು ಎದುರಿಸುತ್ತಿದ್ದೇನೆ. ಈ ಪರಿಸ್ಥಿತಿಯಲ್ಲಿ ನಾನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ 1997ರಿಂದ ಅಖಿಲ ಭಾರತ ಕಾಂಗ್ರೆಸ್ ಜೊತೆಗೆ ಹೊಂದಿದ್ದ ನನ್ನ ನಂಟನ್ನು ಬಿಡಿಸಿಕೊಳ್ಳಲು ನಿರ್ಧರಿಸಿದ್ದೇನೆ ಎಂದು ಬ್ರಿಜೇಶ್ ಕಾಳಪ್ಪ ತಮ್ಮ ರಾಜೀನಾಮೆ ಪತ್ರದಲ್ಲಿ ವಿವರಿಸಿದ್ದಾರೆ.

ಪಕ್ಷ ಬಿಡುವ ಬಗ್ಗೆ ಸ್ಪಷ್ಟವಾದ ಕಾರಣಗಳನ್ನು ಅವರು ತಿಳಿಸಿಲ್ಲವಾದರೂ, ರಾಜ್ಯಸಭಾ ಸ್ಥಾನಕ್ಕೆ ಆಕಾಂಕ್ಷಿಯಾಗಿದ್ದ ಬ್ರಿಜೇಶ್ ಕಾಳಪ್ಪ ಅವರನ್ನು ಪರಿಗಣಿಸದೇ ನಾಲ್ಕು ಬಾರಿ ರಾಜ್ಯಸಭೆ ಪ್ರವೇಶ ಪಡೆದಿದ್ದ ಜೈರಾಂ ರಮೇಶ್ ಅವರಿಗೆ ಮಣೆ ಹಾಕಿದ್ದರಿಂದ ಬೇಸರಗೊಂಡು ಅವರು ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಹೇಳಲಾಗಿದೆ. ರಾಷ್ಟ್ರಮಟ್ಟದಲ್ಲಿ ಕಳೆದ 5 ತಿಂಗಳಲ್ಲಿ ಪ್ರಭಾವಿ ನಾಯಕರಾದ ಹಾರ್ದಿಕ್ ಪಟೇಲ್, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಕಪಿಲ್ ಸಿಬಲ್, ಸುನೀಲ್ ಜಾಖರ್, ರತ್ನಜಿತ್ ಪ್ರತಾಪ್ ನರೈನ್ ಸಿಂಗ್, ಕ್ಯಾಪ್ಟನ್ ಅಮರೀಂದರ್ ಸಿಂಗ್, ರಾಜ್ಯದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯರಾದ ಮುಖ್ಯಮಂತ್ರಿ ಚಂದ್ರು ಕಾಂಗ್ರೆಸ್ ತೊರೆದಿದ್ದಾರೆ. ಇದೇ ಸಾಲಿನಲ್ಲಿ ಬ್ರಿಜೇಶ್ ಕಾಳಪ್ಪ ಪಕ್ಷ ತೊರೆದಿರುವುದು ಕಾಂಗ್ರೆಸ್‌ಗೆ ಹಿನ್ನಡೆ ಎಂದು ಹೇಳಲಾಗುತ್ತಿದೆ.

ರಾಹುಲ್‌ಗೆ ಇಡಿ ಸಮನ್ಸ್

ಮನಿ ಲಾಂಡರಿಂಗ್ ಅಥವಾ ಯಾವುದೇ ಹಣ ವಿನಿಮಯದ ಬಗ್ಗೆ ಯಾವುದೇ ಪುರಾವೆಗಳಿಲ್ಲ ಎಂದು ಸಿಂಘ್ವಿ ಹೇಳಿದ್ದಾರೆ. ಇನ್ನು ಇದೇ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೆ ವಾಲಾ, ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಆರಂಭವಾದದ್ದು 1942ರಲ್ಲಿ. ಅಂದು ಬ್ರಿಟಿಷರು ಪತ್ರಿಕೆಯನ್ನು ಹತ್ತಿಕ್ಕಲು ಪ್ರಯತ್ನ ಮಾಡಿದರು. ಇಂದು ಮೋದಿ ಸರ್ಕಾರವೂ ಅದನ್ನೇ ಮಾಡುತ್ತಿದೆ ಮತ್ತು ಇದಕ್ಕೆ ಜಾರಿ ನಿರ್ದೇಶನಾಲಯವನ್ನು ಬಳಸಲಾಗುತ್ತಿದೆ. ಇಡಿ ನಮ್ಮ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಗೆ ನೋಟಿಸ್ ನೀಡಿದೆ ಎಂದು ಕಿಡಿಕಾರಿದ್ದಾರೆ.

ದೆಹಲಿಗೆ ಅಕ್ರಮವಾಗಿ ವರ್ಗಾವಣೆ

ಸೇರಿ ಕಳಂಕಿತ ಹಣವನ್ನು ವರ್ಗಾವಣೆ ಮಾಡಲಾಗಿದೆ ಎಂದು ಉಲ್ಲೇಖಿಸಿದೆ.

ದಾಳಿಯ ವೇಳೆ ಆರೋಪಿಗಳ ಮನೆಯಲ್ಲಿ 8.59 ಕೋಟಿ ಹಣ ಸಿಕ್ಕಿದ್ದು, ಇದಕ್ಕೆ ಯಾವುದೇ ಲೆಕ್ಕಪತ್ರ ಮೂಲಗಳಿಲ್ಲ, ಇದು ಸಣ್ಣ ಪ್ರಮಾಣದ ಹಣವಷ್ಟೇ, ಇನ್ನು ದೊಡ್ಡ ಪ್ರಮಾಣದ ಹಣ ಲಭ್ಯವಾಗಿಲ್ಲ, ಇತರ ಆರೋಪಿಗಳ ಮನೆಯಲ್ಲೂ ಲೆಕ್ಕಕ್ಕೆ ಸಿಗದ ಹಣ ಲಭ್ಯವಾಗಿದೆ. ಆರೋಪಿಗಳು ವ್ಯವಸ್ಥಿತ ರೂಪದಲ್ಲಿ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆ ಎಂದು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಕೋರ್ಟ್ ಸಮನ್ಸ್ ಜಾರಿ ಮಾಡಿದ್ದು, ಜುಲೈ 1ರಂದು ಡಿ.ಕೆ.ಶಿವಕುಮಾರ್, ಸಚಿನ್ ನಾರಾಯಣ್, ಸುನೀಲ್ ಕುಮಾರ್ ಶರ್ಮಾ, ರಾಜೇಂದ್ರ ಮತ್ತು ಆಂಜನೇಯಗೆ ವಿಚಾರಣೆ ಹಾಜರಾಗಲು ವಿಶೇಷ ನ್ಯಾಯಾಲಯ ಸೂಚಿಸಿದೆ.

ಸಮಿತಿ ರಚನೆಗೆ ನಿರ್ಧಾರ

ಎಸ್.ಟಿ.ಸೋಮಶೇಖರ್ ಅವರು ಅರಮನೆ ಆವರಣದಲ್ಲಿ ಯಾರಿಗೆ ಯೋಗ ಮಾಡಲು ಅವಕಾಶ ನೀಡಬೇಕು ಎನ್ನುವುದನ್ನು ತಿಳಿಸಲಿದ್ದಾರೆ. ಆ ನಂತರವಷ್ಟೇ ಯಾರಿಗೆ ಅರಮನೆ ಆವರಣದಲ್ಲಿ ಯೋಗ ಮಾಡಬಹುದು ಎನ್ನುವುದು ಖಚಿತವಾಗಲಿದೆ. ಸಭೆಯಲ್ಲಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಎಸ್ಪಿ ಆರ್.ಚೇತನ್, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಎಡಿಸಿ ಡಾ. ಮಂಜುನಾಥಸ್ವಾಮಿ, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಬಿ.ಎಸ್. ಸೀತಾಲಕ್ಷ್ಮೀ, ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್, ಡಿಸಿಎಫ್‌ಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ, ಡಿಡಿಪಿಐ ರಾಮಾರಾಜೇಅರಸ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಯೋಗ ಸಂಸ್ಥೆಗಳ ಶ್ರೀಹರಿ, ಶಿವಪ್ರಕಾಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿದಾನ ಪರಿಷತ್‌ಗೆ ಚುನಾವಣೆ

ಮೈ.ವಿ.ರವಿಶಂಕರ್ ಗೆಲುವಿಗೆ ಪೂರಕ ವಾತಾವರಣ; ಗೆಲುವು ಖಚಿತ

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ವಿಶ್ವಾಸ

ಮೈಸೂರು, ಜೂ.1(ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಪೂರಕ ವಾತಾವರಣವಿದ್ದು, ಕ್ಷೇತ್ರದ ಎಲ್ಲೆಡೆ ಬಿಜೆಪಿ ಪರ ಬೆಂಬಲ ವ್ಯಕ್ತವಾಗಿದೆ. ಹೀಗಾಗಿ ಅವರ ಗೆಲುವು ಖಚಿತ ಎಂದು ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಅವರು ವಿಶ್ವಾಶ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರವಿಶಂಕರ್ ಅವರು ಬಿಜೆಪಿಯಲ್ಲಿ ಈ ಭಾಗದ 3–4 ಜಿಲ್ಲೆಗಳ ಜವಾಬ್ದಾರಿಗಳನ್ನು ಉತ್ತಮವಾಗಿ ನಿಭಾಯಿಸಿ ಯಶಸ್ವಿಯಾಗಿರುವವರು. ಅವರ ಕೆಲಸಗಳೇ ಅವರನ್ನು ಗುರುತಿಸುವಂತೆ ಮಾಡಿದೆ. ಕಳೆದ ಬಾರಿ ಕಾರ್ಯಾಚರಣೆ ಕೊರತೆಯಿಂದ ಕೇವಲ 189 ಮತಗಳ ಅಂತರದಿಂದ ಸೋಲುಂಟಾಗಿತ್ತು. ಈ ಬಾರಿ ಅವರಿಗೆ ಪ್ರತಿಸ್ಪರ್ಧಿಗಳೇ ಇಲ್ಲ. ಅವರಿಗೆ ಶೇ.60ರಿಂದ 64ರಷ್ಟು ಮತಗಳು ಲಭಿಸುವ ವಿಶ್ವಾಸವಿದೆ ಎಂದರು.

ಸಾಹಿತಿಗಳು ತಮ್ಮ ಸಾಹಿತ್ಯ ಹಿಂಪಡೆಯಲು ಸರ್ಕಾರಕ್ಕೆ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಇದು ಸರಿಯಾದ ನಿರ್ಧಾರವಲ್ಲ. ಪಠ್ಯ ಪುಸ್ತಕದಲ್ಲಿ ತಪ್ಪುಗಳಿದ್ದರೆ ಅದನ್ನು ತಿಳಿಸಿದರೆ ಸರಿಪಡಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ. ಅಂದ ಮೇಲೆ ಇಂತಹ ವಿವಾದ ಅನಗತ್ಯ ಎಂದು ಸಾಹಿತಿಗಳ ವಿರುದ್ಧ ಬೇಸರ ವ್ಯಕ್ತಪಡಿಸಿದರು.

ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ನಮಗೆ, ನಮ್ಮ ಸರ್ಕಾರಕ್ಕೆ ಬಹಳಷ್ಟು ಗೌರವವಿದೆ. ಅವರಿಗೆ ಯಾವುದೇ ರೀತಿಯ ಅವಮಾನ ಮಾಡಿಲ್ಲ. ಅವರ ಎರಡು ಗೀತೆಗಳನ್ನು ನಾಡಗೀತೆಗಳನ್ನಾಗಿ ಮಾಡಿದ್ದೇ ನಮ್ಮ ಬಿಜೆಪಿ ಸರ್ಕಾರ. ವಿರೋಧಪಕ್ಷದ ನಾಯಕರು ರಾಜ್ಯದ ಬೇರೆ ಬೇರೆ ರೀತಿಯ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸದೆ ಹಳೆಯ ವಿಚಾರಗಳನ್ನು ಹಿಡಿದು ವಿವಾದ ಸೃಷ್ಟಿಸಿದ್ದಾರೆ. ಸಿದ್ದರಾಮಯ್ಯ ಅವರಂತು ಕನಸಿನಲ್ಲೂ ಆರ್‌ಎಸ್‌ಎಸ್ ಬಗ್ಗೆ ಕನವರಿಸುತ್ತಿದ್ದಾರೆ. ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸೋಲುವ ಭೀತಿಯಿಂದ ಸಿದ್ದರಾಮಯ್ಯ ಇಂತಹ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಸಂಸದ ಪ್ರತಾಪ್‌ಸಿಂಹ, ಶಾಸಕ ಎಲ್.ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಇನ್ನಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪಠ್ಯ ವಾಪಸ್ ಹೆಸರಿನಲ್ಲಿ ಪ್ರಚಾರ ಪಡೆಯುತ್ತಿರುವವರು ವಿಚಾರಹೀನರು

ಸಾಹಿತಿಗಳ ನಡೆಗೆ ಸಂಸದ ಪ್ರತಾಪ್‌ಸಿಂಹ ಕಿಡಿ

ಮೈಸೂರು, ಜೂ.1 (ಆರ್‌ಕೆಬಿ)– ಪಠ್ಯ ವಾಪಸ್ ಹೆಸರಿನಲ್ಲಿ ಪ್ರಚಾರ ಪಡೆಯುತ್ತಿರುವವರು ವಿಚಾರಹೀನರು ಎಂದ ಸಂಸದ ಪ್ರತಾಪ್‌ಸಿಂಹ ಅವರು, ಪಠ್ಯ ಪುಸ್ತಕ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಸಾಹಿತಿಗಳು ತಮ್ಮ ಪಠ್ಯ ಕೈಬಿಡುವಂತೆ ಸರ್ಕಾರಕ್ಕೆ ಪತ್ರ ಬರೆದಿರುವ ಕುರಿತು ಸಾಹಿತಿಗಳ ವಿರುದ್ಧ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತರ್ಕದಲ್ಲಿ ಗೆಲ್ಲಲಾಗದ ಅವರು ಹೊಸ ತಕರಾರು ಎತ್ತಿದ್ದಾರೆ. ಬರಗೂರು ರಾಮಚಂದ್ರಪ್ಪ ಅವರು ಕುವೆಂಪು ಅವರ 8 ಪಠ್ಯ ಇದ್ದುದ್ದನ್ನು 7 ಮಾಡಿದರು. ನಾವು ಈಗ ಕುವೆಂಪು ಅವರ 10 ಪಠ್ಯ ಸೇರಿಸಿದ್ದೇವೆ. ಸಿದ್ದರಾಮಯ್ಯ ಆಡಳಿತ ವ್ಯಂಗ್ಯ ಮಾಡಲು 2017ರಲ್ಲಿ ಯಾರೋ ಬರೆದ ಗೀತೆಯನ್ನು ರೋಹಿತ್ ಚಕ್ರತೀರ್ಥ ವಾಟ್ಸಾಪ್ ಫಾರ್ವರ್ಡ್ ಮಾಡಿದ್ದಾರೆ. ಆ ಕೇಸ್ ಈಗಾಗಲೇ ಬಿ ರೀಪೋರ್ಟ್ ಆಗಿದೆ ಎಂದರು.

ಸಾಹಿತಿ ಹಂಪನಾ ಅಕಾಡೆಮಿಗೆ ರಾಜೀನಾಮೆ ನೀಡಿದ್ದಾರೆ. ಅವರ ಪತ್ನಿ ಕಮಲ ಹಂಪನಾ ಇನ್ನೂ ಹುದ್ದೆಯಲ್ಲೇ ಇದ್ದಾರೆ. ಬರಗೂರು ರಾಮಚಂದ್ರಪ್ಪ ಹಾದಿಯಾಗಿ ಯಾರು ಕಳೆದ 10 ವರ್ಷಗಳಲ್ಲಿ ನೆನಪಿಡೋ ಕೃತಿ ರಚಿಸಿದ್ದಾರೆ? ಎಂದು ಪ್ರಶ್ನಿಸಿದರು. ಕೆಲವರ ಪಠ್ಯವನ್ನು 10 – 12 ವರ್ಷದಿಂದ ಮಕ್ಕಳು ಓದಿದ್ದಾರೆ. ಈಗ ಕೆಲವರ ಪಠ್ಯ ಕೈ ಬಿಟ್ಟಿದ್ದೇವೆ. ತಮ್ಮ ಪಠ್ಯ ಕೈ ಬಿಟ್ಟಿದ್ದರೂ ಕೂಡ ಕೆಲ ಸಾಹಿತಿಗಳು ಪಠ್ಯ ವಾಪಸ್ ಪಡೆದಿದ್ದೇವೆ ಎಂದು ಪತ್ರ ಬರೆದಿರುವುದಾಗಿ ಪ್ರಚಾರ ಪಡೆಯುತ್ತಿದ್ದಾರೆ ಎಂದು ಸಾಹಿತಿಗಳ ನಡೆಯನ್ನು ಪ್ರತಾಪ್‌ಸಿಂಹ ಟೀಕಿಸಿದರು.



ಮೈಸೂರು ಡಿಸಿಸಿ ಕಾರ್ಯದರ್ಶಿ ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಹುಟ್ಟುಹಬ್ಬದ ಪ್ರಯುಕ್ತ ರೈತರಿಗೆ ರಸಗೊಬ್ಬರ ವಿತರಿಸಲಾಯಿತು. ಈ ಸಂದರ್ಭದಲ್ಲಿ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ, ತಾಪಂ ಸದಸ್ಯ ಎಂ.ಮಹದೇವು, ಗುಂಗ್ರಾಲ್ ಛತ್ರ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಎಸ್.ಶಿವಸ್ವಾಮಿ, ನಾಗವಾಲ ಗ್ರಾಪಂ ಮಾಜಿ ಅಧ್ಯಕ್ಷ ಕೆ.ಮಹೇಶ್, ಗ್ರಾಪಂ ಸದಸ್ಯ ಹೆಚ್.ಎಂ.ಮಾಲೇಗೌಡ, ಈಶ್ವರ್, ಕೆಂಪೇಗೌಡ, ಪಿ.ಮಹದೇವು, ಶಿವಕುಮಾರ್, ಮಂಜು, ಸಿಗಳ್ಳಿ ಸೋಮಣ್ಣ, ಹಿನಕಲ್ ಮಂಜು, ಜಟ್ಟಿಹುಂಡಿ ಸುನಿಲ್, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಂದ್ರು, ಹುಯಿಲಾಳು ಮಂಜುನಾಥ ಪ್ರಸಾದ್, ಸತೀಶ, ರಾಜು ಇನ್ನಿತರರಿದ್ದರು.

ಕೂರ್ಗಳ್ಳಿ ಶಾಲೆ ಉನ್ನತೀಕರಿಸಿ, 8ನೇ ತರಗತಿ ಆರಂಭಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು, ಜೂ.1(ಆರ್‌ಕೆಬಿ)– ಮೈಸೂರು ತಾಲೂಕಿನ ಕೂರ್ಗಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಉನ್ನತೀಕರಿಸಿ 8ನೇ ತರಗತಿಯನ್ನು ಆರಂಭಿಸಬೇಕು ಎಂದು ಆಗ್ರಹಿಸಿ ಶಾಲೆಯ ಮಕ್ಕಳು, ಪೋಷಕರು ಬುಧವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಮ್ಮ ಶಾಲೆಗೆ ಪ್ರೌಢಶಾಲೆ ಪ್ರಾರಂಭಿಸಬೇಕು ಎಂಬ ಘೋಷಣೆಗಳನ್ನು ಕೂಗಿ ಒತ್ತಾಯಿಸಿದ ವಿದ್ಯಾರ್ಥಿಗಳು ಮತ್ತು ಪೋಷಕರು ಶೀಘ್ರದಲ್ಲೇ ಶಾಲಾ ತರಗತಿ ಆರಂಭಿಸದಿದ್ದರೆ ತಮ್ಮ ಶಿಕ್ಷಣದ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ ಶೀಘ್ರ 8ನೇ ತರಗತಿ ಆರಂಭಿಸುವಂತೆ ಆಗ್ರಹಿಸಿದರು. ಈ ವೇಳೆ ಮಾತನಾಡಿದ ಗ್ರಾಮದ ಯುವ ಮುಖಂಡ ಎನ್.ರೇವಣ್ಣ, 300 ಮಕ್ಕಳಿರುವ ಶಾಲೆಯನ್ನು ಉನ್ನತೀಕರಿಸುವಂತೆ ಹಲವು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಗ್ರಾಮದಲ್ಲಿ 25 ಸಾವಿರ ಜನಸಂಖ್ಯೆ ಇದೆ. ಬಹುತೇಕ ಮಕ್ಕಳು ಕೃಷಿಕರು ಹಾಗೂ ಬಡ ಕಾರ್ಮಿಕರ ಮಕ್ಕಳೇ ಇದ್ದಾರೆ. ತಕ್ಷಣ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಉನ್ನತೀಕರಿಸಿದ ಶಾಲೆಯನ್ನಾಗಿ ಪರಿವರ್ತಿಸಿ 8ನೇ ತರಗತಿಯನ್ನು ಆರಂಭಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಶಾಲಾ ಮಕ್ಕಳಾದ ಸೌಭಾಗ್ಯ, ಶರತ್ ಇನ್ನಿತರು ಮಕ್ಕಳು, ಪೋಷಕರು ಇದ್ದರು.

ನಾಳೆ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.1–ಚೆಸ್ಕಾಂನಿಂದ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಜೂ.3ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಮೆಲ್ಲಹಳ್ಳಿ, ಹಾರೋಹಳ್ಳಿ, ಹಳೆಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂ ಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭುಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭುಗತಗಳ್ಳಿ, ನಾಡನಹಳ್ಳಿ, ಪೋಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್ ನಗರ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಎಸ್.ಎಂ.ಪಿ. ಡೆವಲಪರ್ಸ್ ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್ ವ್ಯೂ, ಜೆ.ಎಸ್.ಎಸ್. ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿ ಗೋಪಾಲಗೌಡನಗರ, ಸಪ್ತಮಾತೃಕ ಬಡಾವಣೆ, ಸಹೃದಯನಗರ, ಪ್ರಕೃತಿ ಬಡಾವಣೆ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಮಹಾರಾಣಿ ವಿಜ್ಞಾನ ಕಾಲೇಜಲ್ಲಿ ಮೂರು ದಿನಗಳ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ

'ಮೈಸೂರೆಂದರೆ ಮಹಾರಾಣಿಯರು' ಮಹಾತರಂಗ ಗೀತೆ ಬಿಡುಗಡೆ

ಮೈಸೂರು, ಜೂ. 1(ಎಂಟಿವೈ)– ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಪ್ರತಿಭಾನ್ವೇಷಣೆಗಾಗಿ ಆಯೋಜಿಸಿರುವ ಮೂರು ದಿನಗಳ ಕಾಲ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ 'ಮಹಾತರಂಗ'ದ ಅಂಕುರಾರ್ಪಣೆ ಕಲಾತ್ಮಕವಾಗಿ ನೆರವೇರಿತು.



ಮಹಾರಾಣಿ ವಿಜ್ಞಾನ ಕಾಲೇಜಿನ ಮುಖ್ಯದ್ವಾರದ ಮುಂಭಾಗ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಕಾಲೇಜಿನ ಗೀತೆ 'ಮೈಸೂರೆಂದರೆ ಮಹಾರಾಣಿಯರು' 'ಮಹಾತರಂಗ' ಗೀತೆಯನ್ನು ಪತ್ರಕರ್ತೆ ಪ್ರೀತಿ ನಾಗರಾಜ್ ಬಿಡುಗಡೆ ಮಾಡಿದರು. ಕಾಲೇಜಿನ ಕಟ್ಟಡದ ಮೇಲಿಂದ ಕಾರ್ಯಕ್ರಮದ ಲೋಗೋ ಹಾಗೂ ಬ್ಯಾನರ್ ಇಳಿಬಿಡುತ್ತಿದ್ದಂತೆ ವಿದ್ಯಾರ್ಥಿನಿಯರು ಬಣ್ಣ ಬಣ್ಣದ ಹೊಗೆ ಸೂಸುವ ಬತ್ತಿ ಹಿಡಿದು 'ಮೈಸೂರೆಂದರೆ ಮಹಾರಾಣಿ'ಯರು ಗೀತೆಗೆ ಹೆಜ್ಜೆ ಹಾಕಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತೆ ಪ್ರೀತಿ ನಾಗರಾಜ್ ಮಾತನಾಡಿ, ವಿದ್ಯಾರ್ಥಿನಿಯರ ಪ್ರತಿಭಾ ಪ್ರದರ್ಶನಕ್ಕೆ ಇದು ಸೂಕ್ತ ವೇದಿಕೆಯಾಗಲಿದೆ. ಹೆಣ್ಣು ಮಕ್ಕಳು ಯಾವುದೇ ಸಂದರ್ಭದಲ್ಲಿಯೂ ಧೃತಿಗೆಡಬಾರದು. ಎಲ್ಲವನ್ನು ಧೈರ್ಯದಿಂದ ಎದುರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಆತ್ಮವಿಶ್ವಾಸ ಬೆಳೆಸಿಕೊಂಡು ಸಾಹಸಮಯವಾಗಿ ಬದುಕುವುದಕ್ಕೆ ಮುಂದಾಗುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ ಮಾತನಾಡಿ, ಮಹಾತರಂಗ, ಶಿರೋನಾಮೆ ಅಡಿಯಲ್ಲಿ ಮುಂದಿನ ಮೂರು ದಿನಗಳಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು. ಇಂತಹ ವೇದಿಕೆ ವಿದ್ಯಾರ್ಥಿಗಳ ಕೌಶಲ್ಯ ಹಾಗೂ ಪ್ರತಿಭೆ ಅನಾವರಣಕ್ಕೆ ನಾಂದಿ ಹಾಡಲಿದೆ. ಈ ಅವಕಾಶವನ್ನು ವಿದ್ಯಾರ್ಥಿನಿಯರು ಸದುಪಯೋಗಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ಕಾಲೇಜಿನ ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕ ಗೋವಿಂದರಾಜು ಲಕ್ಷ್ಮೀಪುರ ರಚಿಸಿರುವ ಮಹಾರಾಣಿ ಕಾಲೇಜಿನ ಇತಿಹಾಸ ಬಿಂಬಿಸುವ 'ಮೈಸೂರೆಂದರೆ ಮಹಾರಾಣಿಯರು' ಎಂಬ ಕಾಲೇಜಿನ ಧ್ಯೇಯಗೀತೆ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸಮಿತಿಯ ಸಂಚಾಲಕ ಡಾ.ಪರಶುರಾಮ ಮೂರ್ತಿ, ಖಜಾಂಚಿ ಡಾ. ಎಂ.ಪಿ.ರಾಘವೇಂದ್ರ, ಅಧ್ಯಾಪಕರು ಮತ್ತು ಕಚೇರಿ ಸಿಬ್ಬಂದಿ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಪೂರ್ವಿಕಾ, ಉಪಾಧ್ಯಕ್ಷೆ ಮೇಘನಾ, ಕಾರ್ಯದರ್ಶಿಗಳಾದ ಭಾವನಾ ಟಿ.ಪಿ. ಹಾಗೂ ಅನುಷಾ ಸಂಗಯ್ಯ, ಕಾಲೇಜು ವಾರ್ಷಿಕ ಸಂಚಿಕೆ 'ಪೂರ್ಣಿಮಾ' ದ ಸಂಪಾದಕಿ ಅಂಬಿಕಾ ಹಾಗೂ ಅಪೂರ್ವ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ

ರೋಹಿತ್ ಚಕ್ರತೀರ್ಥ ವಜಾಗೊಳಿಸಲು ದಲಿತ ಚಳುವಳಿ ನವನಿರ್ಮಾಣ ವೇದಿಕೆ ಆಗ್ರಹ

ಮೈಸೂರು,ಜೂ.1(ಪಿಎಂ)– ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾಗೊಳಿಸಿ, ಪಠ್ಯಪುಸ್ತಕ ಮುದ್ರಣಕ್ಕೆ ವ್ಯಯವಾಗಿರುವ ಹಣವನ್ನು ಅವರಿಂದಲೇ ವಸೂಲಿ ಮಾಡಬೇಕೆಂದು ಕರ್ನಾಟಕ ದಲಿತ ಚಳುವಳಿ ನವನಿರ್ಮಾಣ ವೇದಿಕೆ ಒತ್ತಾಯಿಸಿದೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಚಾಲನಾ ಸಮಿತಿ ಸಂಚಾಲಕ ಹರಿಹರ ಆನಂದಸ್ವಾಮಿ, ಅಡ್ಡದಾರಿಯಿಂದ ಅಧಿಕಾರಕ್ಕೇರಿದ ರಾಜ್ಯ ಬಿಜೆಪಿ ಸರ್ಕಾರ, ಧರ್ಮ ಮತ್ತು ಜಾತಿ ಹೆಸರಿನಲ್ಲಿ ದಿನಕ್ಕೊಂದು ಆತಂಕ ಸೃಷ್ಟಿಸುತ್ತಿದೆ. ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿಜೆಪಿ ಹಿಡನ್ ಅಜೆಂಡಾಕ್ಕೆ ಪೂರಕವಾಗಿ ಪಠ್ಯಪುಸ್ತಕ ಪರಿಷ್ಕರಣೆಗೊಳಿಸಿ, ಮಕ್ಕಳ ಮನಸ್ಸಿನಲ್ಲಿ ಸನಾತನ ಜಾತಿ ಮತ್ತು ಧರ್ಮದ ಅಮಲನ್ನು ಬಿತ್ತುವ ಮೂಲಕ ಭವಿಷ್ಯದ ಸಮಾಜವನ್ನು ದಿಕ್ಕು ತಪ್ಪಿಸಲಾಗುತ್ತಿದೆ ಎಂದು ಆರೋಪಿಸಿದರು.

ರೋಹಿತ್ ಚಕ್ರತೀರ್ಥ ಅವರನ್ನು ಕೂಡಲೇ ಬಂಧಿಸಬೇಕು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡ ಬೇಕು. ರೈತ ನಾಯಕ ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ನಡೆಸಿರುವ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಹಿಜಾಬ್, ಹಲಾಲ್, ಆಜಾನ್ ಹೆಸರಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಲಾಗುತ್ತಿದೆ. ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದೇ ಇರುವ ಸರ್ಕಾರದ ನೀತಿ ಖಂಡನೀಯ. ವೈದಿಕಶಾಹಿ ಸಿದ್ಧಾಂತದಡಿ ಓಟ್ ಬ್ಯಾಂಕ್ ಸೃಷ್ಟಿ ಮಾಡಲು ಬಿಜೆಪಿ ಮುಂದಾಗಿದೆ ಎಂದು ಆರೋಪಿಸಿದರು. ಇದೀಗ ಮಸೀದಿಗಳಲ್ಲಿ ಹಿಂದೂ ದೇವಾಲಯಗಳನ್ನು ಹುಡುಕುವುದೂ ಶುರುವಾಗಿದೆ. ಹಿಂದೂ ದೇವಾಲಯಗಳು ಅಧಿಕ ಪ್ರಮಾಣದಲ್ಲಿ ಬೌದ್ಧ ಮಂದಿರಗಳಾಗಿದ್ದವು ಎನ್ನುವುದಕ್ಕೆ ಕುರುಹುಗಳು ದೊರಕುತ್ತಿವೆ. ಈ ಹಿನ್ನೆಲೆಯಲ್ಲಿ ಹಿಂದೂ ದೇವಾಲಯಗಳನ್ನು ಬೌದ್ಧ ಮಂದಿರಗಳೆಂದು ಘೋಷಣೆ ಮಾಡಬೇಕೆಂದು ಒತ್ತಾಯಿಸಿದರೆ, ಪರಿಸ್ಥಿತಿ ಏನಾಗಲಿದೆ? ಎಂದು ಅವಲೋಕಿಸುವುದು ಅಗತ್ಯ ಎಂದರು. ವೇದಿಕೆ ಮುಖಂಡರಾದ ಬಂಗವಾದಿ ನಾರಾಯಣಪ್ಪ, ಸತೀಶ್, ದರ್ಶನ್ ಸುದ್ದಿಗೋಷ್ಠಿಯಲ್ಲಿದ್ದರು.

ಅಲ್ಪಸಂಖ್ಯಾತರ ಬಗ್ಗೆ ಜೆಡಿಎಸ್‌ಗೆ ಒಲವಿದ್ದರೆ ಸಿ.ಎಂ.ಇಬ್ರಾಹಿಂಗೆ ಟಿಕೆಟ್ ನೀಡಲಿಲ್ಲವೇಕೆ?

ಮೈಸೂರಲ್ಲಿ ಕಾಂಗ್ರೆಸ್ ಮುಖಂಡರ ಪ್ರಶ್ನೆ

ಮೈಸೂರು, ಜೂ.1(ಆರ್‌ಕೆಬಿ)– ಜಾತ್ಯತೀತ ಜನತಾದಳಕ್ಕೆ ಅಲ್ಪಸಂಖ್ಯಾತರ ಬಗ್ಗೆ ಒಲವಿದ್ದರೆ ಕುಪೇಂದ್ರ ರೆಡ್ಡಿ ಬದಲು ಸಿ.ಎಂ.ಇಬ್ರಾಹಿಂ ಅವರಿಗೆ ಟಿಕೆಟ್ ನೀಡಲಿಲ್ಲವೇಕೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಪ್ರಶ್ನಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಬಳಿ 32 ಮತಗಳಿದ್ದು, ಗೆಲುವಿಗೆ ಅಗತ್ಯವಾದ ಸಂಖ್ಯಾಬಲ ಇಲ್ಲದಿದ್ದರೂ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಸಮುದಾಯ ಅಭ್ಯರ್ಥಿಯನ್ನು ಸೋಲಿಸಲು ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಈ ಮೂಲಕ ಜೆಡಿಎಸ್ ಅಲ್ಪಸಂಖ್ಯಾತರ ವಿರೋಧಿ ಎಂಬುದನ್ನು ಸಾಬೀತುಪಡಿಸಿಕೊಂಡಿದೆ ಎಂದು ಆರೋಪಿಸಿದರು.

ಜೆಡಿಎಸ್ ಪಕ್ಷ ಬಿಜೆಪಿಯ ಬಿ ಟೀಮ್. ರಾಜ್ಯಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಗೆಲ್ಲುವ ಶಕ್ತಿಯಿಲ್ಲ ಎಂದ ಅವರು, ಹೆಚ್.ಡಿ.ದೇವೇಗೌಡರು ರಾಜ್ಯಸಭಾ ಸದಸ್ಯರಾಗಲು ಕಾಂಗ್ರೆಸ್ ಕೊಡುಗೆ ಕಾರಣವಾಗಿದೆ. ಹಾಗಾಗಿ ಕೂಡಲೇ ಜೆಡಿಎಸ್ ಅಭ್ಯರ್ಥಿಯನ್ನು ಹಿಂಪಡೆದು ಅಲ್ಪಸಂಖ್ಯಾತ ಸಮುದಾಯದ ಮನ್ಸೂರ್ ಅಲಿಖಾನ್ ಗೆಲುವಿಗೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೂ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿ ಮನ್ಸೂರ್ ಅಲಿಖಾನ್ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ರಾಕೇಶ್ ಟಿಕಾಯತ್‌ಗೆ ಮಸಿ ಬಳಿದ ಪ್ರಕರಣ ಕುರಿತು ಪ್ರಸ್ತಾಪಿಸಿದ ಅವರು, ಈ ಘಟನೆಯಲ್ಲಿ ಬಿಜೆಪಿ ಪ್ರಾಯೋಜಿತ ವ್ಯಕ್ತಿಗಳಿದ್ದಾರೆ. ಹಲ್ಲೆ ನಡೆಸುವ ವೇಳೆ ಮೋದಿಗೆ ಜೈಕಾರ ಹಾಕಿರುವುದನ್ನು ನೋಡಿದರೆ ಇದು ಯೋಜಿತ ಹಲ್ಲೆ ಎಂಬುದು ಕಂಡುಬರುತ್ತದೆ. ಏಕೆಂದರೆ ಘಟನೆ ವೇಳೆ ಅರ್ಧ ಗಂಟೆ ಕಾಲ ಸ್ಥಳದಲ್ಲಿ ಪೊಲೀಸರೇ ಇರಲಿಲ್ಲ. ಒಬ್ಬ ರಾಷ್ಟ್ರೀಯ ರೈತ ನಾಯಕರ ಸಭೆಗೆ ಪೊಲೀಸರೇ ಇರಲಿಲ್ಲ ಎಂದರೆ ಇದು ಪೂರ್ವಯೋಜಿತ ಘಟನೆ ಎಂಬ ಶಂಕೆ ಉಂಟಾಗುತ್ತಿದೆ. ಬಿಜೆಪಿ ಪ್ರಾಯೋಜಿತ ಘಟನೆಗೆ ಕಾರಣರಾದವರನ್ನು ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಕಾಂಗ್ರೆಸ್ ಸೇವಾದಳ ಅಧ್ಯಕ್ಷ ಗಿರೀಶ್, ಮೈಸೂರು ನಗರ ಮಾಧ್ಯಮ ಸಂಚಾಲಕ ಎಂ.ಮಹೇಶ್ ಉಪಸ್ಥಿತರಿದ್ದರು.

ಮೋದಿಯವರು ಘೋಷಿಸಿದ ಮೈಸೂರು 'ಪ್ಯಾರೀಸ್' ಎಲ್ಲಿ?

2014ರಲ್ಲಿ ನರೇಂದ್ರ ಮೋದಿಯವರು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರನ್ನು ದೊಡ್ಡ ಹಳ್ಳಿ ಎಂದು ಟೀಕಿಸಿದ್ದರು. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮೈಸೂರನ್ನು ಪ್ಯಾರಿಸ್ ಮಾಡುವುದಾಗಿ ಘೋಷಿಸಿದ್ದರು. ಅವರು ಆಡಿದ ಮಾತಿನ ವಿಡಿಯೋ ನಮ್ಮ ಬಳಿ ಇದೆ. ಆದರೆ ಬರೀ ಸುಳ್ಳನ್ನೇ ಹೇಳುವ ಸಂಸದ ಪ್ರತಾಪ್‌ಸಿಂಹ ಮೋದಿ ಹಾಗೇ ಹೇಳಿಲ್ಲ ಎಂದು ಹೇಳುತ್ತಿದ್ದಾರೆ. ಮೋದಿಯವರು ಪ್ಯಾರಿಸ್ ಮಾಡುವ ಬದಲು ಮೈಸೂರಿನ ಅಭಿವೃದ್ಧಿಗೆ ನೀಡಿರುವ ಕೊಡುಗೆಯಾದರು ಏನು ಎಂದು ಎಂ.ಲಕ್ಷ್ಮಣ್ ಪ್ರಶ್ನಿಸಿದರು. ಮೈಸೂರಿಗೆ ಹೆಚ್ಚುವರಿ ರೈಲು ತಂದಿದ್ದು, ಮೈಸೂರು–ಬೆಂಗಳೂರು ರಸ್ತೆ ಮೋದಿ ಕೊಡುಗೆ ಎಂದು ಪ್ರತಾಪ್‌ಸಿಂಹ ಪದೇ ಪದೆ ಹೇಳುತ್ತಲೇ ಇದ್ದಾರೆ. ಸ್ಪೀಚ್ ಅಂಡ್ ಹೀಯರಿಂಗ್‌ಗೆ 150 ಕೋಟಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಇವೆಲ್ಲವೂ ಬರೀ ಸುಳ್ಳು ಎಂದು ಪ್ರತಾಪ್‌ಸಿಂಹ ವಿರುದ್ಧ ಕಿಡಿಕಾರಿದರು.

ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ಮೈಸೂರು, ಜೂ.1– ಮೈಸೂರು ನಗರ ಮಡಿವಾಳ ಸಂಘದಿಂದ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 500ಕ್ಕಿಂತ ಹೆಚ್ಚು ಅಂಕ ಗಳಿಸಿದ ಮಡಿವಾಳ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಡಿವಾಳ ಜಾತಿ ಪ್ರಮಾಣ ಪತ್ರ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಪ್ರತಿ, ಪೋಷಕರ ಹಾಗೂ ವಿದ್ಯಾರ್ಥಿಯ ಫೋಟೋ ಹಾಗೂ ಆಧಾರ್‌ಕಾರ್ಡ್ ಪ್ರತಿಯೊಂದಿಗೆ ಅರ್ಜಿಯನ್ನು ಜೂ.10ರೊಳಗಾಗಿ ಸಲ್ಲಿಸಬೇಕಾಗಿದೆ. ಮಾಹಿತಿಗಾಗಿ ಸಂಘದ ಅಧ್ಯಕ್ಷ ಮರುಣಾ ಮಹದೇವು ಮೊ/99009 54221, ಖಜಾಂಚಿ ಎಂ. ನಂಜುಂಡಯ್ಯ ಮೊ.8197983139 ಸಂಪರ್ಕಿಸಬಹುದು.

ಮಹೇಶ್ ನೇಮಕ

ಮೈಸೂರು,ಜೂ.1–ಎಐಸಿಸಿ ಹ್ಯೂಮನ್ ರೈಟ್ಸ್ ಮೈಸೂರಿನ ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷರನ್ನಾಗಿ ಮಹೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಎಸ್ಸಿ ಎಸ್ಟಿ ವಿಭಾಗದ ಅಧ್ಯಕ್ಷ ರಾಕೇಶ್‌ಕುಮಾರ್ ತಿಳಿಸಿದ್ದಾರೆ.



ಮೈಸೂರು ಮಿತ್ರ ಗುರುವಾರ 2 ಜೂನ್ 2022

ಬೈಕ್‌ಗಳ ಮುಖಾಮುಖಿ ಡಿಕ್ಕಿ: ಇಬ್ಬರು ಸವಾರರು ಸಾವು

ನಂಜನಗೂಡು, ಜೂ.1(ಸುದರ್ಶನ್)– ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಇಬ್ಬರು ಸವಾರರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಓರ್ವ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಕವಲಂದೆ ಗ್ರಾಮದ ಸಮೀಪ ಕೆ.ಆರ್.ಪುರ ಕ್ರಾಸ್ ಬಳಿ ಬುಧವಾರ ನಡೆದಿದೆ.

ನೇರಳೆ ಗ್ರಾಮದ ನಿವಾಸಿ ರವೀಶ್(26) ಹಾಗೂ ಮೈಸೂರು ತಾಲೂಕಿನ ಮರಸೆ ಗ್ರಾಮದ ಮನೋಹರ(35) ಮೃತಪಟ್ಟ ಸವಾರರು. ಬೈಕ್‌ನ ಹಿಂಬದಿ ಸವಾರ ಕೃಷ್ಣ (24) ಗಂಭೀರವಾಗಿ ಗಾಯಗೊಂಡು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಾಗಿದ್ದಾರೆ.

ಘಟನೆ ವಿವರ: ತಾಲೂಕಿನ ನೇರಳೆ ಗ್ರಾಮದ ರವೀಶ ತನ್ನ ಗೆಳೆಯ ಕೃಷ್ಣನೊಂದಿಗೆ ಕವಲಂದೆ ಗ್ರಾಮದಿಂದ ಚಾಮರಾಜನಗರಕ್ಕೆ ಬೈಕ್‌ನಲ್ಲಿ ಹೋಗುವಾಗ ಚಾಮರಾಜನಗರದಿಂದ ಮೈಸೂರಿಗೆ ಬರುತ್ತಿದ್ದ ಮೈಸೂರು ತಾಲೂಕಿನ ಮರಸೆ ಗ್ರಾಮದ ಮನೋಹರ ಚಲಾಯಿಸುತ್ತಿದ್ದ ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ರವೀಶ ಹಾಗೂ ಮನೋಹರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೃಷ್ಣ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ದೊಡ್ಡ ಕವಲಂದೆ ಪಿಎಸ್‌ಐ ಮಹೇಂದ್ರ ಭೇಟಿ ನೀಡಿ, ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶಾಲಾ ವಾಹನ ಹರಿದು ಎತ್ತು ಸಾವು



ಹುಣಸೂರು, ಜೂ.1(ಕೆಕೆ)– ರಸ್ತೆ ಬದಿಯಲ್ಲಿ ಕಟ್ಟಿದ್ದ ಎತ್ತುಗಳ ಮೇಲೆ ಖಾಸಗಿ ಶಾಲಾ ವಾಹನ ಹರಿದ ಪರಿಣಾಮ ಒಂದು ಎತ್ತು ಸ್ಥಳದಲ್ಲಿಯೇ ಮೃತಪಟ್ಟು ಮತ್ತೊಂದು ಎತ್ತಿನ ಸ್ಥಿತಿ ಗಂಭೀರವಾಗಿರುವ ಘಟನೆ ತಾಲೂಕಿನ ಸಣ್ಣೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ದ್ಯಾವಪ್ಪ ಅವರಿಗೆ ಸೇರಿದ ಜೋಡಿ ಎತ್ತುಗಳನ್ನು ಎಂದಿನಂತೆ ಮನೆಯ ಮುಂದೆ ರಸ್ತೆ ಬದಿಯಲ್ಲಿ ಕಟ್ಟಿ ಹಾಕಲಾಗಿತ್ತು. ಹುಣಸೂರು ನಗರದ ನ್ಯೂ ಕೇಂಬ್ರಿಡ್ಜ್ ಪಬ್ಲಿಕ್ ಸ್ಕೂಲ್‌ನ ವಾಹನ ಇದೇ ರಸ್ತೆಯಲ್ಲಿ ಪ್ರತಿ ದಿನ ಮಕ್ಕಳನ್ನು ಶಾಲೆಗೆ ಕರೆ ದೊಯ್ಯಲು ಬರುತ್ತಿತ್ತು. ಈ ವೇಳೆ ಪಕ್ಷಿಯೊಂದು ಚಾಲಕನ ಬಳಿ ವಾಹನದ ಕಿಟಕಿಯೊಳಗೆ ನುಗ್ಗಿದಾಗ ಗಾಬರಿಗೊಂಡ ಚಾಲಕ ಆ ಪಕ್ಷಿಯನ್ನು ಹೊಡೆಯಲು ಪ್ರಯತ್ನಿಸಿದ್ದಾನೆ. ಆ ಸಮಯದಲ್ಲಿ ನಿಯಂತ್ರಣ ತಪ್ಪಿದ ವಾಹನ ಮತ್ತೊಂದು ಕಡೆಗೆ ಚಲಿಸಿ ಎತ್ತುಗಳ ಮೇಲೆ ಹರಿದಿದೆ. ಪರಿಣಾಮ ಒಂದು ಎತ್ತು ಮೃತಪಟ್ಟರೆ, ಮತ್ತೊಂದಕ್ಕೆ ತೀವ್ರವಾದ ಗಾಯಗಳಾಗಿವೆ. ವಾಹನದಲ್ಲಿ ಕುಳಿತಿದ್ದ ಮಕ್ಕಳಿಗೆ ಯಾವುದೇ ತೊಂದರೆಯಾಗಿಲ್ಲ. ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶ್ರೀಗಂಧ ಮರದ ತುಂಡು ಸಾಗಣೆ: ಇಬ್ಬರ ಬಂಧನ



ಹೆಚ್.ಡಿ.ಕೋಟೆ, ಜೂ.1(ಮಂಜು)– ಶ್ರೀಗಂಧ ಮರದ ತುಂಡುಗಳನ್ನು ಸಾಗಿಸುತ್ತಿದ್ದ ಇಬ್ಬರನ್ನು ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿರುವ ಘಟನೆ ತಾಲೂಕಿನ ಕಲ್ಲಹಳ್ಳಿ ಗ್ರಾಮದ ಬಳಿ ನಡೆದಿದೆ.

ಸರಗೂರು ತಾಲೂಕಿನ ಕಾಂತನ ಹಾಡಿ ಗ್ರಾಮದ ರಾಜು(40), ರಮೇಶ್ (37) ಬಂಧಿತ ಆರೋಪಿಗಳು. ಆರೋಪಿಗಳು ಬೈಕ್‌ನಲ್ಲಿ ಶ್ರೀಗಂಧ ಮರದ ತುಂಡುಗಳನ್ನು ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಖಚಿತ ಮಾಹಿತಿಯ ಮೇರೆಗೆ ವಿಶೇಷ ಹುಲಿ ಸಂರಕ್ಷಣಾ ದಳದ ಪ್ರಭಾರ ವಲಯ ಅರಣ್ಯಾಧಿಕಾರಿ ನವೀನ್‌ಕುಮಾರ್, ಅಶೋಕ ಚಿಕ್ಕಗಡೆ ಅವರ ನೇತೃತ್ವದಲ್ಲಿ ಸಿಬ್ಬಂದಿ ದಾಳಿ ನಡೆಸಿದಾಗ ಆರೋಪಿಗಳಾದ ರಾಜು ಮತ್ತು ರಮೇಶ್ ಅವರನ್ನು ಮಾಲು ಸಮೇತ ಬಂಧಿಸಿದ್ದಾರೆ. ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ಜಪ್ತಿ ಮಾಲಿನ ಸಮೇತ ಮೊಳೆಯೂರು ವನ್ಯಜೀವಿ ವಲಯದ ಅರಣ್ಯಾಧಿಕಾರಿಗಳ ಕಚೇರಿಗೆ ಹಸ್ತಾಂತರಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಶ್ರೀಕಾಂತ್, ಅರಣ್ಯ ರಕ್ಷಕರಾದ ಉಮೇಶ್, ಸೋಮೇಶ್, ಅರಣ್ಯ ವೀಕ್ಷಕರಾದ ಬಿ.ಸಿ.ಕಾಳ, ದಿನೇಶ್ ಇತರರು ಪಾಲ್ಗೊಂಡಿದ್ದರು.

ಯುವಜನತೆಗೆ ಪ್ರಧಾನಿ ಮೋದಿ ಮಾದರಿ: ಎ.ಹೆಚ್.ವಿಶ್ವನಾಥ್



ಹುಣಸೂರು, ಜೂ.1(ಕೆಕೆ)– ದೇಶದ ಎಲ್ಲಾ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುವ ಜೊತೆಗೆ ನೆರೆಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಲು ಪ್ರಧಾನಿ ನರೇಂದ್ರ ಮೋದಿ ಶ್ರಮಿಸುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ತಿಳಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ನಗರದಲ್ಲಿ ಮತಯಾಚಿಸಿದ ಬಳಿಕ, ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 13 ವರ್ಷಗಳ ಕಾಲ ಗುಜರಾತ್‌ನ ಮುಖ್ಯಮಂತ್ರಿ ಹಾಗೂ 8 ವರ್ಷಗಳ ಕಾಲ ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿಯವರು ಉತ್ತಮ ಆಡಳಿತ ನಡೆಸಿದರು. ಒಬ್ಬ ಸಾಮಾನ್ಯ ಕಾರ್ಯಕರ್ತನೊಬ್ಬ ಅತ್ಯುನ್ನತ ಹುದ್ದೆಗೇರುವ ಮೂಲಕ ಯುವಜನತೆಗೆ ಮಾದರಿಯಾಗಿದ್ದಾರೆ ಎಂದರು.

ಕೇಂದ್ರ ಸರ್ಕಾರದ ಮುದ್ರಾ ಯೋಜನೆಯೂ ಕರಕುಶ ಕರ್ಮಿಗಳು, ವೃತ್ತಿಪರ ಕೆಲಸಗಾರರು ಸೇರಿದಂತೆ ಯುವಜನರಿಗೆ ಅನುಕೂಲಕರವಾಗಿದೆ. ಇದರೊಂದಿಗೆ ಆಯುಷ್ಮಾನ್ ಭಾರತ್, ಜನಧನ್, ಜನೌಷಧ ಸೇರಿದಂತೆ ಇನ್ನಿತರ ಯೋಜನೆಗಳು ಬಡಜನರು, ರೈತರಿಗೆ ಅನುಕೂಲಕರವಾಗಿದ್ದು, ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಜನರಿಗೆ ತಲುಪಿಸುವ ಕೆಲಸವಾಗಬೇಕಿದೆ ಎಂದು ತಿಳಿಸಿದರು.

ಜನರ ಧ್ವನಿಯಾಗಿದ್ದೇನೆ: ಬಿಜೆಪಿ ಎಂಎಲ್‌ಸಿ ಆಗಿರುವ ನೀವು ಪಕ್ಷಕ್ಕೆ ಮುಜುಗರ ಉಂಟಾಗುವಂತ ಕೆಲಸ ಮಾಡುತ್ತಿದ್ದೀರಿ, ಪಕ್ಷಕ್ಕೆ ಕರೆತಂದು ನಾವೇ ಮಾತು ಕೇಳುವಂತಾಗಿದೆ ಎಂದು ಕೆಲವು ಮುಖಂಡರು ನಿಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕೆಲವರು ನನ್ನನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ಅದಕ್ಕೆ ನಾನೇನೂ ಮಾಡಲು ಸಾಧ್ಯವಿಲ್ಲ. ಜನಪ್ರತಿನಿಧಿಯಾದ ನಾನು ಅವರ ಧ್ವನಿಯಾಗಿದ್ದೇನೆ ಅಷ್ಟೇ. ತಪ್ಪುಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ನಾಗಣ್ಣಗೌಡ, ಮುಖಂಡರಾದ ಗಣೇಶ್, ಕುಮಾರಸ್ವಾಮಿ, ಶಿವಕುಮಾರ್ ಇದ್ದರು.

ಸಮಗ್ರ ಯೋಜನೆ ರೂಪಿಸುವುದು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಉದ್ದೇಶ



ತಿ.ನರಸೀಪುರ, ಜೂ. 1(ಎಸ್‌ಕೆ)– ಶಾಶ್ವತ ಅಭಿವೃದ್ಧಿಗಾಗಿ ಸಮಗ್ರ ಯೋಜನೆಗಳನ್ನು ರೂಪಿಸುವುದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಉದ್ದೇಶ ಎಂದು ಧರ್ಮಸ್ಥಳ ಗ್ರಾಮೀಣಾ ಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್ ಹೇಳಿದರು.

ಪಟ್ಟಣದ ಹೆಳವರಹುಂಡಿ ಗ್ರಾಮದ ಕನಕ ಭವನದಲ್ಲಿ 2501ನೇ ಪ್ರಗತಿಬಂಧು ಸ್ವ ಸಹಾಯ ಸಂಘಗಳ ಉದ್ಘಾಟನೆ ಸಮಾರಂಭ ಮತ್ತು ಪರಿಸರ ಸಂರಕ್ಷಣೆ ಮಾಹಿತಿ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳಲು ಸ್ವಸಹಾಯ ಸಂಘಗಳ ಮೂಲಕ ಪರಿವರ್ತನೆ ಮಾಡುವ ಉದ್ದೇಶದಿಂದ ಸಾಲ ಸೌಲಭ್ಯ ಕಲ್ಪಿಸಿ, ತರಬೇತಿ ನೀಡಿ ಆರ್ಥಿಕವಾಗಿ ಸಬಲರಾಗಲು ಉತ್ತೇಜನ ನೀಡುವುದೇ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಗುರಿಯಾಗಿದೆ ಎಂದರು.

ಮಹಿಳೆಯರು ಒಟ್ಟಿಗೆ ಸೇರಿ ಸಂಘ ಮಾಡಿ ಉಳಿತಾಯ ಮಾಡುವ ಮೂಲಕ ತಮ್ಮ ಕುಟುಂಬ ನಿರ್ವಹಣೆಗೆ ಇತರರ ಮೇಲೆ ಅವಲಂಬಿತರಾಗದೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬೇಕು. ಈ ಮೂಲಕ ಉಳಿತಾಯ ಮಾಡಿ ಕುಟುಂಬ ನಿರ್ವಹಿಸಬೇಕು ಎಂದು ಮಹಿಳೆಯರಿಗೆ ಕಿವಿಮಾತು ಹೇಳಿದರು.

ಜನಜಾಗೃತಿ ಸಮಿತಿ ಸದಸ್ಯ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಮಹಿಳಾ ಸ್ವಸಹಾಯ ಸಂಘಗಳು ಹಣ ಉಳಿತಾಯ ಮಾಡಿದರೆ ಸಾಲದು, ಪರಿಸರ ಸಂರಕ್ಷಣೆಯ ಬಗ್ಗೆಯೂ ಗಮನಹರಿಸಬೇಕು. ಗಿಡ, ಮರಗಳನ್ನು ರಕ್ಷಿಸಿ, ಪ್ರತಿಯೊಬ್ಬರೂ ಗಿಡ ನೆಟ್ಟು ಅವುಗಳ ಸಂರಕ್ಷಣೆ ಮಾಡುವಂತಾಗಬೇಕು ಎಂದರು.

ಹೇಳವರುಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಅರುಣ್‌ಕುಮಾರ್ ಗೌಡ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ತಾಲೂಕು ಸಂಯೋಜನಾಧಿಕಾರಿ ಸಂಜೀವ, ಜನಜಾಗೃತಿ ಸಮಿತಿ ಜಿಲ್ಲಾ ಕಾರ್ಯದರ್ಶಿ ಕಿರಗಸೂರು ಶಂಕರ್, ಪುರಸಭಾ ಸದಸ್ಯ ಮೆಡಿಕಲ್ ನಾಗರಾಜ, ಬನ್ನಹಳ್ಳಿ ಹುಂಡಿ ಒಕ್ಕೂಟದ ಅಧ್ಯಕ್ಷ ಮಧು, ದಸಂಸ ಸಂಚಾಲಕ ಬನ್ನಹಳ್ಳಿ ಸೋಮಣ್ಣ, ವಲಯ ಮೇಲ್ವಿಚಾರಕಿ ಪವಿತ್ರ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಪದ್ಮ, ಮಹಿಳಾ ಸ್ವಸಹಾಯ ಸಂಘದವರು ಇದ್ದರು.

ಹುಲ್ಲಹಳ್ಳಿಯಲ್ಲಿ ಅದ್ದೂರಿ ಬಸವ ಜಯಂತಿ



ಹುಲ್ಲಹಳ್ಳಿ, ಜೂ.1– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಬಸವೇಶ್ವರ ಯುವ ವೇದಿಕೆ ಮತ್ತು ವೀರಶೈವ ಲಿಂಗಾಯತ ಸಮುದಾಯದಿಂದ ಬಸವ ಜಯಂತಿ ಮತ್ತು ಡಾ.ಶಿವಕುಮಾರ ಸ್ವಾಮೀಜಿ 115ನೇ ಜನ್ಮ ದಿನಾಚರಣೆ ಅದ್ದೂರಿಯಾಗಿ ನಡೆಯಿತು.

ಹುಲ್ಲಹಳ್ಳಿಯ ಶ್ರೀಶಾಂತ ಮಲ್ಲಿಕಾರ್ಜುನ ಮಠದ ಶ್ರೀಇಮ್ಮಡಿ ಚೆನ್ನಮಲ್ಲ ದೇಶಿ ಕೇಂದ್ರ ಸ್ವಾಮೀಜಿ ಬಸವೇಶ್ವರ ಉತ್ಸವ ಮೂರ್ತಿಗೆ ಪುಷ್ಪ ನಮನ ಸಲ್ಲಿಸುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ವೀರಶೈವ ಲಿಂಗಾಯತ ಸಮುದಾಯ ಭವನ ಮುಂಭಾಗದಿಂದ ಆರಂಭಗೊಂಡ ಮೆರವಣಿಗೆ ಜನಪದ ಕಲಾ ತಂಡಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ನಂದಿ ಧ್ವಜ ಕುಣಿತ ಮತ್ತು ವೀರಾಗಾಸೆ ಪೂಜಾ ಕುಣಿತ ಮೆರವಣಿಗೆಗೆ ಮೆರಗು ನೀಡಿತು. ನಗಾರಿ ಶಬ್ದಕ್ಕೆ ಯುವಕರು ಕುಣಿದು ಕುಪ್ಪಳಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಹೆಚ್.ಎನ್.ಮಹೇಶ್, ಮಾಜಿ ಅಧ್ಯಕ್ಷ ಅಣ್ಣ ಬಸವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಂ.ಮಾದಪ್ಪ, ರೈತ ಸಂಘದ ಹಸಿರುಸೇನೆ ತಾಲೂಕು ಅಧ್ಯಕ್ಷ ರೇಣುರಾಜ್, ರೈತ ಸಂಘದ ಹೋಬಳಿ ಘಟಕದ ಅಧ್ಯಕ್ಷ ಟೈಲರ್ ಮಹೇಶ್, ಮುಖಂಡರಾದ ಹೆಚ್.ಎನ್.ಶಿವನಂಜಪ್ಪ, ಪಾರ್ವತಪ್ಪ, ಬಸವೇಶ್ವರ ಯುವ ವೇದಿಕೆಯ ಅಶೋಕ್, ದಿಲೀಪ್, ಶಿವು, ಕಿರಣ್, ಚಂದನ್, ಸಿದ್ದೇಶ್, ಆನಂದ, ಮುತ್ತುರಾಜ್, ಶ್ರೇಯಸ್, ಮಧು, ಸಾಗರಿ ಮುಂತಾದವರು ಹಾಜರಿದ್ದರು.



ವರುಣಾ ಕ್ಷೇತ್ರಕ್ಕೆ ಸೇರಿದ ಎಡಕೊಳ ಗ್ರಾಮದಲ್ಲಿ ನಡೆದ ರಾಜ್ಯಮಟ್ಟ ವಾಲಿಬಾಲ್ ಟೂರ್ನಿ ನಡೆಯಿತು. ಟೂರ್ನಿಯಲ್ಲಿ 15ಕ್ಕೂ ಹೆಚ್ಚು ವಾಲಿಬಾಲ್ ತಂಡ ಪಾಲ್ಗೊಂಡಿದ್ದು, ತಾಯೂರು ಎಂ.ಬಾಯ್ಸ್ ತಂಡ ಪ್ರಥಮ ಸ್ಥಾನ ಪಡೆಯಿತು. ಇವರಿಗೆ ತಾಯೂರು ಗ್ರಾಪಂ ಅಧ್ಯಕ್ಷ ಬಸವರಾಜ್ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು ಇದ್ದರು. ಚಿತ್ರ: ಸುತ್ತೂರು ನಂಜುಂಡನಾಯಕ

ನಿವೃತ್ತ ಪ್ರಭಾರ ಉಪನೋಂದಣಾಧಿಕಾರಿ ಹನುಮಂತಯ್ಯರಿಗೆ ಬೀಳ್ಕೊಡುಗೆ



ತಿ.ನರಸೀಪುರ, ಜೂ.1(ಎಸ್‌ಕೆ)– ಪಟ್ಟಣದ ಹಿರಿಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಪ್ರಭಾರ ಉಪ ನೋಂದಣಾಧಿಕಾರಿಯಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಹನುಮಂತಯ್ಯ ಅವರನ್ನು ಕಚೇರಿಯ ನೌಕರರ ವೃಂದ ಹಾಗೂ ಪತ್ರಕಾರರ ಪ್ರಗತಿ ಪರ ವೇದಿಕೆ ಸಹಯೋಗದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ತಾಲೂಕು ಕಚೇರಿಯ ಶಾಸಕರ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ನಂಜನಗೂಡು, ಬನ್ನೂರು ಹಾಗೂ ತಿ.ನರಸೀಪುರ ಪಟ್ಟಣದ ಪತ್ರ ಬರಹಗಾರರು ಆಗಮಿಸಿ ಸೇವೆಯಿಂದ ನಿವೃತ್ತಿ ಹೊಂದಿದ ಹನುಮಂತಯ್ಯ ಅವರನ್ನು ಸನ್ಮಾನಿಸಿ ಬೀಳ್ಕೊಟ್ಟರು.

ಈ ವೇಳೆ ನಂಜನಗೂಡು ಉಪವಿಭಾಗಾಧಿಕಾರಿ ಶಿವಶಂಕರ ಮೂರ್ತಿ, ಬನ್ನೂರು ಪ್ರಭಾರ ಉಪ ನೋಂದಣಾಧಿಕಾರಿ ಚೆನ್ನನಾಯಕ, ಮೈಸೂರು ಪಶ್ಚಿಮ ಉಪ ನೋಂದಣಾಧಿಕಾರಿ ಶ್ರೀಕಾಂತ್, ಮಿರ್ಲೆ ನೋಂದಣಾಧಿಕಾರಿ ಉಮೇಶ್, ಪ್ರಥಮ ದರ್ಜೆ ಸಹಾಯಕ ಮಂಜುನಾಥ್, ದ್ವಿತೀಯ ದರ್ಜೆ ಸಹಾಯಕಿ ಸಿ.ನಾಗವೇಣಿ, ಪತ್ರ ಬರಹಗಾರರ ಪ್ರಗತಿ ಪರ ವೇದಿಕೆಯ ಗೌರವಾಧ್ಯಕ್ಷ ಚಿಕ್ಕಲಿಂಗಯ್ಯ, ಅಧ್ಯಕ್ಷ ನಾಗರಾಜಪ್ಪ, ಕಾರ್ಯಾಧ್ಯಕ್ಷ ಲೋಕೇಶ್, ಉಪಾಧ್ಯಕ್ಷ ಎಸ್.ಶಿವಶಂಕರ್, ಕೋಶಾಧ್ಯಕ್ಷ ಬಿ.ರಮೇಶ್, ಪ್ರಧಾನ ಕಾರ್ಯದರ್ಶಿ ಎಸ್.ಸುರೇಶ್, ಪುರಸಭಾ ಸದಸ್ಯ ಎಂ.ನಂಜುಂಡಸ್ವಾಮಿ, ವೃತ್ತಿ ನಿರತ ಪತ್ರ ಬರಹಗಾರರಾದ ಎಂ.ಶಿವಸ್ವಾಮಿ, ಹೆಚ್. ಅನಂತೇಗೌಡ, ಎನ್.ರವಿಶಂಕರ್, ಎನ್.ಗೌರಿಶಂಕರ್, ಸಿದ್ದು, ಎ.ಎಂ.ರಮೇಶ್ ಆರಾಧ್ಯ, ನಂಜಯ್ಯ, ಮಹದೇವಯ್ಯ, ಬಿ.ರೇವಣ್ಣ, ಗವಿಸಿದ್ದಯ್ಯ, ಕೆ.ಶೇಷಣ್ಣ ನಾಗರಾಜು, ರಾಜೇಂದ್ರ ಸುಬ್ರಹ್ಮಣ್ಯ ಮೂರ್ತಿ, ಚಂದ್ರಮೋಹನ್, ಶಂಕರೇಗೌಡ, ಬಸವರಾಜು, ಕಂಪ್ಯೂಟರ್ ವಿಭಾಗದ ವೈನಾಗರಾಜು, ಎಂ.ಮಲ್ಲಿಕಾರ್ಜುನ, ಎಸ್.ಶಿಲ್ಪ, ವನಜಾಕ್ಷಿ, ಎಂ.ಕೆ.ಸಹದೇವ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11.15ಕ್ಕೆ, ದಿ ಬ್ಯಾಡ್ ಗಾಯ್ಸ್ (3ಡಿ)(ಇಂ): ಮ.1.45ಕ್ಕೆ, ರಾ.9.55ಕ್ಕೆ, ಕೆಜಿಎಫ್ 2 (ಕ): ಸಂ.4ಕ್ಕೆ, ಧಾಕಾಡ್(ಹಿಂ): ರಾ.7.20ಕ್ಕೆ.
ಸ್ಕ್ರೀನ್ 2	ಗರುಡ(ಕ): ಬೆ.10.20ಕ್ಕೆ, ಪ್ರಾರಂಭ (ಕ): ಮ.1.10ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.15ಕ್ಕೆ, ಸಕುಟುಂಬ ಸಮೇತ (ಕ): ರಾ.7.30ಕ್ಕೆ, ಜೊ & ಜೊ(ಮ): ರಾ.9.50ಕ್ಕೆ.
ಸ್ಕ್ರೀನ್ 3	ಅಂಗರ್ (ಕ): ಬೆ.10.45ಕ್ಕೆ, ನೆಂಜುಕು ನೀದಿ (ತ): ಮ.1.30ಕ್ಕೆ, ಅವತಾರ ಪುರುಷ (ಕ): ಸಂ.4.15ಕ್ಕೆ, ಕೆಜಿಎಫ್ 2(ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಸಂ.4.35ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಬೂಲ್ ಬುಲಾಯ್ಯ (ಹಿಂ): ರಾ.7ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ದಿ ಬ್ಯಾಡ್ ಗಾಯ್ಸ್ (3ಡಿ)(ಹಿಂ): ಬೆ.11ಕ್ಕೆ, ರಾ.7.30ಕ್ಕೆ, ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಮ.1.15ಕ್ಕೆ, ಕೆಜಿಎಫ್ 2(ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಬೂಲ್ ಬುಲಾಯ್ಯ 2(ಹಿಂ): ಬೆ.9.45ಕ್ಕೆ, ಮ.12.45, ಸಂ.6.35ಕ್ಕೆ, ರಾ.9.40ಕ್ಕೆ, ಧಾಕಾಡ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 3	ಸಾರ ವಜ್ರ (ಕ): ಬೆ.10.40ಕ್ಕೆ, ಗರುಡ (ಕ): ಮ.1.25ಕ್ಕೆ, ಪ್ರಾರಂಭ (ಕ): ಸಂ.4.25ಕ್ಕೆ, ಅವತಾರ ಪುರುಷ (ಕ): ರಾ.7.15ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.10ಕ್ಕೆ, ಸಕುಟುಂಬ ಸಮೇತ (ಕ): ಮ.1.30ಕ್ಕೆ, ನೆಂಜಕು ನೀದಿ (ತ): ಮ.3.55ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.55ಕ್ಕೆ, ಜೊ & ಜೊ (ಮ): ರಾ.9.30ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕಟಿಂಗ್ ಶಾಪ್ (ಕ): ಬೆ.10.55ಕ್ಕೆ, ಪ್ರಾರಂಭ (ಕ): ಮ.1.25ಕ್ಕೆ, ಸಕುಟುಂಬ ಸಮೇತ (ಕ): ಸಂ.4.30ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಕಂಡ್ಡಿಡಿ ನೋಡನ (ಕ): ಮ.1.15ಕ್ಕೆ, ಕೆಜಿಎಫ್ 2 (ಕ): ಸಂ.4.30ಕ್ಕೆ, ರಾ.7.45ಕ್ಕೆ,
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಸಂ.6.45ಕ್ಕೆ,
ಸ್ಕ್ರೀನ್ 4	ಅಂಗರ್ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.10ಕ್ಕೆ, ಧಾಕಾಡ್ (ಹಿಂ): ಮ.3.50ಕ್ಕೆ, ನೆಂಜಕು ನೀದಿ (ತ): ಸಂ.6.20ಕ್ಕೆ, ಡಾನ್ (ತ): ರಾ.9ಕ್ಕೆ

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್(ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್(ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪ್ರೀತ್ಸು (ಕ)	2 ಪ್ರದರ್ಶನಗಳು
ಎಫ್ 3 (ತೆ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನೇಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಣೆಯಾದವರ ಬಗ್ಗೆ ಪ್ರಕಟಣೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವ್ಹೀಲ್ ಚೇರ್ ರೋಮಿಯೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಎಫ್ 3 (ತೆ)	4 ಪ್ರದರ್ಶನಗಳು
ಸಂಗಂ	
ಕಾಣೆಯಾದವರ ಬಗ್ಗೆ ಪ್ರಕಟಣೆ (ಕ)	4 ಪ್ರದರ್ಶನಗಳು
ಲಿಡೋ	
ಕಿರಿಕ್ ಶಂಕರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಿರಿಕ್ ಶಂಕರ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಸೀತಾಯನ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು

ಚಿರತೆ ದಾಳಿ: ಕರು ಸಾವು

ಹನಗೋಡು, ಜೂ.1(ಮಹೇಶ್)– ಚಿರತೆ ದಾಳಿಯಿಂದ ಕರು ಸಾವನ್ನಪ್ಪಿರುವ ಘಟನೆ ಸಮೀಪದ ಮುದಗನೂರು ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ

ಗ್ರಾಮದ ರಾಜೇಗೌಡರಿಗೆ ಸೇರಿದ ಕರು ಮೃತಪಟ್ಟಿದೆ. ಇವರು ಎಂದಿನಂತೆ ಕೊಟ್ಟಿಗೆಯಲ್ಲಿ ಕರುವನ್ನು ಕಟ್ಟಿಹಾಕಿದ್ದರು. ಮಂಗಳವಾರ ರಾತ್ರಿ ಕೊಟ್ಟಿಗೆಗೆ ನುಗ್ಗಿದ ಚಿರತೆ ಕರುವಿನ ಮೇಲೆ ದಾಳಿ ಮಾಡಿ ಕೊಂದು ಹಾಕಿದೆ. ಸ್ಥಳಕ್ಕೆ ವೀರನಹೊಸಹಳ್ಳಿ ವನ್ಯಜೀವಿ ವಿಭಾಗದ ಅರಣ್ಯ ಸಿಬ್ಬಂದಿ ಚಂದ್ರೇಶ್ ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು. ಚಿರತೆ ಸೆರೆ ಹಿಡಿಯಲು ಬೋನ್ ಇರಿಸಲಾಗುವುದು ಎಂದು ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಅಧ್ಯಕ್ಷ ಎಂ.ಅಪ್ಪಣ್ಣ ಹುಟ್ಟುಹಬ್ಬ

ಹೆಚ್.ಡಿ.ಕೋಟೆ– ಸರಗೂರಿನಲ್ಲಿ ವಿವಿಧ ಸೇವಾ ಕಾರ್ಯ



ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಲಾಯಿತು.

ಹೆಚ್.ಡಿ.ಕೋಟೆ, ಜೂ.1(ಮಂಜು)– ಕರ್ನಾಟಕ ರಾಜ್ಯ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಅಧ್ಯಕ್ಷ ಎಂ.ಅಪ್ಪಣ್ಣ ಅವರ ಹುಟ್ಟುಹಬ್ಬವನ್ನು ಹೆಚ್.ಡಿ.ಕೋಟೆ, ಸರಗೂರಿನಲ್ಲಿ ಬುಧವಾರ ಬಿಜೆಪಿ ಘಟಕ ದಿಂದ ವಿವಿಧ ಸೇವಾ ಕಾರ್ಯ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೊದಲಿಗೆ ಹೆಚ್.ಡಿ.ಕೋಟೆ ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ ಪಕ್ಷದ ಮುಖಂಡರು, ಆಸ್ಪತ್ರೆ ಆವರಣದಲ್ಲಿ ಕೇಕ್ ಕತ್ತರಿಸಿ ಸಿಹಿ ಹಂಚಿದರು. ನಂತರ ಆಸ್ಪತ್ರೆ ಒಳ ರೋಗಿಗಳಿಗೆ ಹಣ್ಣು–ಹಂಪಲ, ಬ್ರೆಡ್ ವಿತರಿಸಿದರು.

ಈ ವೇಳೆ ತಾಲೂಕು ಬಿಜೆಪಿ ಘಟಕದ ಅಧ್ಯಕ್ಷ ಗುರುಸ್ವಾಮಿ ಮಾತನಾಡಿ, ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಅಪ್ಪಣ್ಣ ಅವರು ಬಡವರಿಗೆ, ನಿರ್ಗತಿಕರಿಗೆ ನೆರವಾಗುವ ಮೂಲಕ ಸಹಾಯಕ್ಕೆ ಬಂದರು. ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ರೋಗಿಗಳ ಅಂತಿಮ ಸಂಸ್ಕಾರದಲ್ಲಿ ಭಾಗಿಯಾಗಿ ಕುಟುಂಬಸ್ಥರ ಬೆನ್ನೆಲುಬಾಗಿ ನಿಂತರು. ಕೊರೊನಾ ಸೋಂಕು ತಗುಲಿ ಚಿಕಿತ್ಸೆ ಪಡೆಯಲಾಗದವರಿಗೆ ಅಪ್ಪಣ್ಣ ಅವರು ಚಿಕಿತ್ಸೆ ವೆಚ್ಚ ಭರಿಸಿ ನೆರವಾದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕಿನಲ್ಲಿ ಅಭಿವೃದ್ಧಿ ಕೆಲಸ ಮಾಡುವ ನಿಟ್ಟಿನಲ್ಲಿ ತೊಡಗಿಕೊಂಡು ಪಕ್ಷ ಸಂಘಟನೆ ಮಾಡುವ ಕೆಲಸದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿದ್ದರು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಬಸವರಾಜಪ್ಪ, ಹೆಚ್.ಸಿ.ಲಕ್ಷ್ಮಣ್, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿವೇಕ್, ಚನ್ನಪ್ಪ, ಟೌನ್ ಅಧ್ಯಕ್ಷ ನಂದೀಶ, ಎಸ್‌ಸಿ ಘಟಕದ ಅಧ್ಯಕ್ಷ ರಾಜು, ಜಿಲ್ಲಾ ಹಿಂದುಳಿದ ವರ್ಗದ ಮುಖಂಡ ಅಕ್ರಂ ಪಾಷ, ಮಂಜು, ಸತೀಶ, ಪುಟ್ಟರಾಜು, ನಾಮ ನಿರ್ದೇಶಕ ಸದಸ್ಯ ಮಹೇಶ, ಸಿದ್ದರಾಜು, ಸಂತೋಷ್, ಲೋಕೇಶ್, ಶಿವಸ್ವಾಮಿ, ಶಿವರಾಜಪ್ಪ, ಮಲಿಕಾರ್ಜುನ, ನಟರಾಜು, ಪ್ರಭಾಕರ್, ಸ್ವಾಮಿ, ದೊಡ್ಡಸಿದ್ದು, ರಾಮಚಂದ್ರ, ಅಪ್ಪಣ್ಣ ಆಪ್ತ ಕಾರ್ಯದರ್ಶಿ ಮಹೇಶ, ರವಿ, ಸಿದ್ದರಾಜು, ಮಂಜು, ಮಾದೇವಪ್ಪ, ಕುಮಾರ, ಸಿದ್ದು, ಜವರಯ್ಯ ಗೋಪಾಲಯ್ಯ, ಸೋಮು, ರಾಜೇಂದ್ರ, ಡಾ.ಪೂರ್ಣಿಮಾ ಆರೋಗ್ಯ ಇಲಾಖೆ ಸಿಬ್ಬಂದಿ ಇದ್ದರು.



ಹೆಚ್.ಡಿ.ಕೋಟೆಯ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಬಿಜೆಪಿ ಕಾರ್ಯಕರ್ತರು ಕೇಕ್ ಕತ್ತರಿಸುವ ಮೂಲಕ ಎಂ.ಅಪ್ಪಣ್ಣ ಹುಟ್ಟುಹಬ್ಬ ಆಚರಿಸಿದರು.

ಬಡವರು, ರೋಗಿಗಳಿಗೆ ಹಾಲು ಹಣ್ಣು ವಿತರಣೆ



ಸರಗೂರು, ಜೂ.1(ನಾಗೇಶ್)– ಕರ್ನಾಟಕ ರಾಜ್ಯ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ ಅಧ್ಯಕ್ಷ ಎಂ.ಅಪ್ಪಣ್ಣ ಅವರ ಹುಟ್ಟುಹಬ್ಬದ ಪ್ರಯುಕ್ತ ಸರಗೂರಿನಲ್ಲಿ ಬುಧವಾರ ಬಿಜೆಪಿ ಘಟಕದಿಂದ ವಿವಿಧ ಸೇವಾ ಕಾರ್ಯಗಳನ್ನು ಮಾಡಲಾಯಿತು.

ಮೊದಲಿಗೆ ಬಿಜೆಪಿ ಕಾರ್ಯಕರ್ತರು ಪಟ್ಟಣದ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಪಟ್ಟಣದ ಸಾರ್ವಜನಿಕರ ಆಸ್ಪತ್ರೆ ಹಾಗೂ ಸ್ವಾಮಿ ವಿವೇಕಾನಂದ ಆಸ್ಪತ್ರೆಗಳಿಗೆ ಭೇಟಿ ನೀಡಿ ರೋಗಿಗಳು ಹಾಗೂ ಬಡವರಿಗೆ ಹಾಲು, ಹಣ್ಣು ವಿತರಿಸಿದರು.

ಈ ವೇಳೆ ಬಿಜೆಪಿ ಮುಖಂಡರಾದ ಹಂಚೀಪುರ ಗಣಪತಿ, ಮನುಗನಹಳ್ಳಿ ಎಂ.ಪಿ.ಮಂಜುನಾಥ್, ಮೊತ್ತ ಬಸವರಾಜು, ಕೋಟೆ ಲಕ್ಷ್ಮಣ, ಸುನಂದರಾಜ್, ಗುರುಸ್ವಾಮಿ, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ವೀರೇಶ್, ರಾಮು, ನವೀನ್, ಪ್ರಕಾಶ್, ಸೋಮನಾಯಕ, ಕುಮಾರ, ಶಂಭು, ಚನ್ನಪ್ಪ, ಸಿದ್ದಪಾಜಿ, ಡಾ.ಪ್ರಾರ್ಥಸಾರಥಿ, ಪುಟ್ಟರಾಜು ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ಹೈಬ್ರೀಡ್, ರೋಬೋಟಿಕ್ ಮೆಟಲ್ 3ಡಿ ಪ್ರಿಂಟಿಂಗ್ ತಂತ್ರಜ್ಞಾನ ಒಳಗೊಂಡಿರುವ

ದೇಶದ ಪ್ರಪ್ರಥಮ ಫೋಟಾನ್-1000 ಎಚ್, ಫೋಟಾನ್-1000 ಆರ್ ಸಾಧನಗಳ ಬಿಡುಗಡೆ

ಬೆಂಗಳೂರು, ಜೂ.01 (ಕೆಎಂಶಿ)-ಅತ್ಯಾಧುನಿಕ ಲೇಸರ್ ಡಿಇಡಿ ಆಧಾರಿತ ಹೈಬ್ರೀಡ್ ಮತ್ತು ರೋಬೋಟಿಕ್ ಮೆಟಲ್ 3ಡಿ ಪ್ರಿಂಟಿಂಗ್ ತಂತ್ರಜ್ಞಾನವನ್ನು ಒಳಗೊಂಡ ಭಾರತದ ಪ್ರಪ್ರಥಮ ಫೋಟಾನ್-1000ಎಚ್ ಮತ್ತು ಫೋಟಾನ್-1000ಆರ್ ಸಾಧನಗಳನ್ನು ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಅಶ್ವತ್ಥನಾರಾಯಣ ಬಿಡುಗಡೆ ಮಾಡಿದ್ದಾರೆ.

ಈ ಅಂಗವಾಗಿ ಬಿಎಫ್‌ಡಬ್ಲ್ಯು ಮತ್ತು ಎಂ2ನೆಕ್ಸ್ಟ್ ಕಂಪನಿಗಳು ಪೀಣ್ಯದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅವರು, ಈ ಕ್ಷೇತ್ರದ ಬೆಳವಣಿಗೆಗೆ ಅಗತ್ಯವಾಗಿರುವ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲು ಬೇಕಾದ ಅಗತ್ಯ ನೆರವನ್ನು ನೀಡಲು ರಾಜ್ಯ ಸರಕಾರ ಸಿದ್ಧವಾಗಿದೆ ಎಂದರು.

'ದೇವನಹಳ್ಳಿಯ ವಿಮಾನ ನಿಲ್ದಾಣದ ಪಕ್ಕದಲ್ಲೇ 5 ಎಕರೆ ಪ್ರದೇಶದಲ್ಲಿ 60 ಸಾವಿರ ಚದರಡಿ ವಿಸ್ತೀರ್ಣದ ಅತ್ಯಾಧುನಿಕ ಏರೋಸ್ಪೇಸ್ ಪಾರ್ಕ್ ತಲೆಯೆತ್ತುತ್ತಿದ್ದು, ಈ ವರ್ಷದ ಸೆಪ್ಟೆಂಬರ್ ಹೊತ್ತಿಗೆ ಇದರ ಕಾಮಗಾರಿ ಮುಗಿಯಲಿದೆ. ಈ ಕಟ್ಟಡದಲ್ಲಿ ಲೇಸರ್ ಡಿಇಡಿ ಮತ್ತು ರೋಬೋಟಿಕ್ ಮೆಟಲ್ ತ್ರೀ-ಡಿ ಪ್ರಿಂಟಿಂಗ್ ಕ್ಷೇತ್ರಕ್ಕೆ ಅಗತ್ಯವಿರುವ



ಜಾಗವನ್ನು ಒದಗಿಸಲಾಗುವುದು ಎಂದರು.

ರಾಜ್ಯದಲ್ಲಿ ಈಗಾಗಲೇ ಇಂಡಸ್ಟ್ರಿ 4.0 ಉಪಕ್ರಮವನ್ನು ಆರಂಭಿಸಲಾಗಿದೆ. ಅಡಿಟೀವ್ ತಂತ್ರಜ್ಞಾನದಲ್ಲಿ ರಾಜ್ಯವು ಮುಂದಿದ್ದು, ಭವಿಷ್ಯದಲ್ಲಿ ಈ ಕ್ಷೇತ್ರದಲ್ಲೂ ದೇಶದ ರಾಜಧಾನಿಯಾಗಿ ಹೊರಹೊಮ್ಮಲಿದೆ. ಈ ಕ್ಷೇತ್ರದಲ್ಲಿ 35 ದಶಲಕ್ಷ ಡಾಲರ್ ವಹಿವಾಟು ನಡೆಯುತ್ತಿದ್ದು, ಸದ್ಯಕ್ಕೆ ಭಾರತದಲ್ಲಿ ಕೇವಲ ಒಂದು ದಶಲಕ್ಷ ಡಾಲರ್ ವಹಿವಾಟು ಮಾತ್ರ ನಡೆಯುತ್ತಿದೆ. ಫೋಟಾನ್ ತಂತ್ರಜ್ಞಾನವುಳ್ಳ ಒಂದು ಯಂತ್ರದ ಮೂಲಕ 3,500 ಕೋಟಿ ರೂ. ವಹಿವಾಟು ನಡೆಸಬಹುದು ಎಂದರು.

ಇದನ್ನೆಲ್ಲ ಗಮನದಲ್ಲಿ ಇಟ್ಟುಕೊಂಡೇ ರಾಜ್ಯದಲ್ಲಿ ಪಾಲಿಟೆಕ್ನಿಕ್, ಡಿಪ್ಲೊಮಾ ಮತ್ತು ಎಂಜಿನಿಯರಿಂಗ್ ಶಿಕ್ಷಣವನ್ನು ಸಮಗ್ರವಾಗಿ ಸುಧಾರಿಸಲಾಗಿದೆ. ರಾಜ್ಯದಲ್ಲಿ ಸದ್ಯಕ್ಕೆ ಕ್ರಮವಾಗಿ 1 ಲಕ್ಷ ವಿದ್ಯಾರ್ಥಿಗಳು ಪಾಲಿಟೆಕ್ನಿಕ್, 70 ಸಾವಿರ ವಿದ್ಯಾರ್ಥಿಗಳು ಡಿಪ್ಲೊಮಾ ಮತ್ತು 15 ಸಾವಿರ ವಿದ್ಯಾರ್ಥಿಗಳು ಜಿಟಿಟಿಸಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂದರು. ತಂತ್ರಜ್ಞಾನದ ಮೂಲಕ ಆತ್ಮನಿರ್ಭರ ಭಾರತವನ್ನು ಕಟ್ಟಬೇಕೆನ್ನುವುದು ಮೋದಿಯವರ ಆಶಯವಾಗಿದೆ. ಇದಕ್ಕೆ ತಕ್ಕಂತೆ, ಈ ಕಂಪನಿಗಳು ಬೆಂಗಳೂರಿನ ತಂತ್ರಜ್ಞಾನ ಕ್ಷೇತ್ರಕ್ಕೆ ತಮ್ಮ ಅತ್ಯಾಧುನಿಕ ಸಾಧನಗಳನ್ನು ಪರಿಚಯಿಸಿವೆ. ರಾಜ್ಯದಲ್ಲಿ ಜಾರಿಯಾಗುತ್ತಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಇಂತಹ ಆಧುನಿಕ ಜ್ಞಾನಧಾರೆಗಳ ಲಾಭವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲಾಗುವುದು ಎಂದು ಸಚಿವರು ಪ್ರತಿಪಾದಿಸಿದ್ದಾರೆ.



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಉದ್ಯಮಿ ರಮೇಶ್‌ಗೌಡ ಅವರಿಗೆ ಸ್ವೀಟ್ ಮಹೇಶ್, ಬಿಜೆಪಿ ಮುಖಂಡ ಚೌಡಪ್ಪ ಹಾಗೂ ಸ್ನೇಹಿತರು ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.

ಹಾಕಿ ಏಷ್ಯಾ ಕಪ್ 2022: ಭಾರತಕ್ಕೆ ಕಂಚಿನ ಪದಕ

ನವದೆಹಲಿ: ಹಾಕಿ ಏಷ್ಯಾ ಕಪ್‌ನಲ್ಲಿ ಭಾರತದ ರಾಜ್‌ಕುಮಾರ್ ಪಾಲ್ ಬಾರಿಸಿದ ಸೊಗಸಾದ ಗೋಲಿನ ನೆರವಿಂದ ಭಾರತವು 1-0 ಗೋಲುಗಳಿಂದ ಜಪಾನ್ ತಂಡವನ್ನು ಸೋಲಿಸಿ ಕಂಚಿನ ಪದಕ ಗೆದ್ದುಕೊಂಡಿತು. ಜಕಾರ್ತಾನ ಹಾಕಿ ಕ್ರೀಡಾಂಗಣದಲ್ಲಿ ಇಂದು ಕಂಚಿನ ಪದಕಕ್ಕಾಗಿ ಹೋರಾಟ ನಡೆಸಿದ ಭಾರತ ಮೊದಲ ಕ್ವಾರ್ಟರ್‌ನಲ್ಲಿಯೇ ಗೋಲು ಗಳಿಸಿ ಮುನ್ನಡೆ ಸಾಧಿಸಿತು. ಪಂದ್ಯದ ಆರಂಭದಲ್ಲಿ ತಂಡವು ಒಂದು ಗೋಲಿನಿಂದ ಮುನ್ನಡೆ ಸಾಧಿಸಿತು, ನಂತರದಲ್ಲಿ ಜಪಾನಿನ ಯಾವುದೇ ಸಂಭಾವ್ಯ ದಾಳಿಗೆ ಆಸ್ಪದ ನೀಡದೇ ಪಂದ್ಯವನ್ನು ಕೈವಶ ಮಾಡಿಕೊಳ್ಳುವಲ್ಲಿ ಭಾರತ ತಂಡ ಯಶಸ್ವಿಯಾಯಿತು. ಹಾಲಿ ಚಾಂಪಿಯನ್ ಕೊರಿಯಾ ವಿರುದ್ಧ ರೋಚಕ 4-4 ಡ್ರಾ ನಂತರ ಟೂರ್ನಿಯ ಫೈನಲ್ ಪ್ರವೇಶಿಸಲು ಭಾರತವು ವಿಫಲವಾಯಿತು. ಸೂಪರ್ 4ರ ಪೂಲ್ ಟೇಬಲ್‌ನಲ್ಲಿ ಗೋಲುಗಳ ವ್ಯತ್ಯಾಸದಿಂದಾಗಿ ಭಾರತ ಫೈನಲ್‌ಗೆ ಪ್ರವೇಶಿಸುವ ಅವಕಾಶ ಕಳೆದುಕೊಂಡಿತ್ತು. ಇದೀಗ ಕಂಚಿನ ಪದಕಕ್ಕೆ ತೃಪ್ತಿ ಪಟ್ಟಿದೆ.

ನಾಳೆ ರೋಗಮೋಚನ ಶ್ರೀ ಧನ್ವಂತರಿ ಪ್ರತಿಷ್ಠಾಪನಾ ಪ್ರಥಮ ವಾರ್ಷಿಕೋತ್ಸವ

ಮೈಸೂರು, ಜೂ.1-ನಗರದ ಶ್ರೀಮದುತ್ತರಾದಿ ಮಠದಲ್ಲಿ ಜೂ.3ರಂದು ರೋಗಮೋಚನ ಶ್ರೀ ಧನ್ವಂತರಿ ಪ್ರತಿಷ್ಠಾಪನಾ ಪ್ರಥಮ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಿದ್ದು, ಅಂದು ಬೆಳಗ್ಗೆ ಶ್ರೀ ಮದುತ್ತರಾದಿ ಮಠಾಧೀಶರಾದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಅಂದು ಬೆಳಿಗ್ಗೆ 7 ಗಂಟೆಗೆ ಭಕ್ತಾದಿಗಳಿಗೆ ತಪ್ತ ಮುದ್ರಾಧಾರಣೆ, ಬೆಳಿಗ್ಗೆ 9 ಗಂಟೆಗೆ ಧನ್ವಂತರಿ ದೇವರಿಗೆ ಚತುರ್ವೇದ ಅಭಿಮಂತ್ರಿತವಾದ 108 ಕೆ.ಜಿ. ತುಪ್ಪದ ಮಹಾಭಿಷೇಕ, ನಂತರ ಸಂಸ್ಥಾನ ಪೂಜೆ, ಶ್ರೀಪಾದಂಗಳವರ ಅನುಗ್ರಹ ಸಂದೇಶ, ತೀರ್ಥ ಪ್ರಸಾದ ವಿನಿಯೋಗವಿರುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀಪಾದಂಗಳವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಮೈಸೂರು ಶ್ರೀಮದುತ್ತರಾದಿ ಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.